ಯಾರು ಸದಾ ಕೆಣಕುವುದು, ಇತರರಿಗೆ ಸದಾ ಉಪದೇಶವನ್ನು ನೀಡುತ್ತಾ, ಹಾಗೆ ಮಾಡು ಹೀಗೆ ಮಾಡು ಎನ್ನುತ್ತಿರುವುದು, ಸುಳ್ಳು ಹೇಳುವುದು, ಗಾಳಿಸುದ್ದಿ ಹಬ್ಬಿಸುವುದು, ಮಾತಿನಿಂದ ಚುಚ್ಚುವುದು, ವಟವಟ ಎನ್ನುತ್ತಾ ಇರುವುದು ಹೀಗೆಲ್ಲಾ ಮಾಡುತ್ತಿದ್ದರೆ, ಅವರೊಂದಿಗೆ ಮಾತನ್ನು ಮುಂದುವರಿಸಲೇ ಬಾರದು. ಅವರು ನೀವು ಹೇಳಿದ್ದನ್ನು, ರೆಕ್ಕೆಪುಕ್ಕ ಸೇರಿಸಿ ಬಾಲ ಕಟ್ಟಿ ಇನ್ನೊಬ್ಬರಿಗೆ ಹೇಳುತ್ತಾರೆ. ವಿಷವನ್ನು ಇನ್ನಷ್ಟು ಕಕ್ಕುತ್ತಾರೆ. ಹೀಗೆ ತಮ್ಮ ಮಾನಮರ್ಯಾದೆಯನ್ನೇ ಹೊರಹಾಕುತ್ತಾರೆ. ಹೀಗೆ ವಿಶುದ್ಧ ಚಕ್ರವು ಅವರಲ್ಲಿ ಮುಚ್ಚಿಕೊಳ್ಳುತ್ತಾ ಒಂದು ದಿನ ಸಂಪೂರ್ಣವಾಗಿ ಅಡಗಿಹೋಗುತ್ತದೆ. ಅಂತಹವರಿಗೆ ವೇದಿಕೆಯಲ್ಲಿ ಮಾತನಾಡಲು ಆಗುವುದಿಲ್ಲ, ನಾಲ್ಕು ಜನ ಇರುವಾಗ ಧೈರ್ಯದಿಂದ ಎಲ್ಲರ ಮನಮೆಚ್ಚುವ ಮಾತುಗಳನ್ನೂ ಸಹಾ ಆಡಲಾಗುವುದಿಲ್ಲ.

ನೀವು ನಿಮ್ಮೊಳಗೆ ಉಂಟಾಗುವ ವಿಪ್ಲವಗಳನ್ನು ಶಮನ ಮಾಡಿಕೊಂಡು ಮಾತನಾಡುವುದು ಮುಖ್ಯ. ಹಾಗಂತಾ ಖಂಡಿತವಾಗಿ ಸತ್ಯವನ್ನು ಹೇಳದೇ ಉಳಿಯಬಾರದು. ಸತ್ಯವನ್ನು ಕಟುವಾಗಿ ಹೇಳದೇ ಮೃದುವಾಗಿ ನಗುತ್ತಾ ಹೇಳುವುದನ್ನು ಕಲಿಯಿರಿ.

ಉದಾಹರಣೆಗೆ; ಸ್ವಾಮಿ ವಿವೇಕಾನಂದರಲ್ಲಿ ಎಲ್ಲಾ ಚಕ್ರಗಳೂ ಜಾಗೃತವಾಗಿದ್ದವು. ಅದರಲ್ಲೂ ವಿಶುದ್ಧ ಚಕ್ರವಂತೂ ತನ್ನ ಉತ್ತುಂಗತೆಯನ್ನು ತಲುಪಿತ್ತು. ಅವರ ಧ್ವನಿ ಮತ್ತು ಮಾತುಗಳಲ್ಲಿ ಮೂಡುತ್ತಿದ್ದ ಶಬ್ದಗಳ ಜೋಡಣೆ ಅದ್ವಿತೀಯವಾಗಿತ್ತು. ಆಕರ್ಷಣೆಯಂತೂ ಜಗತ್ತನ್ನೇ ಬೆರಗುಗೊಳಿಸಿತ್ತು.

ಲತಾ ಮಂಗೇಶ್ಕರ್‌ರವರ ಕಂಠದಲ್ಲಿ ಸಾಕ್ಷಾತ್ ಸರಸ್ವತಿಯೇ ನೆಲೆಸಿದ್ದಾಳೆ ಎನ್ನುವಷ್ಟರ ಮಟ್ಟಿಗೆ ಆಕೆಯ ಕಂಠ ಜಗತ್ ಪ್ರಸಿದ್ಧಿಯನ್ನು ಪಡೆಯಿತು. ಅದೊಂದು ದೈವಿಕ ಶಕ್ತಿಯಾಗಿ ಬದಲಾಗಿತ್ತು. ಅದು ನೈಸರ್ಗಿಕವಾಗಿ ಸಿಕ್ಕ ಬಳುವಳಿಯಾಗಿತ್ತು. ಆಕೆ ಸಂಗೀತವನ್ನೇ ತಪಸ್ಸಾಗಿ ಮಾಡಿಕೊಂಡು ತಮ್ಮ ಕಂಠವನ್ನು ತಿದ್ದಿ ತೀಡಿ ಮಾಡಿದ್ದರು. ಆ ತಪಸ್ಸಿನ ಫಲವೇ ಕಂಠ ಶುದ್ಧಿ ಮತ್ತು ಸರಸ್ವತಿಯ ನೆಲೆಯಾಗಿ ಮಾರ್ಪಾಟಾಗಿದ್ದು. ವಿಶುದ್ಧ ಚಕ್ರವು ಅವರಲ್ಲಿ ಎಂದಿಗೂ ಅಸಮತೋಲನವಾಗಲೇ ಇಲ್ಲ.

ಕರ್ನಾಟಕ ಸಂಗೀತ ಶಿರೋಮಣಿ ಎಮ್. ಎಸ್. ಸುಬ್ಬುಲಕ್ಷ್ಮಿಯವರ ಸುಪ್ರಭಾತವನ್ನು ಕೇಳದವರೇ ಇಲ್ಲ. ಇಂದಿನ ಪೀಳಿಗೆ ಸಹಾ ಅದೇ ಸುಪ್ರಭಾತವನ್ನೇ ಕೇಳುತ್ತಾ ಬೆಳಕಾಗುವುದನ್ನು ಕಾಣುತ್ತಿದೆ. ಅದನ್ನು ಕೇಳುತ್ತಾ ಬೆಳಗಿನ ಮನಸ್ಸಿನ ಶಾಂತಿಯನ್ನು, ಆಧ್ಯಾತ್ಮಿಕವಾದ ಅನುಭೂತಿಯನ್ನು ನೀವು ಪಡೆಯುತ್ತೀರಿ. ಇದಕ್ಕೆ ಕಾರಣ ಅವರ ಕಂಠದ ಮಹಿಮೆ; ವಿಶುದ್ಧ ಚಕ್ರದ ಪ್ರಭಾವ.

ಭಾರತಕ್ಕೆ ಸಾಹಿತ್ಯದ ನೊಬೆಲ್ ಪ್ರಶಸ್ತಿಯನ್ನು ತಂದು ಕೊಟ್ಟ ಮಹಾ ಕವಿ ರವೀಂದ್ರನಾಥ್ ಟ್ಯಾಗೋರ್‌ರವರು ಸೃಜನಶೀಲತೆಯ ಪ್ರತೀಕ. ಅವರ ಸಂಗೀತವಂತೂ ಇಂದಿಗೂ ಸಹಾ ವಿಭಿನ್ನ ಪ್ರಕಾರವಾಗಿ ಗುರುತಿಸಲಾಗಿದೆ. ವಿಶುದ್ಧ ಚಕ್ರದ ಉತ್ತುಂಗದ ಕಾರಣಕ್ಕೆ ಇವರು ಜಗತ್ಪ್ರಸಿದ್ಧರಾದರು.

ಸತ್ಯದ ಶಕ್ತಿಯನ್ನು ದೇಶವಿದೇಶಗಳಲ್ಲಿ ಪ್ರತಿಪಾದಿಸುತ್ತಾ ಪ್ರಖ್ಯಾತರಾದವರು ಗಾಂಧಿಯವರು. ತಮ್ಮ ಮಾತು ಮತ್ತು ಬರಹಗಳ ಮೂಲಕ ಕೋಟ್ಯಾಂತರ ಜನರನ್ನು ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರೆತಂದವರು. ಅಂದು ಉಪ್ಪಿನ ಸತ್ಯಾಗ್ರಹಕ್ಕಾಗಿ ಅರಬ್ಬಿ ಸಮುದ್ರ ತೀರದಲ್ಲಿ ಸೇರಿದ ಜನರನ್ನು ನೋಡಿ ಬ್ರಿಟಿಶ್ ಲೇಖಕಿ ಬರ್ಕ್ ವೈಟ್‌ರವರು ಫೋಟೋ ತೆಗೆಯುತ್ತಾ ಉದ್ಗರಿಸುತ್ತಾರೆ '' ಅತ್ತ ಅರಬ್ಬಿ ಸಮುದ್ರ ವಿಶಾಲವಾಗಿ ದಿಗಂತದ ಅಂಚನ್ನು ಮುಟ್ಟಿದರೆ, ಇತ್ತ ಜನ ಸಮುದ್ರ ಅರಬ್ಬಿ ಸಮುದ್ರಕ್ಕಿಂತಲೂ ಹೆಚ್ಚು ಎನ್ನುವಷ್ಟು ವಿಶಾಲವಾಗಿ ಮತ್ತೊಂದು ತುದಿ ಕಾಣದಷ್ಟಿತ್ತು. ಅಬ್ಬಾ ಅವರ ಶಕ್ತಿಯೇ, ಬ್ರಿಟೀಶರೇಕೆ ಇಡೀ ಪ್ರಪಂಚವೇ ಅವರತ್ತ ತಿರುಗಿ ನೋಡುವಂತೆ ಮಾಡಿದ ಸನ್ನಿವೇಶವದು. ಅಂತಹಾ ಶಕ್ತಿಯ ಸಂಚಲನಕ್ಕೆ ಕಾರಣ ಅವರಲ್ಲಿ ಜಾಗೃತವಾದ ವಿಶುದ್ಧ ಚಕ್ರದ ಪವಾಡ. ಪರಿಶುದ್ಧ ವಿಶುದ್ಧ ಚಕ್ರವು ಸತ್ಯದ ಪ್ರತಿಪಾದನೆ ಮತ್ತು ಸತ್ಯಕ್ಕಾಗಿ ಉಪವಾಸ ಸತ್ಯಾಗ್ರಹವನ್ನು ಮಾಡುವುದಕ್ಕೆ ಪ್ರೇರೇಪಣೆಯನ್ನು ನೀಡುತ್ತವೆ.

ಇಂದಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಅತ್ಯಂತ ಹೆಚ್ಚು ಅವಧಿಯವರೆಗೆ ಭಾರತವನ್ನು ಆಳಿದ ಪ್ರಧಾನಿಯೆಂದು ದಾಖಲೆ ಬರೆದರು. ಕಾರಣ ತಮ್ಮ ಅದ್ಭುತವಾದ ಭಾಷಣ ಕಲೆ, ಸಂಮೋಹನ ಶೈಲಿಯಿಂದ ಜಗತ್ತನ್ನೇ ಆಕರ್ಷಿಸುತ್ತಿದ್ದಾರೆ. ಜಗತ್ತಿನ ನಾಯಕರಾಗಿದ್ದಾರೆ. ವಿಶುದ್ಧ ಚಕ್ರವು ಪ್ರಬಲವಾಗಿದ್ದರೆ ಮಾತ್ರ ಕೋಟ್ಯಾಂತರ ಜನರನ್ನು ತಮ್ಮ ವರ್ತನೆಯಿಂದ, ಸಂವಹನದಿಂದ, ಮಾತಿನಿಂದ ಸೆಳೆಯಲು ಸಾಧ್ಯ.

ಆಂತರಿಕ ಮಂಥನ

ವಿಶುದ್ಧ ಚಕ್ರವು ನಿಮ್ಮನ್ನು ಮೊದಲಿಗೆ ಒಳ್ಳೆಯ ಕೇಳುಗನನ್ನಾಗಿ ಮಾಡುತ್ತದೆ. ಇತರರ ಮಾತನ್ನು ಅವರದೇ ಅರ್ಥದಲ್ಲಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಕಲಿಸುತ್ತದೆ. ಅವರ ಆಲೋಚನೆಗಳನ್ನು ನಿಮಗೆ ಸರಿಯಾದ ರೀತಿಯಲ್ಲಿ ಸಂವಹನ ಆಗುವಂತೆ ಮಾಡುತ್ತದೆ. ನೀವು ಅವರನ್ನು ಸಹಾನುಭೂತಿಯಿಂದ, ತಾಳ್ಮೆಯಿಂದ ಕೇಳಿಸಿಕೊಳ್ಳುವುದು ಅಭ್ಯಾಸವಾಗುತ್ತದೆ. ಹೀಗೆ ನಿಮ್ಮ ಮತ್ತು ಜನರ ನಡುವಿನ ಸಂಬಂಧ ಗಟ್ಟಿಯಾಗುತ್ತಾ ಹೋಗುತ್ತದೆ. ನಿಮ್ಮ ಕುರಿತು ಜನರು ಪ್ರೀತಿಯನ್ನು ಬೆಳೆಸಿಕೊಳ್ಳುತ್ತಾರೆ. ನೀವು ನಿಧಾನವಾಗಿ ಜನಪ್ರಿಯರಾಗುತ್ತಾ ಹೋಗುತ್ತೀರಿ.

ನಿಮ್ಮೊಳಗಿನ ಅಂತರಿಕ ಸತ್ಯ ನಿಮಗೆ ಸುಳ್ಳು ಹೇಳಲು ಬಿಡುವುದಿಲ್ಲ, ಇನ್ನೊಬ್ಬರನ್ನು ಮೆಚ್ಚಿಸಲು ನಿಮ್ಮ ಬದುಕು ಇಲ್ಲ ಎನ್ನುವುದು ನಿಮಗೆ ತಾನಾಗಿಯೇ ಅರ್ಥವಾಗುತ್ತದೆ. ನಿಮ್ಮ ನಿಷ್ಠೆಯು ನಿಮಗೆ ಮುಖವಾಡ ಹಾಕಿಕೊಳ್ಳಲು ಬಿಡುವುದಿಲ್ಲ, ನೀವು ನಿಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುತ್ತೀರಿ ಮತ್ತು ಇತರರನ್ನು ಕ್ಷಮಿಸುವ ಉದಾರ ಗುಣವನ್ನು ಹೊಂದುತ್ತೀರಿ. ನೀವು ಮುಕ್ತರಾಗುತ್ತಾ ಹೋದಂತೆ ವಿಶಾಲತೆ ನಿಮ್ಮನ್ನು ಆಕಾಶದೆತ್ತರಕ್ಕೆ ಬೆಳೆಸುತ್ತದೆ.

ಮನಸ್ಸಿನಲ್ಲಿ ಯಾವುದೂ ಸಹಾ ಉಳಿಯುವುದಿಲ್ಲ, ಅದು ಕೋಪ, ದುಃಖ, ನೋವು, ಹೀಗೆ ಎಲ್ಲವೂ ಹೊರಹೋಗಿ ಬಿಡುತ್ತದೆ. ಇದರಿಂದ ಮನಸ್ಸು ಹಗುರವಾಗುತ್ತದೆ ಹಾಗೂ ನೀವು ಖಿನ್ನತೆಯಿಂದ ದೂರವೇ ಇರುತ್ತೀರಿ. ನಿಮ್ಮ ಬಗ್ಗೆ ನಿಮಗಿರುವ ಕೀಳರಿಮೆ ಶೂನ್ಯವಾಗುತ್ತದೆ. ಯಾರು ಏನನ್ನುತ್ತಾರೋ ಅನ್ನುವ ಆತಂಕ ಲವಲೇಶವೂ ಉಳಿಯುವುದಿಲ್ಲ, ನೀವು ಒಬ್ಬ ಧೀಮಂತ ವ್ಯಕ್ತಿಯಾಗುತ್ತೀರಿ.

ದೈಹಿಕ ಮಂಥನ

ವಿಶುದ್ಧ ಚಕ್ರದ ಸಮತೋಲನವೆಂದರೆ ಸಮುದ್ರ ಮಂಥನದಂತೇ ಒಂದು ಶುದ್ಧತೆಯ ಪ್ರಕ್ರಿಯೆ. ಗಂಟಲಿಗೆ ಸಂಬಂಧಿಸಿದ ನೋವು, ರೋಗಗಳೆಲ್ಲವೂ ನಿವಾರಣೆಯಾಗುತ್ತದೆ. ಧ್ವನಿ ಎಂದಿಗೂ ಕುಂದುವುದೇ ಇಲ್ಲ, ನಿಮಗೆ ಒಂದೊಮ್ಮೆ ಕಫವಾದರೂ ಯಾವುದೇ ತೊಂದರೆ ಕೊಡದೇ ತಕ್ಷಣದಲ್ಲಿ ನಿವಾರಣೆಯಾಗುತ್ತದೆ. ಸೋಂಕು ಹೆಚ್ಚು ಕಾಲ ಉಳಿಯುವುದಿಲ್ಲ, ಕಿವಿ ಸಹಾ ಸದಾ ಚುರುಕಾಗಿ ಇರುತ್ತದೆ. ನೋವು, ಸೋಂಕು, ಕೇಳದಿರುವುದು ಹೀಗೆ ಯಾವುದೇ ತೊಂದರೆಯಾಗುವುದಿಲ್ಲ, ದೇಹದ ವಿಷದ ಅಂಶಗಳನ್ನು ಹೊರಹಾಕುವ ಕಾರಣ ದೇಹವೂ ಸಹಾ ಯಾವುದೇ ನಂಜಿಗೆ ಒಳಗಾಗದೇ ಸುಸ್ಥಿರವಾಗಿ ಇರಲು ಸಹಕರಿಸುತ್ತದೆ. ಗಂಟಲಿನ ಮುಖ್ಯ ಹಾರ್ಮೋನ್ ಥೈರಾಯ್ಡ್. ಈ ಗ್ರಂಥಿಯು ಒಂದು ಹಾರ್ಮೋನನ್ನು ಸ್ರವಿಸುತ್ತದೆ. ಕೇವಲ ಮೂರ್ನಾಲ್ಕು ಮಿಲಿಗ್ರಾಂಗಳಿಂದ ಮೈಕ್ರೋಗ್ರಾಂ ಮತ್ತು ನ್ಯಾನೋಗ್ರಾಂಗಳಷ್ಟು ಥೈರಾಕ್ಸಿನ್, ಟ್ರಯೋಡೋಥೈರೋಮಿನ್ ಮತ್ತು ಕ್ಯಾಲ್ಸಿಟೋನಿನ್ ಮಾತ್ರ ಸ್ರವಿಸುವುದು. ಇವುಗಳು ಕಮ್ಮಿಯಾದರೂ ರೋಗ ಬರುತ್ತದೆ. ಹೆಚ್ಚಾದರೂ ರೋಗ ಬರುತ್ತದೆ. ದೇಹದ ಚಯಾಪಚಯ ಕ್ರಿಯೆಗಳ ನಿಯಂತ್ರಣ, ದೇಹದ ಉಷ್ಣತೆ ಮತ್ತು ದೈಹಿಕ ಮತ್ತು ಮಾನಸಿಕ ಬೆಳವಣಿಗೆಗಳನ್ನು ಇದು ನಿಯಂತ್ರಿಸುತ್ತದೆ.

ನರಕವಾಸಿಗಳ ಗುರುತುಗಳು

ಅತ್ಯಂತಕೋಪಃ ಕುಟಿಲಾ ಚ ವಾಣೀ ದರಿದ್ರತಾ ಚ ಸ್ವಜನೇಷು ವೈರಮ್।
ನೀಚಪ್ರಸಂಗಃ ಕುಲಹೀನಸೇವಾ ಚಿಹ್ನಾನಿ ದೇಹೇ ನರಕಸ್ಥಿತಾನಾಮ್॥

ಅತಿಯಾದ ಸಿಟ್ಟು, ಕೊಂಕುನುಡಿ, ದಾರಿದ್ರ್ಯ, ಸ್ವಜನರಲ್ಲಿ ವೈರ, ನೀಚರ ಸಂಗ, ಕುಲಹೀನರ ಸೇವೆ ಇವುಗಳು ದೇಹದಲ್ಲಿರುವುದು ನರಕವಾಸಿಗಳ ಗುರುತುಗಳಾಗಿರುತ್ತವೆ- ಎಂಬುದು ಶ್ಲೋಕಾರ್ಥ.

ಸ್ವರ್ಗ ನರಕಗಳ ಕಲ್ಪನೆ ನಮ್ಮಲ್ಲಿ ಇಂದೂ ಇದೆ. ನೋಡಿ ಬಂದವರು ಯಾರೂ ಇಲ್ಲ, ಆದರೂ ನಂಬುತ್ತೇವೆ. ಇದಕ್ಕೆ ಆಪ್ತ ವಾಕ್ಯವೆಂಬ ಪ್ರಮಾಣವೇ ಕಾರಣ. ವಚನಕಾರರು 'ಸ್ವರ್ಗ ನರಕಗಳೆಂಬುದು ಬೇರಿಲ್ಲ ನೋಡಿರೋ' ಎಂದಿದ್ದಾರೆ. ಸತ್ಯವನ್ನು ನುಡಿಯುವುದು, ಧರ್ಮ ಮಾರ್ಗದಲ್ಲಿ ನಡೆಯುವುದು ಸ್ವರ್ಗವೆನಿಸಿದರೆ, ಇದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದು ನರಕ. ಬದುಕನ್ನು ಚೆನ್ನಾಗಿ ನಿರ್ವಹಿಸಬೇಕು. ಪ್ರಾಮಾಣಿಕವಾಗಿ ಬದುಕಬೇಕು. ಇರುವಷ್ಟರಲ್ಲಿ ಸಂತೋಷವನ್ನು ಕಾಣಬೇಕು. ಒಟ್ಟಿನಲ್ಲಿ ನೆಮ್ಮದಿಯ ಜೀವನ ನಡೆಸಬೇಕು ಎಂಬುದು ಸ್ವರ್ಗದ ಕಲ್ಪನೆಯಾಗಿದೆ.

ಶ್ಲೋಕ ಸಾಗರ
• ಡಾ. ಸೋಂದಾ ಭಾಸ್ಕರ ಭಟ್

ನಮ್ಮ ಹದ ಮೀರಿದ ವ್ಯವಹಾರಾದಿಗಳೇ ನರಕವೆನಿಸಿಕೊಳ್ಳುತ್ತದೆ. ನಮ್ಮ ಶರೀರದಲ್ಲಿಯೇ ನರಕದ ಕುರುಹುಗಳನ್ನು ಕಾಣಬಹುದು. ನಮ್ಮ ದೇಹದಲ್ಲಿರುವ ಕೆಲವು ಕೆಟ್ಟ ಅಂಶಗಳನ್ನು ನರಕವಾಸಿಗಳು ಎಂಬುದಾಗಿ ಗುರುತಿಸಬಹುದು. ಅಂತಹ ಗುರುತುಗಳು ಯಾವುವು ಎಂಬುದನ್ನು ಈ ಶ್ಲೋಕದಲ್ಲಿ ತಿಳಿಸಲಾಗಿದೆ.

ಮೊದಲನೆಯದಾಗಿ ಅತಿ ಕೋಪವನ್ನು ಕವಿ ಹೇಳಿದ್ದಾನೆ. ಕೋಪದಿಂದ ಯಾರೂ ಒಳ್ಳೆಯವರಾದದ್ದಿಲ್ಲ, ಕೋಪ ಪಾಪಕ್ಕೆ ಮೂಲ. ಕೋಪ ಪಾಪದ ಕೆಲಸಕ್ಕೆ ಎಡೆ ಮಾಡಿಕೊಡುತ್ತವೆ. ಕಡು ಕೋಪಿಷ್ಠನನ್ನು ಯಾರೂ ಒಪ್ಪುವುದಿಲ್ಲ, ಸಹವಾಸವನ್ನೂ ಬಯಸುವುದಿಲ್ಲ, ಅದೇ ರೀತಿ, ಕೊಂಕುನುಡಿಯುವವನನ್ನು ಜನರು ದೂರವಿಡುತ್ತಾರೆ. ನಂಜಿನ ಮಾತು, ಹೊಟ್ಟೆಕಿಚ್ಚಿನ ಮಾತು ಯಾರಿಗೂ ಒಪ್ಪಿಗೆಯಾಗದು. ಇಂಥವರ ಸಹವಾಸವನ್ನು ಯಾರೂ ಬಯಸರು.

ದಾರಿದ್ರ್ಯ ಬದುಕಿನಲ್ಲಿ ಹತಾಶೆಯನ್ನುಂಟುಮಾಡುತ್ತದೆ. ಯಾವುದೇ ಕೆಲಸ ಮಾಡಲು ದಾರಿದ್ರ್ಯದಿಂದಾಗಿ ಸಾಧ್ಯವಾಗುವುದಿಲ್ಲ, ಬಡವನನ್ನು ಎಲ್ಲರೂ ದೂರವಿರಿಸುತ್ತಾರೆ. ಆಕ್ಷೇಪಕ್ಕೂ, ಆರೋಪಕ್ಕೂ ತಲೆಕೊಡಬೇಕಾಗುತ್ತದೆ. ದರಿದ್ರನ ಪಾಲಿಗೆ ಎಲ್ಲವೂ ಶೂನ್ಯ. ಇಂಥವರ ಬದುಕು ಸಾಕ್ಷಾತ್ ನರಕವೇ ಸರಿ.

ತನ್ನವರು ಆಪತ್ತಿನಲ್ಲಿ ಜೊತೆಗಿರುವವರು. ಅವರೊಂದಿಗೆ ವೈರ ಎಂದೂ ಸಲ್ಲದು. ಇಲ್ಲಸಲ್ಲದ ವಿಚಾರಕ್ಕೆ ಜಗಳಕಾಯ್ದು, ದ್ವೇಷಮಾಡಿ ಮಾತನಾಡದೆ ಮುಖ ತಿರುಗಿಸಿದರೆ ಸಂಕಟದ ಸಮಯದಲ್ಲಿ ಒದಗಿ ಬರಬೇಕಾದ ಅವರೇ ಬರುವುದಿಲ್ಲ, ಲಾಭಕ್ಕಾಗಿ ಹತ್ತಿರ ಬಂದವರು ಬರುತ್ತಾರೆಯೇ? ಲಾಭವಿಲ್ಲದಲ್ಲಿ ಇವರೂ ಇರುವುದಿಲ್ಲ.

ನೀಚರು ಸಹವಾಸ ಮಾಡುವುದು ಸ್ವಾರ್ಥಕ್ಕಾಗಿಯೇ ವಿನಾ ಇನ್ನಾವ ಉದಾತ್ತ ಉದ್ದೇಶವೂ ಇರುವುದಿಲ್ಲ, ಸಹವಾಸಮಾಡಿ ಅವನನ್ನು ಸಂಪೂರ್ಣ ಮುಗಿಸಿಬಿಡುವುದು ನೀಚರ ಸ್ವಭಾವ. ಇವರ ಒಡನಾಟವೂ ನರಕವನ್ನು ಮನೆಗೆ ಕರೆತಂದಂತೆ.

'ಸೇವಾ ಹಿ ಪರಮೋಧರ್ಮ' ಎಂಬುದು ಸತ್ಯ. ಯಾರ ಸೇವೆ ಎಂಬ ಕಲ್ಪನೆ ಇರಬೇಕು. ಸಜ್ಜನರ ಸೇವೆ ಮಾಡಬೇಕಾದದ್ದು ಧರ್ಮ. ಕರ್ತವ್ಯ ಕೂಡ. ಇದರಿಂದ ಇಹಪರಗಳಲ್ಲಿ ಪ್ರಯೋಜನವಿದೆ. ಇದಕ್ಕೆ ಬದಲಾಗಿ ಕುಲಹೀನರ ಸೇವೆ ಮಾಡಿದರೆ ಬೇರೆ ನರಕವಿಲ್ಲ, ಇದೇ ನರಕ. ಜೀವನದಲ್ಲೆಂದೂ ಕುಲಹೀನರ ಸೇವೆ ಮಾಡಬಾರದು. ಒಡನಾಟವೂ ಸಲ್ಲದು. ಹೀಗೆ ಕವಿಯು ನರಕಕ್ಕೆ ಒಯ್ಯುವ ಅಥವಾ ಇಹವನ್ನೇ ನರಕವನ್ನಾಗಿಸುವ ಅಂಶಗಳನ್ನು, ಸನ್ನಿವೇಶಗಳನ್ನು ಹೇಳಿ ಇವುಗಳ ಹತ್ತಿರ ಸುಳಿಯದಂತೆ ಎಚ್ಚರದ ಜೀವನ ನಡೆಸಬೇಕೆನ್ನುತ್ತಾನೆ.

ಶಿಕ್ಷಣದಲ್ಲಿ ಭಾರತೀಯತೆ-ಮೌಲ್ಯಗಳು

ಹಿಂದೆ ಭಾರತ ಜಗತ್ತಿಗೆ ಜ್ಞಾನ-ವಿಜ್ಞಾನಗಳ ಕೊಡುಗೆ ನೀಡಿದೆ. ಮುಂದೆಯೂ ಅಂತಹ ಕೊಡುಗೆ ನೀಡಲು ಯುವಪೀಳಿಗೆಯನ್ನು ಸನ್ನದ್ಧಗೊಳಿಸುವ ಅಗತ್ಯವಿದೆ.

ಒಳನೋಟ
• ಕೆ.ಬಾ. ಮಲ್ಯ



ಇತ್ತೀಚೆಗೆ 'ಜಿರಳೆ ಪಾರ್ಟಿ' (Cockroach Janatha Party -CJP) ಹೆಸರಿನಲ್ಲಿ ನಡೆದ ಕಪಟ ನಾಟಕದ ಬಗ್ಗೆ ಈಗಾಗಲೇ ಜನರಿಗೆ ತಿಳಿದಿದೆ. ಈ ಪ್ರತಿಭಟನೆಯ ಹಿಂದಿರುವ ರಾಜಕಾರಣಗಳು, ವಿದೇಶಿ ಭಾರತ ವಿರೋಧಿ ಶಕ್ತಿಗಳ ಷಡ್ಯಂತ್ರವೂ ಬಯಲಾಗಿದೆ. ದಿಲ್ಲಿಯ ಜಂತರ್ ಮಂತರ್‌ನಲ್ಲಿ ಲಕ್ಷಾಂತರ ಯುವಕರ ಬೃಹತ್ ಆಂದೋಲನ ನಡೆಯಲಿದೆ ಎಂದು ಅವರ ನಾಯಕರು ಕೊಚ್ಚಿಕೊಂಡಿದ್ದರು. ಕೊನೆಗೆ ಈ ಪ್ರತಿಭಟನೆ ಹೇಗೆ ಠುಸ್ ಆಯಿತೆಂಬುದನ್ನೂ ದೇಶದ ಜನರು ನೋಡಿದ್ದಾರೆ. ದೇಶಾದ್ಯಂತ ಯುವಕರನ್ನು ಪ್ರಚೋದಿಸಿ, ಅಶಾಂತಿ ಸೃಷ್ಟಿಸಿ, ಮೋದಿ ಸರಕಾರವನ್ನು ಉರುಳಿಸುವ ಸಂಚು ಇದಾಗಿತ್ತು. ಬರೀ ಗಾಳಿಯಿಂದ ಉಬ್ಬಿದ ಈ ಬಲೂನಿಗೆ ಚಿಕ್ಕ ಸೂಜಿಯಿಂದ ಚುಚ್ಚಿ ಅದನ್ನು ಮೋದಿ-ಶಾ ಅವರು ಹೇಗೆ ನಿಷ್ಕ್ರಿಯಗೊಳಿಸಿದರೆಂಬುದನ್ನೂ ಜನ ನೋಡಿದ್ದಾರೆ. ಪೊಲೀಸು, ಬಂಧನ ಯಾವುದೂ ನಡೆಯಲಿಲ್ಲ, ವಿಷಯ ಅದಲ್ಲ, ಭಾರತದ ಹಿಂದು ಯುವಕರೇ ದಾರಿ ತಪ್ಪಲು ಕಾರಣವೇನು ಎಂಬುದರ ಬಗ್ಗೆ ಆಳಕ್ಕೆ ಹೋಗಿ ಚಿಂತಿಸುವ ಅಗತ್ಯವಿದೆ.

ಸ್ವಾತಂತ್ರ್ಯ ಬಂದು ಆರೇಳು ದಶಕಗಳವರೆಗೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರಕಾರ ಶಿಕ್ಷಣ ಕ್ಷೇತ್ರದ ಬಗ್ಗೆ ಗಮನವನ್ನೇ ಕೊಡಲಿಲ್ಲ, ಯುವಕರಲ್ಲಿ ದೇಶಭಕ್ತಿ, ಸಾಮಾಜಿಕ ಪ್ರಜ್ಞೆಗಳನ್ನು ಜಾಗೃತಗೊಳಿಸುವ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಲಿಲ್ಲ, ಸರ್ಕಾರಿ ಶಾಲೆಗಳ ದುರವಸ್ಥೆ ಇದಕ್ಕೆ ಸಾಕ್ಷಿ. ಬಡವರು ಬಡವರಾಗಿಯೇ ಇರಬೇಕು, ಅಶಿಕ್ಷಿತರಾಗಿಯೇ ಇರಬೇಕು, ಆದರಿಂದ ಅವರು ಸದಾ ತಮ್ಮ ಪಕ್ಷಕ್ಕೆ ಮತ ನೀಡಿ ತಾವು ಸದಾ ಅಧಿಕಾರದಲ್ಲಿರುವಂತಾಗಬೇಕು, ತಮ್ಮ ವಂಶವೇ ಸದಾ ಕಾಲಕ್ಕೂ ಆಡಳಿತದಲ್ಲಿರಬೇಕು ಎಂಬುದು ಇದರ ಹಿಂದಿನ ಹುನ್ನಾರ. ಹೀಗೆ ಆರೇಳು ದಶಕಗಳವರೆಗೆ ರಾಷ್ಟ್ರ ಭಾವನೆ ಜಾಗೃತಗೊಳಿಸದ ಕಳಪೆ ಶಿಕ್ಷಣದ ಪರಿಣಾಮವಾಗಿ ಯುವಕರು ದಾರಿತಪ್ಪಿ ಸಮಾಜಕಂಟಕರಾಗುವಂತಾಯಿತು. ಆದರೆ ತಮ್ಮ ಮಕ್ಕಳಿಗೆ, ಸರ್ಕಾರಿ ಅಧಿಕಾರಿಗಳು ಹಾಗೂ ಶ್ರೀಮಂತರ ಮಕ್ಕಳಿಗಾಗಿ ಖಾಸಗಿ ಶಾಲೆ-ಕಾಲೇಜುಗಳಿಗೆ ಉತ್ತೇಜನ ನೀಡಲಾಯಿತು. ಕೆಲವು ಯುವಕರು ದಾರಿ ತಪ್ಪಿದರೂ ಅವರಲ್ಲಿ ಸ್ವತಂತ್ರವಾಗಿ ಯೋಚಿಸುವ ಶಕ್ತಿಯೂ ಬೆಳೆಯಲಾರಂಭಿಸಿತು. ದೇಶದ ಎಲ್ಲ ಯುವಕರೂ ದಾರಿತಪ್ಪಿದ್ದಾರೆ ಎನ್ನಲಾಗದು. ಆದರೆ ದೇಶದ ಯುವಕ-ಯುವತಿಯರಲ್ಲಿ ಜಾಗೃತಿ ಮೂಡಿರುವುದು ಕೇವಲ ಖಾಸಗಿ- ವ್ಯಾಪಾರೀ ಶಿಕ್ಷಣ ಸಂಸ್ಥೆಗಳಿಂದಲ್ಲ, ಸಂಘ ಪರಿವಾರ, ವಿದ್ಯಾಭಾರತಿ, ರಾಮಕೃಷ್ಣಾಶ್ರಮ ಹಾಗೂ ಇನ್ನಿತರ ರಾಷ್ಟ್ರವಾದೀ ಸಂಘಟನೆಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆ, ಶಾಲೆಗಳಲ್ಲಿ ನೀಡಲಾಗುತ್ತಿರುವ ಸಂಸ್ಕಾರಯುಕ್ತ, ಮೌಲ್ಯಾಧಾರಿತ ಶಿಕ್ಷಣ ವ್ಯವಸ್ಥೆಯಿಂದ. ಸ್ವಾತಂತ್ರ್ಯಾನಂತರದ ಎಂಭತ್ತು ವರ್ಷಗಳಲ್ಲಿ ಎರಡು ಪೀಳಿಗೆಗಳೇ ಕಳೆದು ಮೂರನೇ ಪೀಳಿಗೆಯ ಯುವಕರು ತಯಾರಾಗಿದ್ದಾರೆ. ಆದರೆ ಗುರುಕುಲ ಶಿಕ್ಷಣದ ಬದಲಾಗಿ ಮೆಕಾಲೆ ಶಿಕ್ಷಣವನ್ನೇ ಮುಂದುವರಿಸಿದ್ದರಿಂದ ಹಿಂದಿನ ಎರಡು ಪೀಳಿಗೆಯ ಜನ ಹಿಂದು ಧರ್ಮ, ಸಂಸ್ಕೃತಿ, ಇತಿಹಾಸ, ಮೌಲ್ಯಗಳನ್ನೇ ಮರೆಯುವಂತಾಯಿತು. ಕೇವಲ ಹಣ ಗಳಿಕೆಯೇ ಮುಖ್ಯವಾಯಿತು. ಮೆಕಾಲೆ ಊಹಿಸಿದಂತೆ ಇವರು ಕರಿತೊಗಲಿನ ಬ್ರಿಟಿಷರಾಗಿ ರೂಪುಗೊಂಡರು. ಆದರೆ ಸಂಘ ಪರಿವಾರ ಹಾಗೂ ಇನ್ನಿತರ ರಾಷ್ಟ್ರೀಯ ಸಂಘಟನೆಗಳ ಪ್ರಯತ್ನದ ಫಲವಾಗಿ ಇಂದಿನ ಮೂರನೇ ಪೀಳಿಗೆಯಲ್ಲಿ ತಮ್ಮ ಅಸ್ಮಿತೆಯ ಜಾಗೃತಿಯಾಗಲಾರಂಭಿಸಿರುವುದು ಸಮಾಧಾನಕರ ಸಂಗತಿ. ಇಂದು ಹಿಂದು ಪರ ಸರಕಾರ ಕೇಂದ್ರದಲ್ಲಿ ಹಾಗೂ 21 ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿದೆ. ಮೋದಿ ಸರಕಾರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದೆ. ಶಿಕ್ಷಣದಲ್ಲಿ ಭಾರತೀಯತೆಯನ್ನು ತುಂಬುವ ಪ್ರಯತ್ನ ನಡೆಯುತ್ತಿದೆ. ಜಗತ್ತಿನಲ್ಲಿ ಇಂದು ಅತಿ ಹೆಚ್ಚು ಯುವಕರಿರುವ ದೇಶ ಭಾರತ ಎಂದು ಅಂಕಿ ಅಂಶಗಳು ಹೇಳುತ್ತಿವೆ. ಇಂದಿನ ಭಾರತ ಯುವ ಪೀಳಿಗೆಯ ಭಾರತ ಎನ್ನಬಹುದು. ಇವರೇ ನಾಳಿನ ಭಾರತವನ್ನು ಮುನ್ನಡೆಸುವವರು.



ಮಕ್ಕಳನ್ನು ತಿದ್ದುವುದು ಕೇವಲ ಸರಕಾರ, ಶಾಲೆಗಳು ಹಾಗೂ ಶಿಕ್ಷಕರ ಹೊಣೆಗಾರಿಕೆ ಎಂಬ ಭಾವನೆ ಸರಿಯಲ್ಲ, ಹೆತ್ತವರ ಮೇಲೆಯೂ ಮಕ್ಕಳಿಗೆ ಯೋಗ್ಯ ಸಂಸ್ಕಾರಗಳನ್ನು ನೀಡಿ ಬೆಳೆಸುವ ಜವಾಬ್ದಾರಿ ಇದೆ ಎಂಬುದನ್ನು ಮರೆಯಬಾರದು. 3-4 ವರ್ಷದ ಮಕ್ಕಳು ತಾಯಿಯ ಮಡಿಲಲ್ಲೇ ಬೆಳೆಯುತ್ತವೆ. ''ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮಗುವಿನ ಮೊದಲ ಗುರು'' ಎಂಬ ಮಾತೊಂದಿದೆ. ಹಾಗೆಯೇ ವ್ಯಾವಹಾರಿಕ ಸಂಗತಿಗಳಲ್ಲಿ ತಂದೆಯ ಜವಾಬ್ದಾರಿಯೂ ಇದೆ. ಮಕ್ಕಳನ್ನು ಹೇಗೆ ಬೆಳೆಸಬೇಕೆಂಬುದರ ಬಗ್ಗೆ ಒಂದು ಸುಭಾಷಿತ ಇದೆ.

ಲಾಲಯೇತ್ ಪಂಚವರ್ಷಾಣಿ ದಶವರ್ಷಾಣಿ ತಾಡಯೇತ್।
ಷೋಡಷವರ್ಷಪ್ರಾಪ್ತೇ ಪುತ್ರಂ ಮಿತ್ರವದಾಚರೇತ್॥

ಮಕ್ಕಳನ್ನು 5 ವರ್ಷ ಪ್ರಾಯವಾಗುವವರೆಗೆ ಮುದ್ದು ಮಾಡಬೇಕು. ಆದರೆ ಅತಿ ಮುದ್ದು ಸಲ್ಲದು. ಹೊಡೆಯಬಾರದು. ಪ್ರೀತಿಯಿಂದ ತುಂಟತನ ಮಾಡಬಾರದೆಂದು ತಾಯಿ ಬುದ್ಧಿ ಹೇಳಬೇಕು. ನಂತರವೂ ಅತಿ ತುಂಟತನ ನಡೆಸಿದರೆ ಸ್ವಲ್ಪ ಚುರುಕು ಮುಟ್ಟಿಸಬೇಕು. ಸಿಟ್ಟಿನಿಂದ ಸಿಕ್ಕಾಪಟ್ಟೆ ಹೊಡೆಯುವುದು ಸರಿಯಲ್ಲ, ಇದರಿಂದ ಮಕ್ಕಳು ಉದ್ದಂಡ ಸ್ವಭಾವದವರಾಗುವುದೇ ಹೆಚ್ಚು ಅಥವಾ ಅವರ ಸ್ವಂತದ ಪ್ರತಿಭೆಗಳು ಬೆಳೆಯದಂತಾಗುತ್ತದೆ.

ಮಕ್ಕಳು ತಂದೆ-ತಾಯಂದಿರು ಹೇಳಿದಂತೆ ನಡೆದುಕೊಳ್ಳುವುದಿಲ್ಲ, ಪೋಷಕರ ನಡೆಯನ್ನು ಅನುಕರಿಸುತ್ತವೆ. ಪೋಷಕರು ಹಗಲಿಡೀ ಮೊಬೈಲ್, ವಾಟ್ಸಪ್, ಟಿ.ವಿ.ಗಳಲ್ಲೇ ಮಗ್ನರಾಗಿದ್ದರೆ ಮಕ್ಕಳೂ ಅದನ್ನೇ ಮಾಡುತ್ತವೆ. ಮೊಬೈಲ್ ಕೊಡದಿದ್ದರೆ ಹಟಮಾಡುತ್ತವೆ. ಕಿರಿಕಿರಿ ತಪ್ಪಿಸಿಕೊಳ್ಳಲು ಚಿಕ್ಕ ಶಿಶುಗಳ ಕೈಗೆ ತಾಯಿ ಮೊಬೈಲ್ ಕೊಡುವುದರಿಂದ ಮಕ್ಕಳ ಪ್ರತಿಭೆಗಳು, ಮಿದುಳಿನ ಶಕ್ತಿ ಕುಂದುವುದಲ್ಲದೆ, ಚಿಕ್ಕ ಶಿಶುಗಳಿಗೆ ಕಣ್ಣಿನ ಸಮಸ್ಯೆಯಾಗಿ ಕನ್ನಡಕ ಬರುತ್ತದೆ. ಮಕ್ಕಳಿಗೆ ಮೊಬೈಲೇ ಕೊಡಬೇಕೆಂದೇನಿಲ್ಲ, ಬೇರೆ ಆಕರ್ಷಕ ಆಟದ ವಸ್ತುಗಳನ್ನು ಕೊಡುವುದರಿಂದ ಮಗು ಬೊಂಬೆಗಳ ಆಟದಲ್ಲಿ ಮಗ್ನವಾಗುತ್ತದೆ. ಜೊತೆಗೆ ಮಕ್ಕಳ ಮುಂದೆ ತಾವೇ ಸ್ವತಃ ಮೊಬೈಲ್‌ನಲ್ಲಿ ತಲ್ಲೀನರಾಗಿರಕೂಡದು. ಆಗ ಮಕ್ಕಳಿಗೆ ಏನಾದರೂ ಅಪಾಯ ಸಂಭವಿಸಿದರೂ ತಾಯಿಯ ಅರಿವಿಗೇ ಬರುವುದಿಲ್ಲ.

ಇಂದು ವಸ್ತುಸ್ಥಿತಿ ಹೇಗಿದೆಯೆಂದರೆ ತಂದೆತಾಯಿಗಳು ಮೆಕಾಲೆ ಶಿಕ್ಷಣ ಪಡೆದು ಬೆಳೆದವರಾದ್ದರಿಂದ ಅವರಿಗೆ ಹಿಂದು ಧರ್ಮ, ಸಂಸ್ಕೃತಿ, ಪರಂಪರೆ, ಆಚರಣೆಗಳ ಬಗ್ಗೆ ಯಾವುದೇ ಜ್ಞಾನವಿಲ್ಲ, ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆಯನ್ನು ಓದಿರುವುದಿಲ್ಲ, ಮಕ್ಕಳಿಗೆ ಪುರಾಣ ಕಥೆಗಳನ್ನು ಹೇಳಿ ಅವರಲ್ಲಿ ಉತ್ತಮ ಗುಣಗಳನ್ನು ಬೆಳೆಸುವಲ್ಲಿ ತಂದೆ ತಾಯಂದಿರು ಸೋಲುತ್ತಾರೆ. ಮಕ್ಕಳು ಹೇಗೆ ಹೇಗೋ ಬೆಳೆದು ಸಮಾಜ ಕಂಟಕರಾಗುತ್ತಾರೆ. ಮುಸ್ಲಿಂ ಮಕ್ಕಳು ಮದ್ರಸಾ ಶಿಕ್ಷಣ ಪಡೆಯುವುದರಿಂದ ಅನೇಕರು ಭಯೋತ್ಪಾದಕರು, ಮತಾಂಧರೂ ಆಗಿ ರೂಪುಗೊಳ್ಳುತ್ತಾರೆ. ಕಾಫಿರರೆಂದು ಹಿಂದುಗಳ ಮೇಲೆ ಹಲ್ಲೆ, ಅತ್ಯಾಚಾರ, ಕಲ್ಲೆಸೆಯುವುದು, ಮೂರ್ತಿ ಭಂಜನೆ, ಕೊಳ್ಳಿ ಇಡುವುದು ತಮ್ಮ ಮತದಂತೆ ಸರಿ ಎಂದು ಭಾವಿಸುತ್ತಾರೆ. ಅದಕ್ಕೇ ಹೇಳುವುದು ಏಕರೂಪ ನಾಗರಿಕ ಸಂಹಿತೆ ಹಾಗೂ ಏಕರೂಪದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕೆಂದು.

ನರೇಂದ್ರ ಮೋದಿಯವರು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದ್ದಾರೆ. ಇಂಗ್ಲಿಷ್ ಭಾಷೆಯ ಹಾಗೂ ಕಾನ್ವೆಂಟ್ ಶಿಕ್ಷಣದ ಮೋಹವನ್ನು ಬದಿಗೆ ಸರಿಸಿ ರಾಷ್ಟ್ರೀಯ ಸಂಸ್ಕಾರದ ಶಿಕ್ಷಣದತ್ತ ಗಮನಹರಿಸಬೇಕು. ಮಾತೃಭಾಷೆಯಲ್ಲೇ ಶಿಕ್ಷಣ ನೀಡುವ ಅಗತ್ಯವನ್ನು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ಸ್ಪಷ್ಟಪಡಿಸಿವೆ. ಇಂದು ಕ್ರಮೇಣ ಮಕ್ಕಳ ಪಾಲಕರಲ್ಲೂ ಇಂಥ ಸಂಸ್ಕಾರಯುಕ್ತ ಶಿಕ್ಷಣದ ಅವಶ್ಯಕತೆಯ ಬಗ್ಗೆ ಅರಿವು ಮೂಡುತ್ತಿರುವುದು ಒಂದು ಶುಭಲಕ್ಷಣ. ಸಂಘ ಪರಿವಾರ, ರಾಷ್ಟ್ರೋತ್ಥಾನ ಪರಿಷತ್ತು, ವಿದ್ಯಾಭಾರತಿಯ ಶಿಶುಮಂದಿರಗಳು, ಪ್ರಾಥಮಿಕ ಹಾಗೂ ಹೈಸ್ಕೂಲುಗಳಿಗೆ ತಮ್ಮ ಮಕ್ಕಳನ್ನು ಕಳಿಸುವ ಪಾಲಕರ ಸಂಖ್ಯೆ ಹೆಚ್ಚಾಗುತ್ತಿರುವುದೇ ಇದಕ್ಕೆ ಸಾಕ್ಷಿ. ಭಾರತ ಸದ್ಯದಲ್ಲೇ ವಿಶ್ವಗುರುವಾಗುವುದು ಖಚಿತ. ಹಿಂದೂ ಧರ್ಮದಲ್ಲಿ ಅಂಥ ಅವಿನಾಶಿಯಾದ ಅಂತಃಸತ್ವ ಅಡಗಿದೆ. ಸ್ವಾಮಿ ವಿವೇಕಾನಂದರೂ ಇದನ್ನೇ ಹೇಳಿದ್ದರು. ಭಾರತ ಮೇಲೇಳುವುದು. ಹಿಂದೆಯೂ ಭಾರತ ಜಗತ್ತಿಗೆ ಜ್ಞಾನ-ವಿಜ್ಞಾನಗಳ ಕೊಡುಗೆ ನೀಡಿದೆ. ಮುಂದೆಯೂ ಆ ಜ್ಞಾನ-ವಿಜ್ಞಾನದ ಕೊಡುಗೆ ನೀಡಲು ಭಾರತವನ್ನು, ಅದರ ಯುವಪೀಳಿಗೆಯನ್ನು ಸನ್ನದ್ಧಗೊಳಿಸುವ ಅಗತ್ಯವಿದೆ.

'ನವ ಭಾರತ'ದ ಹರಿಕಾರ ನರೇಂದ್ರ ಮೋದಿ

ದೇವಿಡ್ ಫ್ರಾಲಿ

ನರೇಂದ್ರ ಮೋದಿಯವರು ಈಗ ಭಾರತದ ಅತಿ ದೀರ್ಘಾವಧಿ ಸೇವೆ ಸಲ್ಲಿಸುತ್ತಿರುವ ಚುನಾಯಿತ ಪ್ರಧಾನಿಯಾಗಿದ್ದಾರೆ. ಈ ಸಾಧನೆಯ ಜತೆಗೇ ಭಾರತವನ್ನು ಒಂದು ಆರ್ಥಿಕ ಶಕ್ತಿಯಾಗಿಸಿದ ಮತ್ತು ಭಾರತಕ್ಕೆ ಜಾಗತಿಕ ಮನ್ನಣೆ ದೊರಕಿಸಿದ ಕೀರ್ತಿಯೂ ಅವರದ್ದಾಗಿದೆ. ಭಾರತದ ಮೂಲ ಪ್ರೇರಣೆಯಾದ ಧರ್ಮದ ಮಾರ್ಗದರ್ಶನದೊಂದಿಗೆ ಭವಿಷ್ಯದ ಭಾರತವನ್ನು ನಿರ್ಮಿಸುವಂತಹ ಬದ್ಧತೆಯನ್ನೂ ಮೋದಿ ಪ್ರದರ್ಶಿಸುತ್ತಿದ್ದಾರೆ.

ಭಾರತದ ಪುನರುತ್ಥಾನ

ಮೋದಿಯವರ ಆಳ್ವಿಕೆಯು ನೆಹರೂ ಕಾಲದ ನೀತಿಗಳ ಅಂತ್ಯವನ್ನು ಸೂಚಿಸಿದೆ. ನೆಹರೂ ಅಳವಡಿಸಿದ ನೀತಿಗಳು ಸ್ವಾತಂತ್ರ್ಯೋತ್ತರ ಭಾರತವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಮತ್ತು ದೇಶದ ಪುರಾತನ ನಾಗರಿಕ ಪರಂಪರೆಯೊಂದಿಗೆ ಹೊಂದಿಕೊಳ್ಳಲು ವಿಫಲವಾಗಿತ್ತು. ಆದರೆ ಮೋದಿಯವರ ಆಡಳಿತದಲ್ಲಿ ಭಾರತವು ಮಹತ್ವದ ಆರ್ಥಿಕ ಪ್ರಗತಿ ಸಾಧಿಸಿದ್ದು, ಜಾಗತಿಕವಾಗಿ ತನ್ನ ಸ್ಥಾನಮಾನ ಹೆಚ್ಚಿಸಿಕೊಂಡಿದೆ. ರಾಜತಾಂತ್ರಿಕ, ಪಾರಿಸರಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿದೆ.



ಮೋದಿಯವರ ನಾಯಕತ್ವದಲ್ಲಿ 'ನವಭಾರತ'ವೊಂದು ಉದಿಸುತ್ತಿದೆ. ಇದು ವಸಾಹತುಶಾಹಿ ನೆರಳಿನಿಂದ ಪೂರ್ಣವಾಗಿ ಹೊರಬಂದ ಹಾಗೂ ತನ್ನ ಐತಿಹಾಸಿಕ ಶ್ರೇಷ್ಠತೆಯನ್ನು, ಸಾಂಸ್ಕೃತಿಕ ಆತ್ಮವಿಶ್ವಾಸವನ್ನು ತುಂಬಿಕೊಂಡ ಭಾರತವಾಗಿದೆ. ಭಾರತವು ತನ್ನ ಧಾರ್ಮಿಕ ಪರಂಪರೆಯ ಆಧಾರದಲ್ಲಿ ಆರ್ಥಿಕ, ಸಾಂಸ್ಕೃತಿಕ ಮತ್ತು ನಾಗರಿಕ ಪುನರುತ್ಥಾನವನ್ನು ಕಾಣುತ್ತಿದೆ.

ಭಾರತವು ವಿಶ್ವದ ಅತ್ಯಂತ ಪುರಾತನ ಮತ್ತು ಅತ್ಯಂತ ಪ್ರಭಾವೀ ನಾಗರಿಕತೆ ಹೊಂದಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕು. ಭಾರತವು ಆತ್ಮಜ್ಞಾನ ಮತ್ತು ಆಧ್ಯಾತ್ಮಿಕ ಚಿಂತನೆಯ ತೊಟ್ಟಿಲಾಗಿತ್ತು. ಮೋದಿಯವರ ಅಡಿಯಲ್ಲಿ ಈ ಸಾಂಸ್ಕೃತಿಕ ಭಾರತ ಇನ್ನಷ್ಟು ಶಕ್ತಿ ತುಂಬಿ ಪ್ರಜ್ವಲಿಸುತ್ತಾ ಬೆಳೆಯುತ್ತಿದೆ. ವಸಾಹತುಶಾಹಿ ಬಂಧನಗಳನ್ನೆಲ್ಲಾ ಕಳಚಿಹಾಕುತ್ತಿದೆ. ತನ್ನ ಧಾರ್ಮಿಕ ಮತ್ತು ಯೋಗದ ಪರಂಪರೆಯನ್ನು ಜಗತ್ತಿನೊಂದಿಗೆ ಹಂಚಿಕೊಳ್ಳುತ್ತಿದೆ. ವಿದೇಶಿ ಪ್ರಭಾವವನ್ನು ಕಳಚಿಕೊಂಡು ಜಾಗತಿಕ ನಾಯಕನಾಗಿ ಮತ್ತೆ ಉದಿಸುತ್ತಿದೆ. ನೂತನ ಭಾರತವು ನೆಹರೂ ಮಾದರಿಗಿಂತ ಭಿನ್ನವಾಗಿದೆ. ನೆಹರೂ ಮಾದರಿಯು ವಸಾಹತುಶಾಹಿ ಚೌಕಟ್ಟಿನಲ್ಲೇ ಬೆಳೆದಿದ್ದು ಸಮಾಜವಾದಿ ಮತ್ತು ಮಾರ್ಕ್ಸಿಸ್ಟ್ ಸಿದ್ಧಾಂತಗಳನ್ನು ಅನುಸರಿಸಿಕೊಂಡಿತ್ತು.

ಪ್ರಧಾನಿ ಮೋದಿಯವರು ಭಾರತದ ಪುರಾತನ ಧಾರ್ಮಿಕ ಪರಂಪರೆಗಳನ್ನು, ದೇವಾಲಯಗಳನ್ನು ಮತ್ತು ಪ್ರಾಚೀನ ಚಿಂತನೆಗಳನ್ನು ಉಳಿಸಿಕೊಳ್ಳುವತ್ತ ಮಹತ್ವದ ಹೆಜ್ಜೆ ಇಟ್ಟಿದ್ದಾರೆ. ಭಾರತದ ವೈದಿಕ, ಬೌದ್ಧ, ಜೈನ ಮತ್ತು ಸಿಖ್ ಸಂಪ್ರದಾಯಗಳು ಏಷ್ಯಾ ಮತ್ತು ಇನ್ನಿತರ ಪ್ರದೇಶಗಳ ಮೇಲೆ ಪ್ರಭಾವ ಬೀರಿದ್ದು ಮಧ್ಯ ಏಷ್ಯಾ , ಪೂರ್ವ ಏಷ್ಯಾ ಮತ್ತು ಆಗ್ನೇಯ ಏಷ್ಯಾಗಳ ಸಂಸ್ಕೃತಿಗಳನ್ನು ಪ್ರಭಾವಿಸಿವೆ. ಯುರೋಪು ಮತ್ತು ಪಶ್ಚಿಮ ಏಷ್ಯಾದಲ್ಲೂ ಭಾರತದ ಪಾರಂಪರಿಕ ಪ್ರಭಾವವಿದೆ.

ಭಾರತದ ನಾಗರಿಕತೆಯು ಬಹಳ ಪುರಾತನವಾದುದು. 8000 ವರ್ಷಗಳ ಹಿಂದೆ ಸರಸ್ವತಿ ನದಿಯ ದಡದಲ್ಲಿ ಭಾರತದ ನಾಗರಿಕತೆ ಉದಿಸಿತ್ತು. ಆಗಲೇ ಭಾರತವು ವಿದೇಶಗಳೊಂದಿಗೆ ವ್ಯಾಪಾರ ಸಂಬಂಧ, ಸಾಗರ ಸಂಪರ್ಕವನ್ನು ಹೊಂದಿತ್ತು. ಆಧುನಿಕ ಭಾರತದಲ್ಲಿ ಸ್ವಾಮಿ ವಿವೇಕಾನಂದರಂಥ ಮಹನೀಯರು ಪಾಶ್ಚಿಮಾತ್ಯ ಜಗತ್ತಿಗೆ ಯೋಗ ಮತ್ತು ವೇದಾಂತಗಳನ್ನು ಪರಿಚಯಿಸಿದ್ದರು.

ಈ ನಿಟ್ಟಿನಲ್ಲಿ ನೋಡುವುದಾದರೆ ಪ್ರಧಾನಿ ಮೋದಿಯವರು ಸ್ವಾಮಿ ವಿವೇಕಾನಂದರ ರಾಜಕೀಯ ಅವತಾರವೆಂಬಂತೆ ಕಂಡುಬರುತ್ತಾರೆ. ವಿವೇಕಾನಂದರ ಸಾಂಸ್ಕೃತಿಕ ಆತ್ಮವಿಶ್ವಾಸ ಮತ್ತು ನಾಗರಿಕ ಪುನರುಜ್ಜೀವನದ ಕನಸನ್ನು ಮೋದಿಯವರು ಸಾಕಾರ ಮಾಡಲು ಯತ್ನಿಸುತ್ತಿದ್ದಾರೆ. ಸನಾತನ ಧರ್ಮದ ಪುನರುತ್ಥಾನದ ಸಂಕೇತವಾಗಿ ಶ್ರೀರಾಮ ಮಂದಿರ ನಿರ್ಮಾಣವಾಗಿದ್ದು ಇದು ಭಾರತದ ಧಾರ್ಮಿಕ ಪರಂಪರೆಯತ್ತ ಇಡೀ ಜಗತ್ತಿನ ಗಮನ ಸೆಳೆದಿದೆ. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣವು ದೇಶದ ಸಾಂಸ್ಕೃತಿಕ ಪುನರುತ್ಥಾನದ ಕೇಂದ್ರ ಬಿಂದು ಎಂಬುದಾಗಿ ಭಾವಿಸಬಹುದು.

ನವಭಾರತ ಮತ್ತು ಜಗತ್ತು

ಭಾರತದ ಸಾಕ್ಷಿಪ್ರಜ್ಞೆಯನ್ನು ಸ್ವಾಮಿ ವಿವೇಕಾನಂದ, ಸ್ವಾಮಿ ರಾಮತೀರ್ಥ, ಲೋಕಮಾನ್ಯ ತಿಲಕ್, ಶ್ರೀ ಅರವಿಂದ ಮುಂತಾದವರು ಜಗತ್ತಿಗೆ ಪ್ರಚುರಪಡಿಸಿದ್ದರು. ಈ ಪರಂಪರೆಯನ್ನು ಪ್ರಧಾನಿ ಮೋದಿ ಮುಂದುವರಿಸುತ್ತಿದ್ದಾರೆ.

ಸಾಂಸ್ಕೃತಿಕ ವಿಶ್ವಾಸ, ಆರ್ಥಿಕ ಅಭಿವೃದ್ಧಿ, ಬೌದ್ಧಿಕ ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ಬಲದಲ್ಲಿ ಭಾರತದ ಅಸ್ತಿತ್ವ ಅಡಗಿದೆ ಎಂಬುದು ಮೋದಿ ನಿಲುವು. 2014ರಲ್ಲಿ ಅವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದಾಗ ಅವರ ನಾಯಕತ್ವದಲ್ಲಿ ಭಾರತವು ಜಾಗತಿಕವಾಗಿ ಏಕಾಂಗಿಯಾಗಬಹುದು ಹಾಗೂ ಅಭಿವೃದ್ಧಿ ಕುಂಠಿತವಾಗಬಹುದು ಎಂದು ಟೀಕಾಕಾರರು ಎಚ್ಚರಿಸಿದ್ದರು. ಆದರೆ ಈಗ ಜಾಗತಿಕವಾಗಿ ಭಾರತದ ಘನತೆ ಹೆಚ್ಚಿದೆ. ಆರ್ಥಿಕವಾಗಿ ಮಹತ್ವದ ಪ್ರಗತಿ ಸಾಧಿಸಿದೆ. ಭಾರತವೀಗ ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಶಕ್ತಿಗಳಲ್ಲಿ ಒಂದಾಗಿದೆ. ರಾಜತಾಂತ್ರಿಕವಾಗಿ ಭಾರತವನ್ನು ವಿಶ್ವದ ಗೌರವಾನ್ವಿತ ಮತ್ತು ಪ್ರಭಾವಿ ರಾಷ್ಟ್ರಗಳ ಪಟ್ಟಿಗೆ ಮೋದಿಯವರು ಸೇರಿಸಿದ್ದಾರೆ. ಎಲ್ಲಾ ರಾಷ್ಟ್ರಗಳ ಜತೆಗೂ ಭಾರತದ ಸಂಬಂಧವು ಸೌಹಾರ್ದಯುತವಾಗಿರುವಂತೆ ಮಾಡಿದ್ದಾರೆ. ಜಗತ್ತನ್ನೇ ಒಂದು ಕುಟುಂಬವಾಗಿ ಪರಿಗಣಿಸುವ ಮೂಲಕ ತಮ್ಮ ರಾಜಕೀಯ ದೃಷ್ಟಿಕೋನವನ್ನು ಅವರು ವಿಸ್ತರಿಸಿಕೊಂಡಿದ್ದಾರೆ. ಭಾರತವು ಒಂದು ಆರ್ಥಿಕ ಶಕ್ತಿಯಷ್ಟೇ ಅಲ್ಲ, ಜಗತ್ತಿನ ಏಕತೆ ಮತ್ತು ಸಹಕಾರವನ್ನು ಪ್ರತಿಪಾದಿಸುವ ಶಕ್ತಿ ಎಂಬ ಸಂದೇಶವನ್ನು ಸಾರಿದ್ದಾರೆ.

ಪ್ರಸ್ತುತ ಮೋದಿಯವರು ಭಾರತದ ಅತ್ಯಂತ ಪ್ರಭಾವೀ ಪ್ರಧಾನಿಯಷ್ಟೇ ಅಲ್ಲದೆ ಮಹತ್ವದ ಜಾಗತಿಕ ನಾಯಕರೂ ಆಗಿದ್ದಾರೆ. ಅವರ ಸಾಧನೆಯನ್ನು ಕೇವಲ ಅವರ ದೀರ್ಘಕಾಲದ ಆಳ್ವಿಕೆಯಿಂದಷ್ಟೇ ಅಳೆಯಲಾಗುವುದಿಲ್ಲ, ದೇಶದ ಪುನರುತ್ಥಾನ ದಲ್ಲಿ ಮತ್ತು ಜಾಗತಿಕ ಶಕ್ತಿಗಳ ಜತೆಗೆ ಭಾರತವನ್ನು ಸೇರಿಸುವಲ್ಲಿ ಸಾಧಿಸಿದ ಸಾಫಲ್ಯದಲ್ಲೂ ಅವರ ಸಾಧನೆ ಅಡಗಿದೆ.

ಕಿರುಸುದ್ದಿ

ಗಾಂಜಾ ಮಾರಾಟ: 126 ಗ್ರಾಂ ಗಾಂಜಾ ವಶ

ದೊಡ್ಡಬಳ್ಳಾಪುರ: ಅಕ್ರಮವಾಗಿ ಗಾಂಜಾ ಸಂಗ್ರಹಿಸಿ ಮಾರಾಟ ಮಾಡುತ್ತಿದ್ದ ಆರೋಪದಡಿ ಯುವಕನೊಬ್ಬನನ್ನು ದೊಡ್ಡಬಳ್ಳಾಪುರ ನಗರ ಪೊಲೀಸರು ಬಂಧಿಸಿದ್ದಾರೆ. ಬಂಧಿತನನ್ನು ಉತ್ತರ ಪ್ರದೇಶ ಮೂಲದ ಮುಶರಫ್ ಅಲಿ ಎಂದು ಗುರುತಿಸಲಾಗಿದೆ. ಆತ ದೊಡ್ಡಬಳ್ಳಾಪುರ ನಗರದ ಅರ್ಕಾವತಿ ಬಡಾವಣೆಯ ಬಾಡಿಗೆ ಮನೆಯಲ್ಲಿ ವಾಸವಾಗಿದ್ದನು ಎಂದು ತಿಳಿದುಬಂದಿದೆ. ನಗರದಲ್ಲಿ ಗಾಂಜಾ ಮಾರಾಟ ಮಾಡುವ ಉದ್ದೇಶದಿಂದ ಉತ್ತರ ಪ್ರದೇಶದಿಂದ ದೊಡ್ಡಬಳ್ಳಾಪುರಕ್ಕೆ ಒಣ ಗಾಂಜಾವನ್ನು ತಂದು ತನ್ನ ಮನೆಯಲ್ಲಿ ಸಂಗ್ರಹಿಸಿಟ್ಟಿದ್ದಾನೆ ಎಂಬ ಖಚಿತ ಮಾಹಿತಿಯ ಮೇರೆಗೆ ದೊಡ್ಡಬಳ್ಳಾಪುರ ನಗರ ಠಾಣೆ ಪೊಲೀಸರು ದಾಳಿ ನಡೆಸಿದರು. ದಾಳಿಯ ವೇಳೆ ಆರೋಪಿಯಿಂದ 6 ಕೆಜಿ 126 ಗ್ರಾಂ ಒಣ ಗಾಂಜಾ ವಶಪಡಿಸಿಕೊಳ್ಳಲಾಗಿದ್ದು, ಆರೋಪಿಯನ್ನು ಬಂಧಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮ ನಾಳೆ

ಬೆಂಗಳೂರು: ನಗರದ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಜೂ.14 ರಂದು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಂಡ ಬೆಂಗಳೂರು ಹೆರಿಟೇಜ್ ಹಬ್ಬ ನಡೆಯಲಿದೆ. ಬೆಳಗ್ಗೆ ಐದು ಗಂಟೆಗೆ ಶಂಖನಾದ, ಗಂಗಾರತಿ, ಮ್ಯಾರಥಾನ್, ಜುಂಬಾ, ಯೋಗ ಪ್ರದರ್ಶನಗಳಿಂದ ಆರಂಭವಾಗುವ ಬೆಂಗಳೂರು ಹೆರಿಟೇಜ್ ಹಬ್ಬಕ್ಕೆ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸದಸ್ಯ ತೇಜಸ್ವಿ ಸೂರ್ಯ ಚಾಲನೆ ನೀಡಲಿದ್ದಾರೆ. ಖ್ಯಾತ ಇತಿಹಾಸ ತಜ್ಞ ಧರ್ಮೇಂದ್ರ ಕುಮಾರ್, ನಟ ಸಿಹಿಕಹಿ ಚಂದ್ರು, ಬೆಂಗಳೂರು ನಗರ ಗಣ್ಯರ ರಕ್ಷಣಾ ವಿಭಾಗದ ಉಪ ಪೊಲೀಸ್ ಆಯುಕ್ತ ಮಂಜುನಾಥ್ ಬಾಬು, ಚಿಕ್ಕಪೇಟೆ ಶಾಸಕ ಉದಯ ಗರುಡಾಚಾರ್, ಗರುಡ ಪ್ರತಿಷ್ಠಾನದ ಮೇದಿನಿ ಗರುಡಾಚಾರ, ಕರ್ನಾಟಕ ಕ್ಯಾನ್ಸರ್ ಸೊಸೈಟಿ ಅಧ್ಯಕ್ಷ ಡಾ.ಸಿ.ಎ.ಕಿಶೋರ್, ಮಾಜಿ ಪೊಲೀಸ್ ಆಯುಕ್ತ ಭಾಸ್ಕರ್ ರಾವ್ ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಫೋನ್-ಇನ್ ಕಾರ್ಯಕ್ರಮದಲ್ಲಿ 1,757 ಕರೆ ಸ್ವೀಕಾರ



ಬೆಂಗಳೂರು: ಉತ್ತರ ನಗರ ಪಾಲಿಕೆಯಲ್ಲಿ 2025 ಸೆಪ್ಟೆಂಬರ್ 26 ರಿಂದ ಆರಂಭವಾದ ಫೋನ್-ಇನ್ ಕಾರ್ಯಕ್ರಮದಲ್ಲಿ ಇದುವರೆಗೆ 1,757 ಕರೆಗಳನ್ನು ಸ್ವೀಕರಿಸಲಾಗಿದ್ದು, 2,253 ಅಹವಾಲುಗಳು ದಾಖಲಾಗಿದೆ ಎಂದು ಬೆಂಗಳೂರು ಉತ್ತರ ನಗರ ಪಾಲಿಕೆ ತಿಳಿಸಿದೆ.

ಒಟ್ಟು ದಾಖಲಾದ 2,253 ಅಹವಾಲುಗಳಲ್ಲಿ 1,793 ಅಹವಾಲುಗಳನ್ನು ಇತ್ಯರ್ಥಪಡಿಸಲಾಗಿದೆ. ಪ್ರಗತಿಯಲ್ಲಿರುವ ಅಹವಾಲುಗಳು - 8 ಪ್ರಗತಿಯಲ್ಲಿದ್ದರೆ, 5 ದೀರ್ಘಾವಧಿ ಪರಿಹಾರದ್ದಾಗಿದೆ. 141 ಉತ್ತರಪಾಲಿಕೆ ಸಂಬಂಧಿಸಿಲ್ಲವಾದ್ದರಿಂದ ಸಂಬಂಧಪಟ್ಟ ಪಾಲಿಕೆಗೆ ರವಾನಿಸಲಾಗಿದೆ. 289 ಅಹವಾಲುಗಳು ಬಾಕಿ ಇದ್ದು ಶೀಘ್ರವಾಗಿ ಪರಿಹರಿಸಲಾಗುವುದು ಎಂದು ಪಾಲಿಕೆ ತಿಳಿಸಿದೆ. ಬಾಕಿ ಇರುವ ಅಹವಾಲುಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಿ, ಸಾರ್ವಜನಿಕರಿಗೆ ಉತ್ತಮ ನಾಗರಿಕ ಸೇವೆಗಳನ್ನು ಒದಗಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.ನಾಗರಿಕರ ಸಮಸ್ಯೆಗಳನ್ನು ನೇರವಾಗಿ ಆಲಿಸಿ, ಅವುಗಳಿಗೆ ತ್ವರಿತ ಸ್ಪಂದನೆ ನೀಡುವ ಉದ್ದೇಶದಿಂದ ಪ್ರತಿ ಶುಕ್ರವಾರ ಫೋನ್-ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದ್ದು, ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ ಎಂದು ಪಾಲಿಕೆ ಮಾಹಿತಿ ನೀಡಿದೆ.

ಶಂಕರ ಮಠದಲ್ಲಿ ಧಾರ್ಮಿಕ ಕಾರ್ಯಕ್ರಮ

ಕೋಲಾರ: ನಗರದ ಶೃಂಗೇರಿ ಶ್ರೀ ಶಂಕರ ಮಠದಲ್ಲಿ ಪರಾಭವ ಅಧಿಕ ಜ್ಯೇಷ್ಠ ಕೃಷ್ಣತ್ರಯೋದಶೀ ಶನಿವಾರ ಮತ್ತು ಚತುರ್ದಶಿ ಭಾನುವಾರ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠದ ಪರಮಪೂಜ್ಯ ಉಭಯ ಜಗದ್ಗುರುವರೇಣ್ಯರ ಪರಮಾನುಗ್ರಹದಿಂದ ಮತ್ತು ಅವರ ಶ್ರೀ ಶಂಕರ ಮಠದ ಸ್ವಾಮಿಗಳ ಆಶೀರ್ವಾದದಂತೆ ಅಧಿಕ ಮಾಸದ ನಿಮಿತ್ತ ಕೋಲಾರ ಶೃಂಗೇರಿ ಶ್ರೀ ಶಂಕರ ಮಠದ ವತಿಯಿಂದ ಅಧಿಕ ಪುಣ್ಯಫಲಪ್ರದವಾದ ರಾಮ ತಾರಕ ಜಪ ಯಜ್ಞ ನಡೆಯಲಿದೆ.

ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ | ನ್ಯಾಯಾಧೀಶ ಶ್ರೀಶೈಲ್ ಭೀಮಸೇನ ಬಾಗಡಿ ಎಚ್ಚರಿಕೆ

ಬಾಲಕಾರ್ಮಿಕ ಪದ್ಧತಿ ಶಿಕ್ಷಾರ್ಹ ಅಪರಾಧ

ದೊಡ್ಡಬಳ್ಳಾಪುರ: ಸಮಾಜದಿಂದ ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಶಿಕ್ಷಣ ಬಲವಾದ ಆಯುಧ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಶ್ರೀಶೈಲ್ ಭೀಮಸೇನ ಬಾಗಡಿ ಅಭಿಪ್ರಾಯಪಟ್ಟರು.

ತಾಲೂಕಿನ ಬಾಶೆಟ್ಟಿಹಳ್ಳಿಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ನಡೆದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬಡತನ ಹಾಗೂ ಅನಕ್ಷರತೆಯಿಂದ ಬಾಲಕಾರ್ಮಿಕ ಪದ್ಧತಿ ಹೆಚ್ಚಾಗುತ್ತಿದೆ. ಪ್ರತಿಯೊಂದು ಮಗುವಿಗೆ ಶಿಕ್ಷಣ ಕಡ್ಡಾಯ ಶಿಕ್ಷಣವನ್ನು ಪೋಷಕರು ಕೊಡಿಸಬೇಕು. ಇದರಿಂದ ತಮ್ಮ ಮಕ್ಕಳ ಭವಿಷ್ಯ ಉಜ್ವಲವಾಗುವ ಜತೆಗೆ ಬಾಲಕಾರ್ಮಿಕ ಪದ್ಧತಿ ಸಂಪೂರ್ಣ ನಿರ್ಮೂಲನೆ ಮಾಡಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಕಾರ್ಖಾನೆ ಮಾಲೀಕರು ಅಡ್ಡದಾರಿಯಲ್ಲಿ ಬಾಲಕ ಕಾರ್ಮಿಕರ ಆಧಾರ್ ಕಾರ್ಡ್‌ನಲ್ಲಿ ವಯಸ್ಸು ತಿದ್ದುಪಡಿ ಮಾಡಿ, ದುಡಿಮೆಗೆ ಪಡೆಯುತ್ತಿರುವುದು ಕಾನೂನು ಬಾಹಿರ. ಕಾರ್ಖಾನೆಗಳಲ್ಲಿ ಮಹಿಳಾ ಸುರಕ್ಷತೆ, ದೌರ್ಜನ್ಯ ನಡೆಯದಂತೆ ಆಂತರಿಕ ದೂರ ಸಮಿತಿ ಕಡ್ಡಾಯವಾಗಿ ಇರಬೇಕು. ಆಂತರಿಕ ದೂರ ಸಮಿತಿ ಇರದ ಕಾರ್ಖಾನೆ ವಿರುದ್ಧ ದೂರು ದಾಖಲಿಸಲಾಗುವುದು ಎಂದರು.

ವಿದ್ಯಾರ್ಥಿಗಳು ಬಾಲಕಾರ್ಮಿಕ ನಿಷೇಧ ಕಾಯ್ದೆ ಕುರಿತು ಅರಿತು ತಮ್ಮ ಸುತ್ತಮುತ್ತಲಿನ ನಾಗರಿಕರಿಗೆ ಜಾಗೃತಿ ಮೂಡಿಸಿ, ಬಾಲ ಕಾರ್ಮಿಕರ ರಕ್ಷಣೆಗಾಗಿ ಶಾಲಾ ಶಿಕ್ಷಕರು, ಪೊಲೀಸರಿಗೆ ಇಲ್ಲವೇ ಇಲಾಖೆ ಸಹಾಯವಾಣಿಗೆ ತಿಳಿಸಬೇಕು ಎಂದು ಕರೆ ನೀಡಿದರು.

ಮಕ್ಕಳ ದೌರ್ಜನ್ಯ ಹಾಗೂ ಬಾಲಕಾರ್ಮಿಕ ದುಡಿಮೆ ಕಂಡು ಬಂದಲ್ಲಿ ಮಕ್ಕಳ ಸಹಾಯವಾಣಿ 1098 ನೆನಪಿನಲ್ಲಿಟ್ಟುಕೊಂಡು ವಿದ್ಯಾರ್ಥಿಗಳು ಮಾಹಿತಿ ತಿಳಿಸಬೇಕು. ಜಿಲ್ಲೆಯಲ್ಲಿ 120 ವಸತಿಶಾಲೆ ಹಾಗೂ ಹಾಸ್ಟೆಲ್ ಗಳಿದ್ದು, ಬಡ ಪೋಷಕರು ತಮ್ಮ ಮಕ್ಕಳಿಗೆ ಸೇರಿಸಿ, ಶೈಕ್ಷಣಿಕ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳು ಮೊಬೈಲ್ ಬಳಕೆಯನ್ನು ಚಟುವಾಗಿ ರೂಡಿಸಿಕೊಳ್ಳದೇ ಅವಶ್ಯಕ ವಿದ್ಯಾಭ್ಯಾಸಕ್ಕಾಗಿ ಬಳಸಿಕೊಂಡು ಜ್ಞಾನಾರ್ಜನೆ ವೃದ್ಧಿಸಿಕೊಳ್ಳಿ ಎಂದು ಜಿಲ್ಲಾಧಿಕಾರಿ ಕಿವಿ ಮಾತು ಹೇಳಿದರು.

ಕಾನೂನು ಪ್ರಾಧಿಕಾರ ಸೇವಾ ಅಧಿಕಾರೇತರ ಸದಸ್ಯ ವೆಂಕಟೇಶ್ ಮಾತನಾಡಿ, ಮಕ್ಕಳು ದೇಶದ ಸಂಪತ್ತು, ಆ ಸಂಪತ್ತು ಬೆಳೆಸುವ ಕೆಲಸ ಪ್ರತಿಯೊಬ್ಬ ಪೋಷಕರು ಮಾಡಬೇಕು. ಬಾಲಕಾರ್ಮಿಕ ಪದ್ಧತಿ ತಡೆಯುವಲ್ಲಿ ನಮ್ಮೆಲ್ಲರ ಜವಾಬ್ದಾರಿಯು ಮಹತ್ವದ್ದು, ಪಂಚಾಯತ ಮಟ್ಟದಿಂದಲೇ ಮಕ್ಕಳ ಹಕ್ಕುಗಳು, ಬಾಲಕಾರ್ಮಿಕ ಪದ್ಧತಿ ನಿಷೇಧ ಹಾಗೂ ಬಾಲ್ಯವಿವಾಹ ತಡೆ ಬಗ್ಗೆ ನಿರಂತರ ಅರಿವು ಮೂಡಿಸಬೇಕು ಎಂದರು.

ಇದಕ್ಕೂ ಮುನ್ನ ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದ ಬ್ಯಾಂಕ್ ಸರ್ಕಲ್ ನಿಂದ ಸರ್ಕಾರಿ ಪ್ರೌಢಶಾಲೆ ವರೆಗೂ ವಿದ್ಯಾರ್ಥಿಗಳಿಂದ "ಜಾಗೃತಿ ಜಾಥಾ ಕಾರ್ಯಕ್ರಮ" ನಡೆಯಿತು.

ಇದೇ ಸಂದರ್ಭದಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಕೆ. ಚಿತ್ರಾವತಿ ಅವರು ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ಕಾರ್ಯಕ್ರಮದಲ್ಲಿ ಫೋರ್ವಾ ಇಂಡಿಯಾ ಕಂಪನಿಯ ಜಿ.ವಿ. ರಾವ್, ದೊಡ್ಡಬಳ್ಳಾಪುರ ತಾಲ್ಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿ ಡಿ. ಕ್ರಾಂತಿ ಕಿರಣ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಮುದ್ದಣ್ಣ ಎಂ., ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ ಎಸ್ ಅನಿತಾಲಕ್ಷ್ಮೀ., ಬೆಂಗಳೂರು ಗ್ರಾಮಾಂತರ ಉಪ ವಿಭಾಗದ ಕಾರ್ಮಿಕ ಅಧಿಕಾರಿ ಮುಕುಂದ ಕೆ. ಜಿ., ದೊಡ್ಡಬಳ್ಳಾಪುರ ಉಪವಿಭಾಗಾಧಿಕಾರಿ ಟಿ. ಆರ್. ಮಂಜುನಾಥ್, ತಹಶೀಲ್ದಾರ್ ಮಲ್ಲಪ್ಪ ಉಪಸ್ಥಿತರಿದ್ದರು.



ಮಕ್ಕಳ ದುಡಿಮೆ ಅಪರಾಧ

14 ವರ್ಷದೊಳಗಿನ ಬಾಲಕಾರ್ಮಿಕರನ್ನು ದುಡಿಮೆಗೆ ತೆಗೆದುಕೊಳ್ಳಬಾರದು. ಅಪಾಯಕಾರಿ ಕಾರ್ಖಾನೆಗಳಲ್ಲಿ ದುಡಿಯುವ 18 ವರ್ಷದೊಳಗಿನ ಬಾಲಕಾರ್ಮಿಕರ ರಕ್ಷಣೆಗೆ ಅಧಿಕಾರಿಗಳು ಮುಂದಾಗಿ, ಬಾಲಕಾರ್ಮಿಕ ಕಾಯ್ದೆಯ ಜಾಗೃತಿ ಮೂಡಿಸಬೇಕು. ಯಾವುದೇ ಮಗು ಶಾಲೆಯಿಂದ ಹೊರಗುಳಿಯಬಾರದು. ಪ್ರತಿಯೊಂದು ಮಗುವಿಗೆ ಕಡ್ಡಾಯವಾಗಿ ಶಿಕ್ಷಣ ಸಿಗುವಂತೆ ಪೋಷಕರು ಜವಾಬ್ದಾರಿ ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕೆ.ಎನ್. ಅನುರಾಧಾ ಹೇಳಿದರು.

ವಿವಿಧ ಬೇಡಿಕೆ ಈಡೇರಿಕೆಗಾಗಿ ಮನವಿ

ವಿಜಯಪುರ: ವಿವಿಧ ಬೇಡಿಕೆಗಳನ್ನು ಈಡೇರಿಕೆಗಾಗಿ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಘಟಕದ ಪದಾಧಿಕಾರಿಗಳು ಕ್ಷೇತ್ರ ಶಿಕ್ಷಣಾಧಿಕಾರಿ ಲಲಿತಮ್ಮ ಅವರಿಗೆ ಗುರುವಾರ ಮನವಿ ಪತ್ರ ಸಲ್ಲಿಸಿದರು.

ಸಂಘದ ತಾಲ್ಲೂಕು ಅಧ್ಯಕ್ಷ ಹಾಗೂ ಹಾರೋಹಳ್ಳಿ ಸರ್ಕಾರಿ ಶಾಲೆಯ ಶಿಕ್ಷಕ ಎಸ್.ಪಿ.ಮೋಹನ್ ಮಾತನಾಡಿ, ಶಿಕ್ಷಣ ಇಲಾಖೆಯಲ್ಲಿ ನಡೆಯುವ ತರಬೇತಿ ಕಾರ್ಯಾಗಾರ ಹಾಗೂ ಕಾರ್ಯಕ್ರಮಗಳಿಗೆ ಜಿಲ್ಲಾ ಮತ್ತು ತಾಲ್ಲೂಕು ಸಂಘದಪದಾಧಿಕಾರಿಗಳಿಗೆಶಿಷ್ಟಾಚಾರದಂತೆಭಾಗವಹಿಸಲು ಅವಕಾಶ ನೀಡಬೇಕು. ಜಿಪಿಟಿ ಶಿಕ್ಷಕರ ಕುಂದುಕೊರತೆಗಳ ಬಗ್ಗೆ ಗುರುಸ್ಪಂದನ ಕಾರ್ಯಕ್ರಮ ನಡೆಸಬೇಕು ಎಂದರು.

ಇಲಾಖೆಯಲ್ಲಿ ನಡೆಯುವ ತರಬೇತಿ ಕಾರ್ಯಾಗಾರ ಹಾಗೂ ಕಾರ್ಯಕ್ರಮಗಳಿಗೆ ಜಿಲ್ಲಾ ಮತ್ತು ತಾಲ್ಲೂಕು ಸಂಘದ ಪದಾಧಿಕಾರಿಗಳಿಗೆ ಶಿಷ್ಟಾಚಾರದಂತೆ ಭಾಗವಹಿಸಲು ಅವಕಾಶ ನೀಡಬೇಕು. ಇಲಾಖೆಯಲ್ಲಿ ನಿರ್ದೇಶನಗಳು ಹಾಗೂ ಸುತ್ತೋಲೆಗಳ ಮಾಹಿತಿಯನ್ನು ಸಂಘದ ಅಧ್ಯಕ್ಷರಿಗೆ ವಾಟ್ಸಪ್ ಮೂಲಕ ತಲುಪಿಸಬೇಕು ಎಂದು ತಿಳಿಸಿದರು.

ನಲಿ ಕಲಿ ತರಗತಿಗಳಿಗೆ ನೀಡುವ ತರಬೇತಿ ಕಾರ್ಯಾಗಾರ, ಪಾಠ ಬೋಧನೆ ಹಾಗೂ ಅನ್ಯ ಶಾಲೆಗಳಿಗೆ ತಾತ್ಕಾಲಿಕ ಕಾಯಂ ಬೋಧನಾ ಹಂಚಿಕೆ ಮಾಡಬಾರದು. 2022 -23 ನೇ ಸಾಲಿನಲ್ಲಿ ಆಯ್ಕೆಯಾದ ಶಿಕ್ಷಕರ ಖಾಯಂಪೂರ್ವ ಸೇವಾ ಅವಧಿಯನ್ನು ಮಂಜೂರು ಮಾಡಬೇಕು. ಹತ್ತು ವರ್ಷಗಳ ಕಾಲ ಮಿತಿಬಡ್ತಿಯಿಂದ ವಂಚಿತರಾಗಿರುವ ಶಿಕ್ಷಕರಿಗೆ ಮಿತಿಬಡ್ತಿ ನೀಡಬೇಕು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ ಎಂದು ಹೇಳಿದರು.

ಮನವಿ ಸ್ವೀಕರಿಸಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಲಲಿತಮ್ಮ, ಶಿಕ್ಷಕರ ಬೇಡಿಕೆಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಉಪಾಧ್ಯಕ್ಷ ದಯಾನಂದ್, ಕಾರ್ಯದರ್ಶಿ ಸುನೀಲ್, ಮಹಿಳಾ ಪ್ರತಿನಿಧಿ ಗೀತಮ್ಮ ಇದ್ದರು.

ವಿವಿಧ ಬೇಡಿಕೆಗಳನ್ನು ಈಡೇರಿಕೆಗಾಗಿ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಘಟಕದ ಪದಾಧಿಕಾರಿಗಳು ಕ್ಷೇತ್ರ ಶಿಕ್ಷಣಾಧಿಕಾರಿ ಲಲಿತಮ್ಮ ಅವರಿಗೆ ಗುರುವಾರ ಮನವಿ ಪತ್ರ ಸಲ್ಲಿಸಿದರು.





ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉಪರಾಷ್ಟ್ರಪತಿ ಸಿ. ಪಿ. ರಾಧಾಕೃಷ್ಣನ್ ಅವರನ್ನು ದೆಹಲಿಯ ಅವರ ನಿವಾಸದಲ್ಲಿ ಶುಕ್ರವಾರ ಸೌಜನ್ಯದ ಭೇಟಿ ಮಾಡಿ, ಸಮಾಲೋಚನೆ ನಡೆಸಿದರು.

ಮಕ್ಕಳ ದುಡಿಮೆ ಮುಕ್ತಗೊಳಿಸಿ: ಡಾ.ಎಂ ಚಿಕ್ಕಣ್ಣ

ದೊಡ್ಡಬಳ್ಳಾಪುರ: ಪ್ರತಿ ಮಗುವಿಗೂ ಶಿಕ್ಷಣ, ಪ್ರತಿ ಮಗುವಿಗೂ ಸುರಕ್ಷಿತ ಬಾಲ್ಯ ಎಂಬ ಸಂಕಲ್ಪದೊಂದಿಗೆ ಬಾಲಕಾರ್ಮಿಕತೆಯ ಮುಕ್ತ ಸಮಾಜವನ್ನು ನಿರ್ಮಿಸೋಣ ಎಂದು ದೇವರಾಜ್ ಅರಸ್ ವ್ಯವಹಾರ ನಿರ್ವಹಣಾ ಮಹಾವಿದ್ಯಾಲಯದ ಎನ್.ಎಸ್.ಎಸ್. ಅಧಿಕಾರಿ ಡಾ. ಎಂ ಚಿಕ್ಕಣ್ಣ ಹೇಳಿದರು.

ದೇವರಾಜ್ ಅರಸ್ ವ್ಯವಹಾರ ನಿರ್ವಹಣಾ ಮಹಾವಿದ್ಯಾಲಯ ಹಾಗೂ ದೇವರಾಜ್ ಅರಸ್ ಪ್ರಥಮ ದರ್ಜೆ ಸಂಜೆ ಕಾಲೇಜಿನ ರಾಷ್ಟ್ರೀಯಸೇವಾಯೋಜನಾಘಟಕದನೇತೃತ್ವದಲ್ಲಿ ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು.

ಪ್ರತಿಯೊಬ್ಬ ಮಗುವಿಗೂ ಶಿಕ್ಷಣ ಪಡೆಯುವ, ಆಟವಾಡುವ ಮತ್ತು ಸಂತೋಷದಿಂದ ಬದುಕುವ ಹಕ್ಕು ಇದೆ. ಆದ್ದರಿಂದ ಬಾಲಕಾರ್ಮಿಕತೆಯನ್ನು ನಿರ್ಮೂಲನೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ನಾವು ನಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಾಲಕಾರ್ಮಿಕರನ್ನು ಕಂಡರೆ ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಮಕ್ಕಳಿಗೆ ಶಿಕ್ಷಣದ ಮಹತ್ವವನ್ನು ತಿಳಿಸಬೇಕು ಮತ್ತು ಅವರ ಹಕ್ಕುಗಳನ್ನು ರಕ್ಷಿಸಲು ಕೈಜೋಡಿಸ ಬೇಕು, ಮಕ್ಕಳು ದೇಶದ ಭವಿಷ್ಯ ಎಂದರು.

ಬಾಲ ಕಾರ್ಮಿಕತೆಯ ವಿರುದ್ಧ ಹೋರಾಡುವ ಹಾಗೂ ಮಕ್ಕಳ ಸಮಗ್ರ ಅಭಿವೃದ್ಧಿಗೆ ಸಹಕರಿಸುವ ಸಂಕಲ್ಪದ ಪ್ರಮಾಣ ವಚನವನ್ನು ಡಾ.ಎಂ ಚಿಕ್ಕಣ್ಣ ಬೋಧಿಸಿದರು.

ಕಾಲೇಜಿನ ಉಪ ಪ್ರಾಂಶುಪಾಲರಾದ ಕೆ. ದಕ್ಷಿಣಾಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಭಾನುಶ್ರೀ, ಲಕ್ಷ್ಮೀಶ, ವೆಂಕಟೇಶ್ ಮುತ್ತಿತರರು ಹಾಜರಿದ್ದರು.



ಪರಿಸರ ರಕ್ಷಣೆಗೆ ಯುವಕರು ಮುಂದಾಗಲಿ

ಆನೇಕಲ್: ಪರಿಸರ ಸಂರಕ್ಷಣೆ ನಮ್ಮ ಎಲ್ಲರ ಜವಾಬ್ದಾರಿ ಹಾಗಾಗಿ ಪರಿಸರವನ್ನು ಉಳಿಸಿ ಬೆಳೆಸುವುದರಿಂದ ಮನುಷ್ಯರು ನೆಮ್ಮದಿಯಾಗಿ ಜೀವನ ನಡೆಸಬಹುದು ಎಂದು ಮರಸೂರು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮುರಳಿ ತಿಳಿಸಿದರು,

ಅವರು ಮರಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಾಲ್ಕನೇ ವಾರ್ಡ್‌ನ ಉದ್ಯಾನವನದಲ್ಲಿ ಮೈಕ್ರೋ ಪ್ಲಾಸ್ಟಿಕ್ ಕಂಪನಿ ಹಾಗೂ ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಹಮ್ಮಿಕೊಂಡ ಪರಿಸರ ದಿನಾಚರಣೆ ಅಂಗವಾಗಿ ಗಿಡ ನೆಡುವ ಮೂಲಕ ಚಾಲನೆ ನೀಡಿ ಮಾತನಾಡಿದರು, ಪರಿಸರ ಸಂರಕ್ಷಣೆ ಮಾಡಬೇಕು ಏಕೆಂದರೆ ಗಿಡ ಮರಗಳನ್ನು ನಾಶ ಮಾಡಿ ಸಿಮೆಂಟ್ ಕಾಂಕ್ರೀಟ್ ನಾಡಾಗಿ ನಿರ್ಮಿಸುತ್ತಿದರೆ ಹಾಗಾಗಿ ಮನುಷ್ಯ ದುರಾಸೆಯಿಂದ ಪರಿಸರ ಹಾಗೂ ಪ್ರಕೃತಿ ನಾಶ ಮಾಡದೆ ಪ್ರತಿಯೊಬ್ಬರು ಗಿಡಗಳನ್ನು ಬೆಳಿಸಿ ಸಂರಕ್ಷಣೆ ಮಾಡುವುದು ನಮ್ಮ ಕರ್ತವ್ಯ ಎಂದರು,

ಮರಸೂರು ಗೇಟ್ ಮೈಕ್ರೋ ಪ್ಲಾಸ್ಟಿಕ್ ಕಂಪನಿಯ ಮಾನವನ ಸಂಪನ್ಮೂಲ ಮ್ಯಾನೇಜರ್ ಪುಟ್ಟಪ್ಪ ಮಾತನಾಡಿ, ಪರಿಸರ ದಿನಾಚರಣೆ ಅಂಗವಾಗಿ ಸಿಎಸ್ ಆರ್ ಅನುದಾನದಲ್ಲಿ ಮರಸೂರು ಗ್ರಾಮದ ನಾಲ್ಕನೇ ವಾರ್ಡ್ ಅಂಗನವಾಡಿ ಪಕ್ಕದ ಪಾರ್ಕ್‌ನಲ್ಲಿ ನೂರಾರು ವಿವಿಧ ರೀತಿಯ ಹಣ್ಣಿನ ಸಸಿಗಳನ್ನು ನೆಡುವ ಮೂಲಕ ಪರಿಸರ ದಿನಾಚರಣೆ ಮಾಡಲಾಗಿದೆ.

ಇನ್ನು ಪರಿಸರ ದಿನಾಚರಣೆ ವೇಳೆ ಒಂದು ದಿನಕ್ಕೆ ಸೀಮಿತವಾಗದೆ ವರ್ಷ ಪೂರ್ತಿ ಗಿಡಗಳನ್ನು ನೆಟ್ಟು ಪೋಷಣೆ ಮಾಡುವ ದೊಡ್ಡ ಜವಾಬ್ದಾರಿ ಇದೆ. ಹಾಗಾಗಿ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂದು ತಿಳಿಸಿದರು,

ಇದೇ ಸಂದರ್ಭದಲ್ಲಿ ಮರಸೂರು ಗ್ರಾಮ ಪಂಚಾಯಿತಿ ಮಾಜಿ. ಅಧ್ಯಕ್ಷರಾದ ಪುರುಷೋತ್ತಮ್ ರೆಡ್ಡಿ, ಪಿಡಿಓ. ಮುರಳಿ. ಕಾರ್ಯದರ್ಶಿ ಯೋಗೇಶ್, ಸಂಪಂಗಿ ಹಾಗೂ ಮೈಕ್ರೋ ಪ್ಲಾಸ್ಟಿಕ್ ಕಂಪನಿಯ ಹೇಮಂತ್, ಶಿವಕುಮಾರ್, ಶ್ರೀನಿವಾಸ್ , ರಂಜನಿ. ಮುಂತಾದವರು ಹಾಜರಿದ್ದರು



ಲೋಕಾಯುಕ್ತರಿಂದ ಸ್ವಯಂಪ್ರೇರಿತ ಮೊಕದ್ದಮೆ ದಾಖಲು

ರಾಮನಗರ: ನಗರದ ಎಪ್ಪಾದಲ್ಲೇ ಅತಿ ದೊಡ್ಡ ರೇಷ್ಮೆಗೂಡು ಮಾರುಕಟ್ಟೆಯ ಶೌಚಾಲಯ ಹಾಗೂ ವಾಶ್ ಬೇಸಿನ್‌ಗಳ ಅತ್ಯಂತ ದಯನೀಯ ಸ್ಥಿತಿ ಮತ್ತು ಕುಡಿಯುವ ನೀರಿನ ಕೊರತೆಯ ಕುರಿತು ಹೊಸ ದಿಗಂತ ದಿನಪತ್ರಿಕೆಯಲ್ಲಿ ಜೂನ್ 9 ರಂದು ಪ್ರಕಟವಾದ ರೇಷ್ಮೆ ಮಾರುಕಟ್ಟೆ ದುರವಸ್ಥೆ ಕುರಿತ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್: ದುಸ್ಥಿತಿ ಕಂಡು ಸಾರ್ವಜನಿಕರ ಆಕ್ರೋಶ ವಿಶೇಷ ವರದಿಗೆ ತಕ್ಷಣದ ಮತ್ತು ವ್ಯಾಪಕ ಜನಪರ ಫಲಶ್ರುತಿ ಸಿಕ್ಕಿದೆ.

ವಿಶೇಷ ವರದಿ ಪ್ರಕಟವಾದ ಬೆನ್ನಲ್ಲೇ ಎಚ್ಚೆತ್ತ ಕರ್ನಾಟಕ ಲೋಕಾ ಯುಕ್ತರು ಸ್ವಯಂಪ್ರೇರಿತ ಮೊಕದ್ದಮೆ ದಾಖಲಿಸಿಕೊಂಡು ಕಠಿಣ ಕ್ರಮಕ್ಕೆ ಮುಂದಾಗಿದ್ದಾರೆ. ಕರ್ನಾಟಕ ಲೋಕಾ ಯುಕ್ತ ಕಾಯ್ದೆ 1984ರ ಕಲಂ7(2)ಸಹವಾಚಿ9(3)(ಎ) ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಮಹತ್ವದ ಆದೇಶ ಹೊರಡಿಸಿದ್ದಾರೆ.


ದುಸ್ಥಿತಿ ಕಂಡು ಸಾರ್ವಜನಿಕರ ಆಕ್ರೋಶ

ಮಾರುಕಟ್ಟೆಯ ದುರವಸ್ಥೆಯ ಬಗ್ಗೆ ಆಕ್ರೋಶ ಗೊಂಡಿದ್ದ ರೈತರು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದ ವಿಡಿಯೋ ಆಧರಿಸಿ ಪತ್ರಿಕೆ ವರದಿ ಪ್ರಕಟಿಸಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿರುವ ಲೋಕಾಯುಕ್ತರು, ರಾಮನಗರ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ರೇಷ್ಮೆ ಮಾರುಕಟ್ಟೆಯ ಉಪ ನಿರ್ದೇಶಕರಿಗೆ ಈ ಕೂಡಲೇ ನಿಯಮಾನುಸಾರ ಅಗತ್ಯ ಕ್ರಮ ಕೈಗೊಂಡು, ವರದಿ ಸಲ್ಲಿಸುವಂತೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ. ಅಲ್ಲದೆ ಮುಂದಿನ ವಿಚಾರಣೆಯನ್ನು ಜುಲೈ 10, 2026 ಕ್ಕೆ ನಿಗದಿಪಡಿಸಿದ್ದಾರೆ.

ಶಿಕ್ಷಣ ಇಲಾಖೆ ಸುತ್ತೋಲೆಗೆ ಹೈಕೋರ್ಟ್ ತಡೆ

ಬೆಂಗಳೂರು: ಕಡ್ಡಾಯ ಶಿಕ್ಷಣ ಹಕ್ಕು (ಆರ್‌ಟಿಇ) ಕಾಯಿದೆ ಅಡಿ 2025-26ನೇ ಶೈಕ್ಷಣಿಕ ವರ್ಷಗಳಲ್ಲಿ ಎಂಟನೇ ತರಗತಿಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 9 ಮತ್ತು 10ನೇ ತರಗತಿವರೆಗೂ ಅದೇ ಶಾಲೆಯಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ಅನುಮತಿ ನೀಡಿ ಶಿಕ್ಷಣ ಇಲಾಖೆ ಹೊರಡಿಸಿದ್ದ ಸುತ್ತೋಲೆಗೆ ಹೈಕೋರ್ಟ್ ಗುರುವಾರ ಮಧ್ಯಂತರ ತಡೆ ನೀಡಿದೆ. ರಾಜ್ಯ ಸರ್ಕಾರ ಮೇ 21ರಂದು ಹೊರಡಿಸಿದ್ದ ಸುತ್ತೋಲೆ ಪ್ರಶ್ನಿಸಿ ಕರ್ನಾಟಕದ ಖಾಸಗಿ ಶಾಲೆಗಳ ಸಂಘ ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಕೆಲ ಕಾಲ ಅರ್ಜಿ ಆಲಿಸಿದ ಪೀಠವು ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿರುವ ವಿಷಯ ಪರಿಶೀಲನೆಗೊಳಪಡಬೇಕಾದ ಅವಶ್ಯಕತೆಯಿದ್ದು, ಅಂತಿಮ ಇತ್ಯರ್ಥದ ತನಕ ಸುತ್ತೋಲೆಯ ಜಾರಿಗೆ ತಡೆ ನೀಡಬೇಕು ಎಂಬ ಅರ್ಜಿದಾರರ ಮಧ್ಯಂತರ ಮನವಿಯನ್ನು ಪರಿಗಣಿಸಲಾಗುತ್ತಿದ್ದು, ಮುಂದಿನ ವಿಚಾರಣೆವರೆಗೆ ಸುತ್ತೋಲೆಗೆ ತಡೆ ನೀಡಲಾಗಿದೆ ಎಂದು ಹೇಳಿತು.

ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಅವರ ವಿರುದ್ಧ ಕಾರ್ಯಕರ್ತರ ಆಕ್ರೋಶ

ದೇವನಹಳ್ಳಿ ಜೆಡಿಎಸ್‌ನಲ್ಲಿ ಒಗ್ಗಟ್ಟು ಅನಿವಾರ್ಯ

ದೇವನಹಳ್ಳಿ: ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಅವರ ವಿರುದ್ಧ ಜೆಡಿಎಸ್ ಪಕ್ಷದ ಕೆಲವು ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪಕ್ಷದ ಹಿರಿಯ ನಾಯಕರನ್ನು ಕಡೆಗಣಿಸಿ, ತಮ್ಮ ಬೆಂಬಲಿಗರಿಗೆ ಮಾತ್ರ ಪದಾಧಿಕಾರಿಗಳ ನೇಮಕಾತಿ ಮಾಡಲಾಗುತ್ತಿದೆ ಎಂಬ ಆರೋಪಗಳು ಕೇಳಿಬಂದಿವೆ.

ಪಟ್ಟಣದ ಪರಿಶೀಲನಾ ಮಂದಿರದಲ್ಲಿ ನಡೆದ ಸಭೆಯಲ್ಲಿ ಜೆಡಿಎಸ್ ಎಸ್‌ಸಿ ಘಟಕದ ಅಧ್ಯಕ್ಷ ಮುಖಂಡರು ಭಾಗವಹಿಸಿ ತಮ್ಮ ಅಸಮಾಧಾನ ಹೊರಹಾಕಿದರು. ಮುಖಂಡ ಕಾರಹಳ್ಳಿ ಶ್ರೀನಿವಾಸ್ ಮಾತನಾಡಿ, ಹಲವು ವರ್ಷಗಳಿಂದ ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರು ಮತ್ತು ಹಿರಿಯ ನಾಯಕರನ್ನು ನಿರ್ಲಕ್ಷಿಸಲಾಗುತ್ತಿದೆ ಎಂದು ಆರೋಪಿಸಿದರು.

ಪಕ್ಷದೊಳಗಿನ ಭಿನ್ನಾಭಿಪ್ರಾಯಗಳು ಹೆಚ್ಚಾದರೆ ಅದು ಜೆಡಿಎಸ್‌ಗೆ ಹಾನಿಕಾರಕವಾಗಬಹುದು. ಆದ್ದರಿಂದ ಎಲ್ಲಾ ಮುಖಂಡರನ್ನು ಒಂದೇ ವೇದಿಕೆಗೆ ಕರೆದು ಮಾತುಕತೆ ನಡೆಸಿ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಅವರು ಒತ್ತಾಯಿಸಿದರು.

ಹಾಗೆಯೇ, ರಾಜ್ಯದ ಹಿರಿಯ ನಾಯಕರು ಮತ್ತು ಪಕ್ಷದ ಯುವ ನಾಯಕರು ಮಧ್ಯಪ್ರವೇಶಿಸಿ ದೇವನಹಳ್ಳಿ ಕ್ಷೇತ್ರದಲ್ಲಿನ ಭಿನ್ನಮತವನ್ನು ಶಮನಗೊಳಿಸಬೇಕು ಎಂದು ಸಭೆಯಲ್ಲಿ ಆಗ್ರಹಿಸಲಾಯಿತು.

ಸಭೆಯಲ್ಲಿ ಭಾಗವಹಿಸಿದ ಮುಖಂಡರು, ಪಕ್ಷದ ಸಂಘಟನೆಯನ್ನು ಬಲಪಡಿಸಲು ಎಲ್ಲರಿಗೂ ಸಮಾನ ಅವಕಾಶ ನೀಡಬೇಕು ಹಾಗೂ ನೇಮಕಾತಿಗಳಲ್ಲಿ ಪಾರದರ್ಶಕತೆ ಇರಬೇಕು ಎಂದು ಅಭಿಪ್ರಾಯ ಪಟ್ಟರು.

ಎಸ್.ಸಿ.ಘಟಕದ ಮುಖಂಡ ಮಾಜಿ ಪುರಸಭಾ ಅಧ್ಯಕ್ಷ ನರಸಿಂಹಮೂರ್ತಿ ಮಾತನಾಡಿ, ತಾಲೂಕಿನಲ್ಲಿ ರಚನೆ ಮಾಡಿರುವ ಜೆಡಿಎಸ್‌ನ ಎಲ್ಲಾ ಘಟಕದ ಪದಾಧಿಕಾರಿಗಳ ನೇಮಕವನ್ನು ರದ್ದು ಗೊಳಿಸಿ ಎಲ್ಲಾ ಹಿರಿಯ-ಕಿರಿಯ ಮುಖಂಡರ ಸಮ್ಮುಖದಲ್ಲಿ ಸಭೆ ಕರೆದು ಸಾಮಾನ್ಯ, ಎಸ್.ಸಿ ಘಟಕವಿರಬಹುದು ಒಮ್ಮತದಿಂದ ನೂತನವಾಗಿ ಪದಾಧಿಕಾರಿಗಳನ್ನು ನೇಮಕ ಮಾಡಬೇಕು ಎಂದರು.

ತಾಲೂಕು ಸೊಸೈಟಿ ಮಾಜಿ ಉಪಾಧ್ಯಕ್ಷ ವೆಂಕಟಗಿರಿಕೋಟೆ ಈರಪ್ಪ ಮಾತನಾಡಿ, ಹಿಂದಿನಿಂದಲೂ ಜೆ.ಡಿ.ಎಸ್ ಪಕ್ಷವನ್ನು ಮುನ್ನೆಲೆಗೆ ತರುವಲ್ಲಿ ಬಹಳ ಶ್ರಮವಹಿಸಿರುವ ಮುಖಂಡರನ್ನು ಕಡೆಗಣಿಸಿರುವುದು ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿಯವರಿಗೆ ಶೋಭೆ ತರುವುದಿಲ್ಲ, ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಪರ್ಯಾಯ ಮುಖಂಡ ರನ್ನು ಆಯ್ಕೆ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಈ ಸಮಯದಲ್ಲಿ ರೆಡ್ಡಿಹಳ್ಳಿ ಮುನಿರಾಜು, ಮುನಿರಾಜು, ಗ್ರಾ.ಪಂ. ಮಾಜಿ ಅಧ್ಯಕ್ಷ ವೇಣುಗೋಪಾಲ್, ಎಸ್.ಸಿಘಟಕದಮಾಜಿಅಧ್ಯಕ್ಷ ಎಂ.ಎಂ. ಶ್ರೀನಿವಾಸ್, ದೇವನಹಳ್ಳಿ ಶ್ರೀನಿವಾಸ್, ಹುರುಳುಗುರ್ಕಿ ಮುನಿನಾರಾಯಣಪ್ಪ, ನರಸಿಂಹಮೂರ್ತಿ, ಮಾಜಿ ಪುರಸಭಾ ಸದಸ್ಯ ಹೆಚ್. ಎಂ. ಕೃಷ್ಣಪ್ಪ, ಆಣ್ಣೇಶ್ವರ ಎಂ. ವೆಂಕಟೇಶ್, ನರಸಿಂಹಯ್ಯ, ನಾರಾಯಣಸ್ವಾಮಿ ನಾಗರಾಜು, ಸೇರಿದಂತೆ ಅನೇಕ ಜೆಡಿಎಸ್ ಎಸ್. ಸಿ. ಘಟಕದ ಮುಖಂಡರು ಭಾಗವಹಿಸಿದ್ದರು.



ಸಮಾಜ ಸೇವಕ ಬಾಬು ಪ್ರಕಾಶ್ ಅಭಿಪ್ರಾಯ

ಸರಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ

ಹೊಸಕೋಟೆ: ಸರಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣದ ಜತೆಗೆ ಕಲಿಕೆಗೆ ಅಗತ್ಯವಾಗಿರುವ ಎಲ್ಲ ಸೌಲಭ್ಯಗಳು ಉಚಿತವಾಗಿ ಸಿಗುತ್ತಿದ್ದು,ಪೋಷಕರು ಖಾಸಗಿ ಶಾಲೆಗಳ ಮೋಹಕ್ಕೆ ಸಿಲುಕದೆ ಸರಕಾರಿ ಶಾಲೆಗೆ ತಮ್ಮ ಮಕ್ಕಳನ್ನು ದಾಖಲಿಸಬೇಕು ಎಂದು ಸಮಾಜ ಸೇವಕ,ದಾನಿಗಳಾದ ಬಾಬು ಪ್ರಕಾಶ್ ಅಭಿಪ್ರಾಯಪಟ್ಟಿದ್ದಾರೆ.

ತಾಲೂಕು ಮಾಕನಹಳ್ಳಿ ಸರಕಾರಿ ಶಾಲೆಯ ಮಕ್ಕಳಿಗೆ ಕಲಿಕಾ ಸಾಮಗ್ರಿಗಳನ್ನು ವಿತರಿಸಿ ಅವರು ಮಾತನಾಡಿದರು.

ಸರಕಾರಿ ಶಾಲೆಗಳಲ್ಲಿ ಅತ್ಯುತ್ತಮ ಶಿಕ್ಷಕ ವರ್ಗವಿದ್ದು, ಮಕ್ಕಳ ಸರ್ವತೋಮುಖ ಕಲಿಕೆಗೆ ಪೂರಕವಾಗಿರುವ ಎಲ್ಲ ಚಟುವಟಿಕೆಗಳು ಸಿಗುತ್ತಿವೆ.ದೇಶದ ಅತ್ಯುನ್ನತ ಸ್ಥಾನದಲ್ಲಿರುವ ಗಣ್ಯರು ಸರಕಾರಿ ಶಾಲೆಗಳಲ್ಲಿ ಓದಿ ಉತ್ತಮ ಸ್ಥಾನಕ್ಕೆ ತಲುಪಿದ್ದಾರೆ. ಇದನ್ನು ಅರಿತುಕೊಂಡು ಪೋಷಕರು ತಮ್ಮ ಮಕ್ಕಳನ್ನು ಸರಕಾರಿ ಶಾಲೆಗೆ ದಾಖಲಿಸಬೇಕು ಎಂದರು

ಗ್ರಾಪಂ ಮಾಜಿ ಸದಸ್ಯ ಮಧುಕುಮಾರ್ ಮಾತನಾಡಿ, ಸರಕಾರಿ ಶಾಲೆಗಳ ಅಭಿವೃದ್ಧಿಗೆ ಸಮಾಜದ ಸಹಕಾರ ಅತ್ಯಗತ್ಯವಾಗಿದ್ದು, ಮಕ್ಕಳ ಶಿಕ್ಷಣಕ್ಕೆ ನೆರವಾಗುತ್ತಿರುವ ಬಾಬು ಪ್ರಕಾಶ್ ಅವರ ಸೇವೆ ಶ್ಲಾಘನೀಯವಾಗಿದೆ. ಬಾಬು ಪ್ರಕಾಶ್ ಬೆಂಗಳೂರಿನ ಖಾಸಗಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವಾರದಲ್ಲಿ ಒಂದು ದಿನ ಶಾಲೆಗೆ ಭೇಟಿ ನೀಡಿ ಮಕ್ಕಳಿಗೆ ವೃತ್ತಿಪರ ಹಾಗೂ ಕೌಶಲ್ಯಾಧಾರಿತ ಕಲಿಕೆಯ ವಿಶೇಷ ತರಗತಿಗಳನ್ನು ನಡೆಸುತ್ತಿದ್ದು, ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ನಿರಂತರವಾಗಿ ಸಹಕಾರ ನೀಡುತ್ತಿದ್ದಾರೆ.ಇವರ ಸೇವೆ ಸ್ಮರಣೀಯವಾಗಿದೆ ಎಂದರು

ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷೆ ಲೀಲಾ, ಸದಸ್ಯೆ ಭಾಗ್ಯಲಕ್ಷ್ಮಿ, ಸಹ ಶಿಕ್ಷಕಿ ವಿಜಯ ಪಿ.ಜೆ., ಅತಿಥಿ ಶಿಕ್ಷಕಿ ಹೇಮಲತಾ, ಸಹ ಶಿಕ್ಷಕ ಮಹಾಂತೇಶ್, ಎಸ್‌ಡಿಎಂಸಿ ಸದಸ್ಯೆ ನಗೀನಾ ಹಾಗೂ ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಹೊಸಕೋಟೆ ತಾಲೂಕು ಮಾಕನಹಳ್ಳಿ ಸರಕಾರಿ ಶಾಲೆಯ ಮಕ್ಕಳಿಗೆ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು. ದಾನಿಗಳಾದ ಬಾಬು ಪ್ರಕಾಶ್, ಶಿಕ್ಷಕ ವರ್ಗದವರು ಹಾಜರಿದ್ದರು.

ಕಿರುಸುದ್ದಿ

ಮುರಳೀಧರ ಹಾಲಪ್ಪ ಮನೆಗೆ ಶ್ರೀಗಳ ಭೇಟಿ

ತುಮಕೂರು: ಕರ್ನಾಟಕ ಕೌಶಲ್ಯಾಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಹಾಗೂ ಕೆಪಿಸಿಸಿ ಉಪಾಧ್ಯಕ್ಷ ಮುರುಳೀಧರ ಹಾಲಪ್ಪ ಮತ್ತು ಕಲ್ಪನಾ ಮುರಳೀಧರ ಹಾಲಪ್ಪ ಅವರ 40ನೇ ವಿವಾಹ ವಾರ್ಷಿಕೋತ್ಸವದ ಪ್ರಯುಕ್ತ ಅವರ ಸ್ವಗೃಹದಲ್ಲಿ ಹಮ್ಮಿಕೊಂಡಿದ್ದ ಪಾದಪೂಜೆ ಕಾರ್ಯಕ್ರಮದಲ್ಲಿ ನೊಣವಿನಕೆರೆ ಕಾಡು ಸಿದ್ದೇಶ್ವರ ಮಠದ ಶ್ರೀಶ್ರೀಕರಿವೃಷಭ ದೇಶಿಕೇಂದ್ರ ಸ್ವಾಮೀಜಿ ಪಾಲ್ಗೊಂಡು ಆಶೀರ್ವದಿಸಿದರು.

ಈ ವೇಳೆ ಮಾತನಾಡಿದ ಶ್ರೀಗಳು, ಮುರುಳೀಧರ ಹಾಲಪ್ಪ ಅವರು ಮಠದ ಹಳೆಯ ಭಕ್ತರಾಗಿದ್ದು, ತಮ್ಮದೇ ಶೈಲಿಯಲ್ಲಿ ಯುವಕರು, ಮಹಿಳೆಯರು ಹಾಗೂ ಸಾಮಾನ್ಯ ಜನರ ಸೇವೆ ಮಾಡುತ್ತಿದ್ದಾರೆ. ಅವರ ರಾಜಕೀಯ ಉನ್ನತಿಯ ಸಂಕಲ್ಪಕ್ಕೆ ಗುರು ಅಜ್ಜಯ್ಯ ನವರ ಅನುಗ್ರಹವಿದೆ. ಅವರು ರಾಜಕೀಯದಲ್ಲಿ ಮತ್ತಷ್ಟು ಉನ್ನತ ಸ್ಥಾನಕ್ಕೇರಲಿ ಎಂದು ಹಾರೈಸಿದರು. ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಕುರಿತು ಮಾತನಾಡಿದ ಶ್ರೀಗಳು, ಸಿಎಂ ಅವರಿಗೆ ಗುರುವಿನ ಅನುಗ್ರಹವಿದ್ದು, ಅವರ ಎಲ್ಲ ಸಂಕಷ್ಟಗಳು ದೂರಾ ಗಲಿವೆ. ಡಿ.ಕೆ. ಶಿವಕುಮಾರ್ ಅವರಿಗೆ ಎಲ್ಲವನ್ನೂ ನಿಭಾಯಿಸುವ ಶಕ್ತಿಯಿದೆ ಎಂದು ವಿಶ್ವಾಸ ವ್ಯಕ್ತ ಪಡಿಸಿದರು. ಮುರುಳೀಧರ ಹಾಲಪ್ಪ ಮಾತನಾಡಿ, ನಮ್ಮ ಕುಟುಂಬಕ್ಕೂ ಕಾಡುಸಿದ್ದೇಶ್ವರ ಮಠಕ್ಕೂ ಅವಿನಾಭಾವ ಸಂಬಂಧವಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಲಹೆಯಂತೆ ಶ್ರೀಗಳನ್ನು ಮನೆಗೆ ಆಹ್ವಾನಿಸಲಾಗಿತ್ತು.

ರಾಷ್ಟ್ರೀಯ ಮಾನವ ಹಕ್ಕುಗಳ ಪುರುಷರ ಹಿತರಕ್ಷಣಾ ಟ್ರಸ್ಟ್ ಕಾರ್ಯಾಧ್ಯಕ್ಷೆ ರಜನಿರಾಜ್ ಹೇಳಿಕೆ

ಪುರುಷ ರಕ್ಷಣೆಗೆ ಹಿತರಕ್ಷಣಾ ಟ್ರಸ್ಟ್ ಸ್ಥಾಪನೆ

ಮಂಡ್ಯ: ಮಹಿಳೆಯರ ಕಿರುಕುಳ ತಾಳಲಾರದೆ ಬೇಸತ್ತಿರುವ ಮತ್ತು ಅವರಿಂದ ದೌರ್ಜನ್ಯಕ್ಕೊಳಗಾಗುತ್ತಿರುವ ಪುರುಷರನ್ನು ರಕ್ಷಣೆ ಮಾಡುವ ಸಲುವಾಗಿ ರಾಷ್ಟ್ರೀಯ ಮಾನವ ಹಕ್ಕುಗಳ ಪುರುಷರ ಹಿತರಕ್ಷಣಾ ಟ್ರಸ್ಟ್ ಸ್ಥಾಪಿಸಲಾಗಿದೆ ಎಂದು ಕಾರ್ಯಾಧ್ಯಕ್ಷೆ ರಜನಿರಾಜ್ ಅವರು ಹೇಳಿದರು.

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಗೌರವಾಧ್ಯಕ್ಷರು, ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಅವರು ರಾಷ್ಟ್ರೀಯ ಅಧ್ಯಕ್ಷರಾಗಿದ್ದಾರೆ ಎಂದು ಹೇಳಿದರು.

ಪುರುಷರ ಮೇಲೆ ಕೆಲವು ಮಹಿಳೆಯರಿಂದ ನಡೆಯುವ ದೌರ್ಜನ್ಯ, ಒತ್ತಡ, ಮಾನಸಿಕ ಮತ್ತು ದೈಹಿಕ ಹಲ್ಲೆ, ವರದಕ್ಷಿಣೆ ಸಂಬಂಧ ಸುಳ್ಳು ದೂರು, ಕೊಲೆಯತ್ನ, ಅಪಹರಣ ಹಿಂಬಲಿ ಇತರೆಲ್ಲಾ ದೌರ್ಜನ್ಯಗಳ ವಿರುದ್ಧ ಸಮಿತಿಯು ಕಾನೂನು ಸಲಹೆ, ಸಹಾಯ, ಸಹಕಾರ, ಮಾರ್ಗದರ್ಶನ, ಆಪ್ತ ಸಮಾಲೋಚನೆ, ಪರಸ್ಪರ ಚರ್ಚೆ, ಮಹಿಳೆ ಮತ್ತು ಪುರುಷರ ನಡುವಿನ ಭಿನ್ನಾಭಿಪ್ರಾಯ, ಕೋಪ-ತಾಪಗಳನ್ನು ಪರಸ್ಪರ ಮನಸ್ತಾಪಗಳನ್ನು ಹೋಗಲಾಡಿಸಿ ಸಂಸಾರ ಉತ್ತಮ ರೀತಿಯಲ್ಲಿ ನಡೆಯುವಂತೆ ಪ್ರೇರಣೆ-ಪ್ರೋತ್ಸಾಹ ನೀಡುವುದು ಟ್ರಸ್ಟ್‌ನ ಮೂಲ ಉದ್ದೇಶವಾಗಿದೆ.

ಮಹಿಳಾ ಆಯೋಗ ಇರುವ ಮಾದರಿಯಲ್ಲೇ ರಾಷ್ಟ್ರೀಯ ಪುರುಷ ಆಯೋಗವನ್ನೂ ರಚನೆ ಮಾಡಿ ನೊಂದ ಪುರುಷರೂ ನ್ಯಾಯ ಪಡೆಯುವುದಕ್ಕೆ ಕಾನೂನಾತ್ಮಕವಾಗಿ ಅವಕಾಶ ಕಲ್ಪಿಸಬೇಕು. ಆಯೋಗ ರಚನೆಯಲ್ಲೂ ಸಮಾನತೆ ಕಾಪಾಡುವ ಅಗತ್ಯವಿದೆ. ಆದರೆ, ಮಹಿಳೆಯರ ಮೇಲೆ ದೌರ್ಜನ್ಯವೆಸಗುವ ಪುರುಷರ ಪರವಾಗಿ ಟ್ರಸ್ಟ್ ಎಂದಿಗೂ ನಿಲ್ಲುವುದಿಲ್ಲ, ಸತ್ಯಾಸತ್ಯತೆಯನ್ನು ವಿಚಾರಿಸಿ ಒಬ್ಬರನ್ನೊಬ್ಬರು ಅರ್ಥೈಸಿಕೊಂಡು ಹೊಂದಾಣಿಕೆಯಿಂದ ಜೀವನ ನಡೆಸುವುದಕ್ಕೆ ಸಾಧ್ಯವಾದಷ್ಟು ಪ್ರಯತ್ನಿಸಲಾಗುವುದು ಎಂದರು.

ಆಧುನಿಕ ಯುಗದಲ್ಲಿ ಪುರುಷರ ವಿರುದ್ಧ ಮಹಿಳೆಯರಿಂದ ಸುಳ್ಳು ದೂರುಗಳು ದಾಖಲಾಗುವ ಪ್ರಕರಣಗಳು ಹೆಚ್ಚಾಗುತ್ತಿವೆ. ಮಹಿಳೆಯರ ಪರವಾದ ಕಾನೂನುಗಳು ಕಠಿಣವಾಗಿರುವುದರಿಂದ ತಪ್ಪು ಮಾಡದಿರುವ ಪುರುಷ ಸುಳ್ಳು ದೂರುಗಳಿಂದ ಕಾನೂನು ಸಂಕಷ್ಟಕ್ಕೆ ಸಿಲುಕಿ ಅವಮಾನ ಅನುಭವಿಸುತ್ತಿದ್ದಾನೆ. ಖಿನ್ನತೆಗೊಳಗಾಗಿ ದುಶ್ಚಟಗಳಿಗೆ ದಾಸನಾಗಿ, ಆತ್ಮಹತ್ಯೆಗೂ ಶರಣಾಗುತ್ತಿದ್ದಾನೆ. ಇದರಿಂದ ಪುರುಷರಿಗೂ ನೆಮ್ಮದಿ ದೊರಕಬೇಕು. ರಾಷ್ಟ್ರದ ಮಹಿಳೆಯರಿಗೆ ಸ್ಪಂದಿಸಲು ಮಹಿಳಾ ಆಯೋಗ ಇರುವಂತೆ ಪುರುಷರಿಗೂ ಸಹ ಅವರ ಹಿತರಕ್ಷಣೆ ಕಾಪಾಡಲು ರಾಷ್ಟ್ರದಲ್ಲಿ ಪ್ರಥಮ ನೋಂದಾಯಿತ ಅಧಿಕೃತ ಸಂಸ್ಥೆಯಾಗಿದೆ. ಮಹಿಳಾ ಆಯೋಗದ ಮಾದರಿಯಲ್ಲೇ ಪುರುಷ ಆಯೋಗವನ್ನು ಕಾನೂನುಬದ್ಧಗೊಳಿಸುವಂತೆ ಸದನದಲ್ಲಿ ಗೌರವಾಧ್ಯಕ್ಷ ಹೆಚ್.ವಿಶ್ವನಾಥ್‌ರವರು ಎತ್ತಲಿದ್ದಾರೆ ಎಂದು ಹೇಳಿದರು. ಗೋಷ್ಠಿಯಲ್ಲಿ ಜಿಟಿವೀರಪ್ಪ, ಎಂ.ಆರ್.ಸತೀಶ್, ಎಂ.ಗುರುಪ್ರಸಾದ್,ಕೃಷ್ಣಯ್ಯ ಅರಸು, ವೇದವಲ್ಲಿ, ಚೇತನ್ ಇದ್ದರು.



ನೆಮ್ಮದಿಯ ಜೀವನಕ್ಕೆ ಅವಕಾಶ ಕಲ್ಪಿಸುವುದು ಮುಖ್ಯ ಗುರಿ

ಯಾರ ವಿರುದ್ಧವೇ ಆಗಲಿ ದೂರು ದಾಖಲಾದ ತಕ್ಷಣವೇ ಎಫ್‌ಐಆರ್, ಬಂಧನಕ್ಕೊಳಪಡಿಸದೆ ಸತ್ಯಾಸತ್ಯತೆ ಪರಿಶೀಲಿಸಿ, ವಿಚಾರಣೆ ನಡೆಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳುವಂತೆ ಸುಪ್ರೀಂಕೋರ್ಟ್ ಹೇಳಿದೆ. ಆದರೆ, ಅದರಂತೆ ಪೊಲೀಸ್ ಅಧಿಕಾರಿಗಳು ನಡೆಯುತ್ತಿಲ್ಲ. ದೂರು ಬಂದ ಕೂಡಲೇ ಹಿಂದೆ-ಮುಂದೆ ವಿಚಾರಿಸದೆ, ಪರಿಶೀಲನೆಯನ್ನೂ ನಡೆಸುವ ಗೋಜಿಗೆ ಹೋಗದೆ ಅಮಾಯಕರನ್ನು ಬಂಧಿಸಲಾಗುತ್ತಿದೆ. ಹೆಣ್ಣಿನ ರಕ್ಷಣೆ ಹೆಸರಿನಲ್ಲಿ ಪುರುಷರು ಕಿರುಕುಳ, ನೋವನ್ನು ಅನುಭವಿಸುತ್ತಿದ್ದಾರೆ. ಹಾಗಾಗಿ ಪುರುಷರ ಹಿತರಕ್ಷಣಾ ಟ್ರಸ್ಟ್ ಪುರುಷರು ಮತ್ತು ಮಹಿಳೆಯರ ಮಧ್ಯೆ ಕೊಂಡಿಯಾಗಿ, ಸೇತುವೆಯಾಗಿ ಇಬ್ಬರ ನಡುವಿನ ಮನಸ್ತಾಪಗಳನ್ನು ತಡೆಗಟ್ಟಿ ರಾಜಿ ಮೂಲಕ ಸಮಸ್ಯೆಗಳನ್ನು ಬಗೆಹರಿಸುವುದು. ನೆಮ್ಮದಿಯ ಜೀವನಕ್ಕೆ ಅವಕಾಶ ಕಲ್ಪಿಸುವುದು ಮುಖ್ಯ ಗುರಿಯಾಗಿದೆ ಎಂದು ರಜನಿರಾಜ್ ಹೇಳಿದರು.

ರಾಜ್ಯಮಟ್ಟದ ನೆಟ್‌ಬಾಲ್ ಪಂದ್ಯಾವಳಿ ನಾಳೆ

ಮಂಡ್ಯ: ಕರ್ನಾಟಕ ಅಮೆಚೂರ್ ನೆಟ್‌ಬಾಲ್ ಅಸೋಸಿಯೇಷನ್ ಹಾಗೂ ಮಂಡ್ಯ ನೆಟ್‌ಬಾಲ್ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ರಾಜ್ಯ ಮಟ್ಟದ ಪುರುಷ ಮತ್ತು ಮಹಿಳೆಯರ ನೆಟ್‌ಬಾಲ್ ಪಂದ್ಯಾವಳಿಯನ್ನು ಜೂ.14ರಂದು ನಗರದ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಮಂಡ್ಯ ನೆಟ್‌ಬಾಲ್ ಅಸೋಸಿಯೇಷನ್ ಅಧ್ಯಕ್ಷ ಎಂ.ಆರ್.ಮಂಜು ಹೇಳಿದರು.ವಿಶೇಷ ಆಹ್ವಾನಿತರಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ. ಶೋಭಾರಾಣಿ, ಮುಡಾ ಪ್ರಾಧಿಕಾರ ಆಯುಕ್ತ ಆರ್. ಯೋಗಾನಂದ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೆ.ನಾಗೇಶ್ ಭಾಗವಹಿಸುವರು ಎಂದು ಹೇಳಿದರು.



ನೆಟ್‌ಬಾಲ್‌ನಲ್ಲಿ ಪ್ರಪ್ರಥಮವಾಗಿ ಫಾಸ್ಟ್-5 ಸರಣಿಯನ್ನು ಆಯೋಜಿಸಲಾಗಿದೆ. ಒಟ್ಟು 20 ಮಂದಿ ಆಟಗಾರರಲ್ಲಿ ಎರಡೂ ತಂಡದಿಂದ ತಲಾ ಐದೈದು ಮಂದಿ ಪಂದ್ಯದಲ್ಲಿ ಭಾಗವಹಿಸುವರು. ಪಂದ್ಯಾವಳಿಗೆ ಜಿಲ್ಲೆಯ ವಿವಿಧೆಡೆಯಿಂದ ಪುರುಷ ಮತ್ತು ಮಹಿಳೆಯರ ತಲಾ 15 ತಂಡಗಳು ಭಾಗವಹಿಸಲಿವೆ. ಒಟ್ಟು 500 ಮಂದಿ ಪಾಲ್ಗೊಳ್ಳಲಿದ್ದು, ರೋಟರಿ ಸಂಸ್ಥೆ ಹಾಗೂ ಮಾಂಡವ್ಯ ಶಿಕ್ಷಣ ಸಂಸ್ಥೆಗಳಲ್ಲಿ ವಸತಿ, ಊಟದ ವ್ಯವಸ್ಥೆ ಒದಗಿಸಲಾಗಿದೆ ಎಂದು ವಿವರಿಸಿದರು.

ರೌಡಿಶೀಟರ್‌ಗಳ ಪರೇಡ್, ಎಚ್ಚರಿಕೆ

ಆನೇಕಲ್: ಅಪರಾಧ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಬೆಂಗಳೂರು ಹೊರವಲಯದ ಆನೇಕಲ್ ಉಪವಿಭಾಗದ ಪೊಲೀಸರು 200ಕ್ಕೂ ಹೆಚ್ಚು ರೌಡಿಶೀಟರ್‌ಗಳ ಪರೇಡ್ ನಡೆಸಿ ಖಡಕ್ ಎಚ್ಚರಿಕೆ ನೀಡಿದ್ದಾರೆ. ರೌಡಿ ಪರೇಡ್ ವೇಳೆ ಕೆಲ ರೌಡಿಗಳ ಕಿವಿಯಲ್ಲಿದ್ದ ಓಲೆಗಳನ್ನು ತೆಗೆದ ಪೊಲೀಸರು, ಶಿಸ್ತು ಪಾಲಿಸುವಂತೆ ಎಚ್ಚರಿಕೆ ನೀಡಿದರು. ಭವಿಷ್ಯದಲ್ಲಿ ಯಾವುದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾದರೆ ಗಡಿಪಾರು ಸೇರಿದಂತೆ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ವಾರ್ನಿಂಗ್ ನೀಡಲಾಯಿತು. ಆನೇಕಲ್, ಅತ್ತಿಬೆಲೆ, ಸೂರ್ಯನಗರ, ಜಿಗಣಿ, ಬನ್ನೇರುಘಟ್ಟ ಹಾಗೂ ಸರ್ಜಾಪುರ ಪೊಲೀಸ್ ಠಾಣೆಗಳ ವ್ಯಾಪ್ತಿಯ ರೌಡಿಶೀಟರ್‌ಗಳು ಪರೇಡ್‌ನಲ್ಲಿ ಭಾಗವಹಿಸಿದ್ದರು. ಕೊಲೆ, ಸುಲಿಗೆ, ಹಫ್ತಾ ವಸೂಲಿ ಸೇರಿದಂತೆ ಯಾವುದೇ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗದಂತೆ ಪೊಲೀಸರು ಕಟ್ಟುನಿಟ್ಟಿನ ಸೂಚನೆ ನೀಡಿದರು. ಇದೇ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಿನಾರಾಯಣ್, ಡಿವೈಎಸ್‌ಪಿ ಗೋಪಾಲ್ ನಾಯಕ್, ಹಾಗೂ ಇನ್ಸ್‌ಪೆಕ್ಟರ್‌ಗಳಾದ ಪ್ರಕಾಶ್, ಚಂದ್ರಪ್ಪ, ಮಂಜುನಾಥ್ ನವೀನ್ ಹಾಜರಿದ್ದರು.

PUBLIC NOTICE

This is to inform the general public that my client Mr.G.Mahesh S/o Mr.Gopalaiah is the absolute owner of the property corporation No.25/3, BBMP PID No.82-12-25/3, Measuring East to West 39 Ft and North to South 20 Ft in all totally measuring 780 Sq Ft. Together with 600 Sq.ft building standing thereon. Situated at Binnamangala Village, Civil Area, Bangalore,: and bounded on the East by: Ramaswamy Gaeden, West by: Common Passage, North by: Private Property (earlier Venkatappa's Property) and South by: Private Property (earlier Lingaiah's Property). While renovating his house, my client has lost the Original Sale Deed Dated 04.11.1960, Doc No.2220/1960-61, Book-I, Original Sale Deed dated 05.05.1961, Doc No.436/1961-62, Book-I, Original Sale Deed dated 12.07.1961, Doc No.1216/1961-62, Book-I, Original Sale Deed dated 21.03.1963 Doc No.3944/1962-63, Book-I, Original Sale Deed dated 04.11.1960, Doc No.2221/1960-61, Book-I, Original Sale Deed dated 15.03.1963, Doc No.3864/1962-63, Book-I, Original Sale Deed dated 04.02.1970 Doc No.3444/1969-70, Book-I and Original Settlement Deed dated 28.11.1975, Doc No.2628/1975-76, Book-I, Volume No.1892, Page No.222 to 224, in the office at SRO Shivajinagar, pertaining to the said property.

In the event any person having the above said original documents, kindly handover the same to the below mentioned address within 07 days of the publication of this notice. The general public are informed not to act on the basis of the said original documents.

SOMASHEKHARA A.N., Advocate
No. 105, 3rd Floor, MR Mansion 12th "D" Main Road Muthyalanagar Bengaluru - 560 054

BEFORE THE MOTOR ACCIDENT CLAIMS TRIBUNAL AT BENGALURU (SCCH-13)
M.V.C. No.9299/2025

BETWEEN: Sri. Nagesh K & Ors ... **PETITIONERS**
AND: Sri. Mohan B K & Anr ... **RESPONDENTS**
NOTICE TO RESPONDENT No.1

Sri. Mohan .B.K, S/o Krishnappa, aged about 30 years, R/at: No. 197, Kanthamma Rajanna Building, Bommasandra, Ali Bommasandra, Anekal Taluk, Bengaluru-560099.

Whereas, the petitioners in the above case has filed the above claim petition against you, claiming compensation of Rs.40,00,000/- (Rs. Fourty Lakhs only) for the death of one Krishnappa in a R.T.A. caused by your Hyundai i10 Car bearing Reg.No.KA-51-Z-3301 on 01.11.2025 at about 6:15 P.M., when he had parked his TVL XL moped by the extreme left side of Bengaluru Chennai NE-7 Expressway, near Sulikunte Village, Bangarapet Taluk, Kolar District. Hence, you are hereby summoned to appear before this court in person or by a pleader duly instructed, and able to answer all the material questions relating to the case on **03/07/2026** at **11:00 A.M.**, failing which the above case will be disposed off ex-parte.

Given under my hand and the seal of the court, on this 08/06/2026

By order of the Court, Assistant Registrar, Court of Small Causes, Bangalore

N. MANJUNATH, Advocate
No.3, Amar Towers, 1st Cross, Gandhinagar, Bengaluru-560009

ಪ್ರಮಾಣ ಪತ್ರ

[illegible] ದಿನಾಂಕ 12.06.2026ರಂದು ಪ್ರಮಾಣೀಕರಿಸುತ್ತೇನೆ.

BEFORE THE MOTOR ACCIDENT CLAIMS TRIBUNAL AT BENGALURU (SCCH-01)
M.V.C. No. 9222/2024

BETWEEN: Pramod B.K., ... **PETITIONER**
AND: M/s N.S. Tours & Travels & Another **RESPONDENT**

To, M/s N.S. Tours & Travels, # 1, 2nd Floor, Marathalli Ring Road, Appanna Layout, Mahadevapura, Bengaluru-560 048. ... **RESPONDENT No. 01**

SUMMONS TO RESPONDENT No.1

Whereas, the Petitioner has filed the above case Under Section 166 of the Motor Vehicles Act 1988, for grant of compensation for Rs.5,00,000/- the damages caused to Toyota Etios Car bearing Reg. No. KA 03 AD 4217 occurred on 07/05/2024 at about 7.10 am on Hosur Main Road, near toll, Veerasandra, Bengaluru City, on account of negligence of the Bus Driver bearing Reg. No.KA 51 AF 3754.

You are hereby directed to appear before this Hon'ble court on **20-07-2026** at 11:00 A.M either in person or through an advocate duly instructed to show cause, failing which the above case will heard and determined ex-parte.

Given under my hand and seal of this court on 09-06-2026

By order of the court, Assistant Registrar, Court of Small Causes, Bangalore.

Advocate for Petitioner:
M.B. RAVIKUMAR,
M.B. RAVIKUMAR & ASSOCIATES,
113, 1st Floor, Seshadripuram, Bengaluru-560 020.

CHANGE OF NAME

I, **SHIVALEELA**, aged about 57 years, W/o. Prakash Swamy, No. 438, Sri Adavisiddeshwara Nilaya, 7th Cross, MPM Layout, Mallathahalli Lake Road, Bengaluru-560056, do hereby declare that I have changed my name from **ISHWARAMMA SWAMY** to **SHIVALEELA**, vide affidavit dated 12.06.2026, sworn to before K.V. Mani, Advocate & Notary, Govt. of India, Bengaluru.

CHANGE OF NAME

I, **LIKITHA A V (LIKITHA ARCOT VINAY KUMAR)**, aged about 32 years, W/o. A C Vinay Kumar, No. 41, 11th Main, 7th Cross, Shakamabari Nagar, J P Nagar, 1st Phase, Bengaluru-560078, do hereby declare that I have changed my name from **LIKITHA VIRALAM HEMANTH KUMAR** to **LIKITHA A V (LIKITHA ARCOT VINAY KUMAR)**, vide affidavit dated 12.06.2026, sworn to before K.V. Mani, Advocate & Notary, Govt. of India, Bengaluru.

IN THE COURT OF THE PRINCIPAL CIVIL JUDGE AND J.M.F.C. AT ANEKAL
C.MIS No 925 OF 2026

BETWEEN: HARSHA.S, S/o Late Sampangiramaiah, Aged about 41 years, **SUBRAMANYAPPA**, S/o Late Thimmaiah Aged about 65 years, Both are R/ at,# 36 kammasandra Agrahara, Sidihosakote post, Anekal Taluk, Bangalore Urban District. ... **PETITIONER**
AND: THE TAHASILDHAR, Anekal Town, Anekal Taluk, Bangalore District. ... **RESPONDENT**

NOTICE

Whereas the above petitioner has filed the petition for the issue of death Certificate Grand mother of the Grand father of the petitioner No. 1 uncle of the petitioner No. 2 namely that Venkatswami S/o late Subbanna died on 01-09-1971 at # 36 kammasandra Agrahara, kasaba Hobli, Anekal Taluk., Bangalore Urban District, any person interested in this matter, may appear before the above court at 11:00 AM on **16-07-2026** to which date the case is posted for hearing before the Hon'ble Principal Civil Judge and J.M.F.C at Anekal.

Take notice that in default of your appearance on the said date and time the case will be heard and determined in your absence.

Given under my hand and seal of the court on 12-06-2026

By order of the court, Sheristedar, Civil Judge Jr Dvn & JMFC Court at Anekal.

NETHRAVATHI, Advocate
Anekal Town, Bangalore 562106.

IN THE COURT OF THE HON'BLE PRINCIPAL CIVIL JUDGE & JMFC AT SRINIVASAPUR
F.D.P. 4/2024 (O.S. 238/1992)

PETITIONER: K.N. VENKATARAMANAPPA
PLAINTIFF

V/s

RESPONDENTS: N. KRISHNAPPA &
DEFENDANTS **OTHERS**

To, Respondents No.1, 2(a) to (c), 4(c), 6(a) to (c) and 7

1. N. KRISHNAPPA S/o Late Narayanareddy, Aged about 72 Years, R/o Kamathampalli, Ronur Hobli, Srinivasapur Taluk. **2. K.N. RAMACHANDRAPPA** (Dead by LRS) **2(a) SHANTHAMMA** D/o K.N. Ramachandrappa, Aged about 41 years, R/o Kamathampalli, Ronur Hobli, Srinivasapur Taluk **2(b) SHIVAKUMAR** S/o K.N. Ramachandrappa, Aged about 39 years, R/o Kamathampalli, Ronur Hobli, Srinivasapur Taluk **2(c) R. BHAGYA** D/o K.N. Ramachandrappa, Aged about 37 years, R/o Kamathampalli, Ronur Hobli, Srinivasapur Taluk. **4(c) NANJAMMA** D/o Late Krishnappa, aged about 42 years, Budigere Village, Devanahalli Taluk, Bangalore Rural district. **6(a) AMEENABEE** W/o M. Habeebulla khan, Aged about 90 years, R/o Yachanapalli Village, Ronur Hobli, Srinivasapur Taluk. **6(b) ABDUL REHMAN KHAN** S/o M. Habeebulla khan, Aged about 65 years, R/o Yachanapalli Village, Ronur Hobli, Srinivasapur Taluk. **6(c) MOHAMMED ABBAS KHAN** S/o M. Habeebulla khan, Aged about 59 years, R/o Yachanapalli Village, Ronur Hobli, Srinivasapur Taluk. **7. SRIRAMA REDDY** S/o Late Narayanareddy, Aged about 50 Years, R/o Kamathampalli, Ronur Hobli, Srinivasapur Taluk.

SUMMONS

Whereas, the Plaintiff has filed the above Petition against the Respondents No.1, 2(a) to (c), 4(c), 6(a) to (c) and 7 for Final Decree Proceeding pertaining to the Petition Schedule Property.

You are hereby summoned to appear in this Court in Person or by a Pleader duly instructed and able to answer all the material questions relating to the Petition, on 29.06.2026 at 11-00 A. M. to answer the claim.

Take Notice that in default of your appearance on the day mentioned above, the Petition will be heard and determined in your absence as Ex-parte.

Given under my hand and the seal of this Court on this 29/4/26 day.

BY ORDER OF THE COURT
SHERESTHEDAR, Prl. Civil Judge & JMFC Court Srinivasapur, Kolar Dist.

D.S. RAMAGOPAL, ADVOCATE, NEHALA COMPLEX, FORT, KOLAR SRINIVASAPUR, DATE: 24/4/26

PUBLIC NOTICE

This notice is given to the General public that my client is going to bank for sanction a loan in favor of borrower by name **Smt.Sangeetha.K W/o Kannan**, residing at #147, 11th Main, Near Sri.Rama Temple, Raghavendra Layout, Kammagondanahalli, Bangalore North, Bangalore, Karnataka - 560015 with respect to below mentioned schedule property. As per the information borrower she has lost or misplaced original sale deed dated: 26-12-2015 registered in the Sub-Registrar office Peenya, Vide Registration No.PNY-1-05903-2015-16, CD No. PNYD632 executed by Smt.M.Shobha W/o T.Prasanna Kumar in favour of **Smt.Sangeetha D/o R.Chinnadorai.**

SCHEDULE: All the piece and parcel of the Southern portion of vacant site bearing No.147 and bearing Assessment No.12/2, 12/3 and 65/1, Katha No.125, measuring East to West: 30 feet, North to South: 20 feet and total site measuring 600 sq feet is situated at Kammagondanahalli Village, Yeshwanthpur Hobli, Bangalore North Taluk, presently Bangalore Mahanagara Palike Ward No.12, New PID No.012-W0553-4 belonging to: **Smt.Sangeetha.K W/o Kannan** and bounded on: East by: Site No.46, West by: Road, North by: Remaining Northern portion of the Site No.147 and South by: Road.

Above mentioned original sale deed same has been lost or misplaced by the borrower by name **Smt.Sangeetha.K W/o Kannan** Hence if anybody having any title, interest and right in any manner over the above said document in respect of the above schedule property may intimate the same in writing with documentary evidence to the undersigned within **7 (Seven) days** from the date of this publication, failing which my client shall proceed with the loan transaction as not claimed.

S.H Singaiah Advocate
No.121, Eshwar Plaza, 3rd Floor, 4th Main, 1st Stage, West of Chord Road, Manjunatha Nagara, Bangalore-560010.
Mob. 9844964791.

BEFORE THE COURT OF THE M.A.C.T. AT BANGALORE (SCCH-23)
M.V.C. No. 8365/2025

BETWEEN: Lokesh .M.K ... **PETITIONER**
AND: The Manager and others ... **RESPONDENTS**
NOTICE TO RESPONDENT No: 2

Madhusudhan .K, S/o Kumar, #61, 17th main, Kurubarahalli, Mahalakshmipuram layout, Bengaluru-560086

Take notice that the above petition is filed against you by the petitioner for the claiming of compensation of Rs. 5,00,000/- (Five lakhs only) for injury of Lokesh M. K., who was injured in a road traffic accident which occurred on 01-06-2025 at about 08-00 a.m. while injured was pillion rider of motor cycle bearing reg. no.KA-02 JN-6246, when he reached near Maki Skywalk, Bengaluru-Tumkur NH-48 road, Dasanapura hobli, at that time the rider of the motor cycle hit the back side of the Maruthi Omni Car bearing reg. no. KA-03 MJ-0441, due to which the petitioner fell down from the motor cycle and sustained grievous injuries. The hearing of the said case is fixed to be held on **15/07/2026** at **11:00 A.M.**, you are hereby directed to appear on that day before the court personally or through your advocate failing which is the matter will be determined exparte.

Given under my hand and seal of the court on this 29/05/2026

By order of the Court, Assistant Registrar, Court of Small Causes, Bangalore

P. MAHADEVASWAMY, Advocate
No. T-31, 3rd Floor, No.11, VMC Complex, 10th cross, Cubbonpet, Bangalore- 02.

PUBLIC NOTICE

Public are hereby notified that, my client **SRI. CHENTHAMARAKSHAN P.**, aged about 62 years, S/o, P Raghavan, Residing at, # 155, Jyothika Nivas, Railway Parallel Road, Opp Vyasa International School, Deshabhandhunagar, Doddabommasandra, Bengaluru North, Bengaluru- 560097, Aadhar No. 4536 1534 8761. PAN No. AWMPP4543P. Being a lawful owner and in peaceful possession of the below mentioned schedule property Intend to sell the Schedule property to the third party.

Any person or persons, authorities, Banks, financial institutions etc., having any valid right, title interest or any claim over the Schedule Property or any portions of it in any manner may with documentary evidence lodge their objections/ claim within 10 days from the date of this notice with the undersigned, if no valid objections are received within the stipulated date, our client shall proceed on the basis that there are no claims of whatsoever nature with regard to the Schedule property.

SCHEDULE PROPERTY

All piece and parcel of immovable property of residential Site together with building bearing Site No.1, Property No. 879/117/118/1, Sy No 117, V.P. Katha No. 117/118, present E Katha PID No. 7637736905, Measuring East to West 40 feet, and North to south 30 feet, in total extent 1200 Sq.fts, Situated at, Kodigehalli village, Yalahanka Hobli, Vidyaranyapura Ward-9, Bangalore North Taluk, Now comes under the Jurisdiction of BBMP/ GBA Ward No 9, Bengaluru,

SHYAMA SUNDRA
M/s. S S N Associates
Advocates and Solicitors
No. 001, A2G, Enclave, 3rd Main, 5th Cross, L.B.S Nagar H.A.L. Bangalore 560 017. Ph. 9945215327
ಉಲ್ಲೇಖಿತ ಪ್ರಕಟಣೆಯನ್ವಯ ಆಹ್ವಾನಿಸಲಾದಂತೆ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂನಲ್ಲಿರುವ ಕಲಂಗಳನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ https://kppp.karnataka.gov.in ನಲ್ಲಿ ಅರ್ಹ ಗುತ್ತಿಗೆದಾರರಿಂದ ಕ್ರಸಂ 1ರ ಕಾಮಗಾರಿಯ ಟೆಂಡರ್‌ನ್ನು ದಿ: 23.06.2026ರ ಸಂಜೆ 4.00 ಗಂಟೆಯವರೆಗೆ ಹಾಗೂ ಕ್ರಸಂ 2ರ ಹಾಗೂ ಕ್ರಸಂ 3ರ ಕಾಮಗಾರಿಗಳ ಟೆಂಡರ್‌ಗಳನ್ನು ದಿ: 19.06.2026ರ ಸಂಜೆ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಕೆ.ಪಿ.ಪಿ. ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು. (ದೂರವಾಣಿ ಸಂ: 0824-2440720)

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

DIPR/DK/KSMCA/357/26-27 ದಿ. 12.06.2026

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಉಪನಿರ್ದೇಶಕರ ಕಛೇರಿ, ಕೊಠಡಿ ಸಂಖ್ಯೆ: 206, 2ನೇ ಮಹಡಿ, ಜಿಲ್ಲಾಡಳಿತ ಭವನ ಬೀರಸಂದ್ರ, ದೇವನಹಳ್ಳಿ ತಾಲ್ಲೂಕು-562110. ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಂಖ್ಯೆ: ಮಮಅಇ/ಉನಿಬೆಂಗ್ರಾ/ಅ/ವಾ.ಟೆಂ.ಪ್ರ/42/2025-26 ದಿನಾಂಕ: 09.06.2026

ಮರು ಇ-ಟೆಂಡರ್ ಪ್ರಕಟಣೆ

ಉಪ ನಿರ್ದೇಶಕರು ಹಾಗೂ ಜಿಲ್ಲಾ ನಿರೂಪಣಾಧಿಕಾರಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಛೇರಿಯ ಉಪಯೋಗಕ್ಕಾಗಿ 02 ಎ.ಸಿ ಕಾರುಗಳನ್ನು ಹಾಗೂ ಚಾಲಕರನ್ನು ಒಳಗೊಂಡಂತೆ ಬಾಹ್ಯಮೂಲದಿಂದ ಗುತ್ತಿಗೆ ಆಧಾರದ ಮೇಲೆ ಜುಲೈ-2026 ರಿಂದ ಜೂನ್-2027 (ಒಂದು ವರ್ಷದ ಅವಧಿಗೆ) ರವರೆಗೆ ಅಥವಾ ಮುಂದಿನ ಆದೇಶದ ವರೆಗೆ ಒದಗಿಸಲು ಕರ್ನಾಟಕ ಆರ್ಥಿಕ ಪಾರದರ್ಶಕ ನಿಯಮ-1999ರಡಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅರ್ಹ ವ್ಯಕ್ತಿ/ಸಂಸ್ಥೆಗಳಿಂದ ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ದಿನಾಂಕ: 12.06.2026 ರಿಂದ 26.06.2026 ರ ಸಂಜೆ 3.00 ಗಂಟೆಯವರೆಗೆ ಅವಕಾಶವಿರುತ್ತದೆ. ಈ ವಿಷಯದಲ್ಲಿ ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು ಕಛೇರಿಯ ವೇಳೆಯಲ್ಲಿ ಖುದ್ದಾಗಿ ಅಥವಾ ವೆಬ್‌ಸೈಟ್ https://kppp.karnataka.gov.in ನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾಸಾಸಂಇ/ವಾತ್ವ/1140/ಗ್ರಾಮ್/2026-27

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋ.ಇ ವಿಭಾಗ, ಶಿವಮೊಗ್ಗ

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಲಿ/ಶಿವಿಶಿ/ಜೆಇ-2/ಐಎಫ್‌ಬಿ-08/ತಿ-01/2026-27 ದಿನಾಂಕ:12-06-2026

ತಿದ್ದುಪಡಿ ಟೆಂಡರ್ ಪ್ರಕಟಣೆ

ಉಲ್ಲೇಖ ಸಂ: ಕಾಪಾಅ/ಶಿವಿಶಿ/ಎಇ-1&2/ಜೆಇ-1&2/ಐಎಫ್‌ಬಿ-08/ಮು-01/2026-27 ದಿನಾಂಕ:06-06-2026

ಉಲ್ಲೇಖಿತ ಟೆಂಡರ್ ಪ್ರಕಟಣೆ ಅನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಾಗರ ತಾಲ್ಲೂಕಿಗೆ ಸಂಬಂಧಿಸಿದಂತೆ ಇ.ಸಂ.:36346 ಕಾಮಗಾರಿಯ ನಿಬಂಧನೆಗಳಲ್ಲಿ ಎಸ್.ಸಿ ಎಂಬುದಾಗಿ ಮೀಸಲಾಗಿ ಪ್ರಚುರಗೊಂಡಿದ್ದು, ಅದನ್ನು ಎಸ್.ಟಿ ಮೀಸಲು ಎಂಬುದಾಗಿಯೂ ಮತ್ತು ಇ.ಸಂ:36337 ಕಾಮಗಾರಿಯ ನಿಬಂಧನೆಗಳಲ್ಲಿ ಎಸ್.ಟಿ ಎಂದು ಮೀಸಲಾಗಿ ಪ್ರಚುರಗೊಂಡಿದ್ದು, ಅದನ್ನು ಎಸ್.ಸಿ ಮೀಸಲು ಎಂಬುದಾಗಿ ಓದಿಕೊಳ್ಳತಕ್ಕದ್ದು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿದ್ದುಪಡಿ ಮಾಡಲಾಗಿದ್ದು, ಸದರಿ ನಿಬಂಧನೆಗಳನ್ನು ಅಪ್‌ಲೋಡ್ ಸಹ ಮಾಡಲಾಗಿರುತ್ತದೆ.

ಇನ್ನುಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182-274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080-23010900/23010901 ರಿಂದ ಮಾಹಿತಿ ಪಡೆಯಬಹುದು.

ಸಹಿ/- ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಶಿಮ್‌ಎಂಎ/ಶಿ/26-27/54/06/363

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ,
ಸಾಮಾಜಿಕ ಅರಣ್ಯ ಉಪ-ವಿಭಾಗ, ವಿಜಯಪುರ

ಸಂಖ್ಯೆ: ವಿಜೆಪಿ/ಸಾಅವಿ/ಇ-ಪ್ರೊಕ್ಯೂರ್‌ಮೆಂಟ್/ಕ.ಟೆಂ/2026-27
ದಿನಾಂಕ: 09.06.2026

ಸಂಕ್ಷಿಪ್ತ ಮರು ಟೆಂಡರ್ ಪ್ರಕಟಣೆ

ವಿಜಯಪುರ ಸಾಮಾಜಿಕ ಅರಣ್ಯ ಉಪ-ವಿಭಾಗದ ಅಧೀನ ಸಾಮಾಜಿಕ ಅರಣ್ಯ ವಲಯಗಳಲ್ಲಿ 2026-27 ನೇ ಸಾಲಿನಲ್ಲಿ ಕೈಗೊಳ್ಳುವ ವಿವಿಧ ಯೋಜನೆಗಳಡಿ ಅನುದಾನ ನಿರೀಕ್ಷೆಯ ಮೇರೆಗೆ ನೆಡುತೋಪು ನಿರ್ಮಾಣ ಹಾಗೂ 14x20 ಅಳತೆಯ ಸಸಿಗಳನ್ನು ಬೆಳೆಸುವ ಕಾಮಗಾರಿಗಳಿಗೆ ಮರು ಟೆಂಡರ್‌ನ್ನು ದಿನಾಂಕ: 11.06.2026 ರಿಂದ 18.06.2026 ರವರೆಗೆ ಅರ್ಹ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಅರಣ್ಯೀಕರಣ ಕಾಮಗಾರಿಗಳಿಗೆ ಮರು ಟೆಂಡರ್‌ನ್ನು ಕರೆಯಲಾಗಿದೆ ಹಾಗೂ **(ಟೆಕ್ನಿಕಲ್ ಮತ್ತು ಫೈನಾನ್ಷಿಯಲ್ ಬಿಡ್ ತೆರೆಯುವ ದಿನಾಂಕ: 20.06.2026 ರಂದು ಬೆಳಿಗ್ಗೆ 11.00 ಘಂಟೆಗೆ)** ಭಾಗವಹಿಸಲಿಚ್ಛಿಸುವವರು ತಮಗೆ ಅನುಕೂಲವಾಗುವ ಟೆಂಡರ್ ವಿವರಗಳನ್ನು www.kppp.karnataka.gov.in ಮೂಲಕ ಟೆಂಡರ್ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/151/ಕೆಎಸ್‌ಎಂಸಿಎ/2026-27

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು.

ಟೆಂಡರ್ ಅಧಿಸೂಚನೆ ಸಂಖ್ಯೆ : 08/2026-27 ದಿನಾಂಕ: 11.06.2026

ಟೆಂಡರ್ ಅಧಿಸೂಚನೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೈಸೂರು ಜಿಲ್ಲೆಯ ಕಾರ್ಯನಿವಾಹಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಮೈಸೂರು/ನಂಜನಗೂಡು/ಪಿರಿಯಾಪಟ್ಟಣ/ಹುಣಸೂರು/6-27 ರಿಂದ 2030-31ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ (ಅಂದರೆ 01.04.2026ರಿಂದ 31.3.2031ರ ವರೆಗೆ) ಒಟ್ಟು 05 (ಐದು) ವರ್ಷಗಳ ಅವಧಿಗೆ ಇ-ಟೆಂಡರ್ ಮೂಲಕ ಈ ಕೆಳಗೆ ನಮೂದಿಸಿರುವ ಕೆ.ಡಬ್ಲ್ಯು-1 ರ ಪ್ರಕಾರ "ಕೆ.ಪಿ.ಪಿ.ಪಿ" ಪೋರ್ಟಲ್‌ನಲ್ಲಿ ಟೆಂಡರ್ ಪ್ರಕ್ರಿಯೆಯ ದಿನಾಂಕಗಳನ್ನು ಈ ಕೆಳಕಂಡಂತೆ ನಮೂದಿಸಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಈ ಕೆಳಗೆ ನಮೂದಿಸಿರುವ ವೇಳಾ ಪಟ್ಟಿಯನ್ವಯ ಸರ್ಕಾರದ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟಂತೆ ವಿಲೇವಾರಿ ಮಾಡಲು ಕರ್ನಾಟಕ ಸರ್ಕಾರದ ಈ ಸಂಗ್ರಹಣಾ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. (1) Last Date And Time For Submit The Queries: 25.06.2026 5-30 PM, (2) Date And Time To Confirm Participation Of Interest In Auction: 30.06. 2026-5-30 PM, (3) End Date And Time For Bidding: **07.07.2026-11.00** Onwards, (4) Delta Time For Bidding : 5 Minutes. ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ " **https://kppp.karnataka.gov.in** " ರಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ : ಸದರಿ ಕಾಮಗಾರಿಯ ಟೆಂಡರ್‌ಅನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್ಡನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಕೆಪಿಪಿ-ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಸನೀ ಮತ್ತು ಅಂ.ಅ ವಿಭಾಗ, ಮೈಸೂರು

ವಾಸಾಸಂಇ/ಮೈಸೂರು/321/[illegible]/2026-27

ಕೃಷಿ ಮಾರಾಟ ಇಲಾಖೆ
ಉಪ ನಿರ್ದೇಶಕರ ಕಚೇರಿ,
ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ,
ಎಂ.ಜಿ ಕಾಂಪ್ಲೆಕ್ಸ್, ಎ.ಪಿ.ಎಂ.ಸಿ. ಆವರಣ, ಯಶವಂತಪುರ, ಬೆಂಗಳೂರು-22,
ಇ-ಮೇಲ್ ddbanglr@gmail.com, ದೂ: 080-23471717

ಸಂಖ್ಯೆ: ಕೃಮಾಇ/ಉನಿ/ಬೆಂ.ನ&ಗ್ರಾಂ/ 119 /2026-27 ದಿನಾಂಕ: 09.06.2026

ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ / ರೈತಬಾಂಧವರಿಗೆ / ಸಮಸ್ತ ಪೇಟೆ ಕಾರ್ಯಕರ್ತರಿಗೆ/ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ತಿಳಿಸುವುದೇನೆಂದರೆ, **Prop: KISAN AGENCIES** ಇವರು ಉಪನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಈ ಕಛೇರಿಯಿಂದ ದಿನಾಂಕ: 26.06.2020 ರಂದು ವರ್ತಕರ ಪರವಾಗಿ ಸಂಖ್ಯೆ: **DAM/DD- BNG/TRL/JUNE-1212/2020-21(YPR)** ರಲ್ಲಿ ವರ್ತಕರ ಲೈಸನ್ಸ್ ಪಡೆದು ವ್ಯವಹರಿಸುತ್ತಿರುತ್ತಾರೆ. ಸದರಿಯವರು ತಮ್ಮ ಸಂಸ್ಥೆಯ ವಿಳಾಸ No.55/A, Old 20th Cross, New 17th Cross, Doddanna Industrial Area, Srigandhakaval, Peenya 2nd Stage, Bengaluru- 560058 ಇಂದ **No.617, 1st Cross Road, B.D.A Land, 2nd Block, A.P.M.C Yard, Yeshwanthpura, Bengaluru -560022** ರ ವಿಳಾಸಕ್ಕೆ ಬದಲಾಯಿಸಿಕೊಡುವಂತೆ ಮನವಿ ಸಲ್ಲಿಸಿರುತ್ತಾರೆ.

ಮುಂದುವರೆದು Mr/Mrs Arif Javid Shariff, Prop, KISAN AGENCIES, No.55/A, Old 20th Cross, New 17th Cross, Doddanna Industrial Area, Srigandhakaval, Peenya 2nd Stage, Bengaluru-560058 ಇವರಿಂದ ಸಮಿತಿಗಾಗಲಿ / ರೈತರಿಗಾಗಲಿ / ವರ್ತಕರಿಗಾಗಲಿ/ ಸರ್ಕಾರಕ್ಕಾಗಲಿ ಹಾಗೂ ಇತರೆ ಸಂಘ ಸಂಸ್ಥೆಗಳಿಗಾಗಲಿ ಯಾವುದೇ ಬಾಕಿ ಇರುವ/ಇಲ್ಲದಿರುವ ಕುರಿತು ಹಾಗೂ ಸದರಿಯವರ ವಿಳಾಸ ಬದಲಾವಣೆ ಕುರಿತು ಯಾರಿಂದಲಾದರೂ ಸಲಹೆ / ಸೂಚನೆ / ಆಕ್ಷೇಪಣೆಗಳೇನಾದರೂ ಇದ್ದರೆ ಈ ಪ್ರಕಟಣೆಯ ದಿನಾಂಕದಿಂದ 07 ದಿನಗಳೊಳಗಾಗಿ ಲಿಖಿತ ರೂಪದಲ್ಲಿ ಈ ಕೆಳಗೆ ಸಹಿ ಮಾಡಿರುವವರಿಗೆ ಸಲ್ಲಿಸತಕ್ಕದ್ದು. ತಡವಾಗಿ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ನಿಗದಿತ ಅವಧಿಯಲ್ಲಿ ಆಕ್ಷೇಪಣೆಗಳು ಬಾರದೇ ಇದ್ದಲ್ಲಿ ನಿಯಮಾನುಸಾರ ಯಾವುದೇ ಆಕ್ಷೇಪಣೆಗಳು ಬಂದಿಲ್ಲವೆಂದು ಪರಿಗಣಿಸಿ ಮುಂದಿನಂತೆ ಕ್ರಮ ವಹಿಸಲಾಗುವುದಾಗಿ ಈ ಪ್ರಕಟಣೆಯ ಮೂಲಕ ತಿಳಿಸಲಾಗಿದೆ.

ಉಪನಿರ್ದೇಶಕರು, ಕೃಷಿ ಮಾರಾಟ ಇಲಾಖೆ,
ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಮಾಲೂರು ನಗರ ಯೋಜನಾ ಪ್ರಾಧಿಕಾರ
ಮಾಲೂರು, ಮಾರುತಿ ಬಡಾವಣೆ 2ನೇ ಹಂತ, ಮಾಡ್ರನ್ ಶಾಲೆ ಹತ್ತಿರ, ತಿರುಮಲ ಕಲ್ಯಾಣ ಮಂಟಪ ರಸ್ತೆ, ಮಾಲೂರು-563 130, ಕೋಲಾರ ಜಿಲ್ಲೆ, ಕಛೇರಿ ದೂರವಾಣಿ ಸಂಖ್ಯೆ: 08151-299920.
Web Site: www.malur.tpa.gov.in,
Email: ms.malur.planning.authority@gmail.com

ಸಂಖ್ಯೆ: ಮಾಯೋಪ್ರಾ/ಭೂ.ಬ/2026-27/ ದಿನಾಂಕ:10.06.2026

ತಿದ್ದುಪಡಿ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಮಾಲೂರು ತಾಲ್ಲೂಕು ಕಸಬಾ ಹೋಬಳಿ, ತೊರ್ನಹಳ್ಳಿ ಗ್ರಾಮದ ಸ.ಸಂ. 134/3, 134/2, 285/3, 285/1, 277/1, 277/2, 277/3, 277/4, 278/1, 278/2 ಹಾಗೂ ಇತರೆ ಜಮೀನುಗಳನ್ನು "ಕೃಷಿ" ವಲಯದಿಂದ "ವಾಣಿಜ್ಯ" ವಲಯಕ್ಕೆ ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಿ, ದಿನಾಂಕ: 30.05.2026 ರಂದು ನೀಡಲಾಗಿರುವ ಪತ್ರಿಕಾ ಪ್ರಕಟಣೆಯಲ್ಲಿ "ಸದರಿ ಪ್ರದೇಶವನ್ನು ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು" ಎಂದು ಕೈ ತಪ್ಪಿನಿಂದ ನಮೂದಾಗಿದ್ದು, "ವಸತಿ" ಎನ್ನುವುದರ ಬದಲು ಹಿಂದಿನ ಪ್ರಕಟಣೆಯಲ್ಲಿ ಮೇಲೆ ನಮೂದಿಸಿರುವಂತೆ "ಕೃಷಿ" ಎಂದು ಓದಿಕೊಳ್ಳುವುದು. "ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು" ಎಂದು ತಿದ್ದುಪಡಿ ಮಾಡಿ ನಮೂದಿಸುತ್ತಾ ಈ ವಿಷಯಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಸಹಿ/- ಸದಸ್ಯ ಕಾರ್ಯದರ್ಶಿ
ಮಾಲೂರು ಯೋಜನಾ ಪ್ರಾಧಿಕಾರ ಮಾಲೂರು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:113/ಕೆಎಸ್‌ಎಂಸಿಎ/2026-27

ಮಹಿಳೆಯರಿಗೆ ಎಲೆಕ್ಟ್ರಿಕ್ ಆಟೋರಿಕ್ಷಾ ಹಸ್ತಾಂತರ

• ಬೆಂಗಳೂರು: ಜಾಗತಿಕ ಮಟ್ಟದ ವೃತ್ತಿಪರ ಸೇವಾ ಸಂಸ್ಥೆಯಾದ ಆನ್ (ಅಟ್ಟ) ಸಂಸ್ಥೆಯ ಸಹಯೋಗದೊಂದಿಗೆ ಶಿಶು ಮಂದಿರ ಸಂಸ್ಥೆಯು, ಹೆಲ್ಲಾ ನಗರದ ಶಿಶು ನಗರ ಕ್ಯಾಂಪಸ್‌ನಲ್ಲಿ ಆರ್ಥಿಕವಾಗಿ ಹಿಂದುಳಿದ ಸಮುದಾಯಗಳ ಮಹಿಳೆಯರಿಗೆ 12 ಎಲೆಕ್ಟ್ರಿಕ್ ಆಟೋರಿಕ್ಷಾಗಳನ್ನು ಹಸ್ತಾಂತರಿಸಿತು.

ಈ ಕಾರ್ಯಕ್ರಮವು ಶಿಶು ಮಂದಿರದ ಮಹತ್ವಾಕಾಂಕ್ಷಿ ಇಕೋ-ವೀಲ್ಸ್ ಉಪಕ್ರಮದ ಮತ್ತೊಂದು ಪ್ರಮುಖ ಮೈಲಿಗಲ್ಲಾಗಿದ್ದು, ಆನ್ ಸಂಸ್ಥೆಯ ಪ್ರಾಯೋಜಕತ್ವದಲ್ಲಿ ಈವರೆಗೆ ಒಟ್ಟು 254 ಎಲೆಕ್ಟ್ರಿಕ್ ವಾಹನಗಳನ್ನು ಮಹಿಳೆಯರಿಗೆ ವಿತರಿಸಿದ ಸಾಧನೆಯನ್ನು ದಾಖಲಿಸಿದೆ. ಕೆ.ಆರ್. ಪುರಂ ಹಾಗೂ ಪೂರ್ವ ಬೆಂಗಳೂರಿನ ವಿವಿಧ ಪ್ರದೇಶಗಳಿಂದ ಆಯ್ಕೆಯಾದ 12 ಮಹಿಳಾ ಫಲಾನುಭವಿಗಳಲ್ಲಿ ಹೆಚ್ಚಿನವರು ಒಂಟಿ ತಾಯಂದಿರು ಮತ್ತು ವಿಧವೆಯರಾಗಿದ್ದಾರೆ. ವಾಹನ ಹಸ್ತಾಂತರಕ್ಕೂ ಮುನ್ನ ಅವರು ಚಾಲನಾ ಕೌಶಲ್ಯ, ರಸ್ತೆ ಸುರಕ್ಷತೆ ಹಾಗೂ ವಾಹನ ನಿರ್ವಹಣೆಗೆ ಸಂಬಂಧಿಸಿದ ವಿಶೇಷ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಈ ಯೋಜನೆಯು ಅವರ ಜೀವನದಲ್ಲಿ ಹೊಸ ಅವಕಾಶಗಳ ಬಾಗಿಲು ತೆರೆಯುವ ಜತೆಗೆ, ಆರ್ಥಿಕ ಸ್ವಾವಲಂಬನೆ ಮತ್ತು ದೀರ್ಘಕಾಲೀನ ಭದ್ರತೆಗೆ ಭದ್ರ ಅಡಿಪಾಯವನ್ನು ಒದಗಿಸಲಿದೆ.



ಈ ಕುರಿತು ಆನ್ ಸಂಸ್ಥೆಯ ಭಾರತ ವಿಭಾಗದ ಪೀಪಲ್ ಲೀಡರ್ ಕನ್ಸ್ಟ್ರಿಯಾ ಖನ್ನಾ ಮಾತನಾಡಿ, ಸಬಲೀಕರಣ ವೆಂದರೆ ಕೇವಲ ಅವಕಾಶಗಳನ್ನು ಒದಗಿಸುವುದಲ್ಲ, ವ್ಯಕ್ತಿಗಳು ತಮ್ಮ ಭವಿಷ್ಯವನ್ನು ಆತ್ಮವಿಶ್ವಾಸದಿಂದ ನಿರ್ಮಿಸಿಕೊಳ್ಳಲು ಅಗತ್ಯ ಸಂಪನ್ಮೂಲಗಳು ಮತ್ತು ಬೆಂಬಲವನ್ನು ಕಲ್ಪಿಸುವುದು. ಇಕೋ-ವೀಲ್ಸ್ ಉಪಕ್ರಮದ ಮೂಲಕ ಮಹಿಳೆಯರಿಗೆ ಸ್ವಯಂ ಉದ್ಯೋಗ ಮತ್ತು ಆರ್ಥಿಕ ಸ್ವಾತಂತ್ರ್ಯದ ಅವಕಾಶಗಳನ್ನು ಸೃಷ್ಟಿಸುತ್ತಿರುವುದು ನಮಗೆ ಹೆಮ್ಮೆಯ ವಿಷಯ ಎಂದರು.

ಮೌಲ್ಯಾಧಾರಿತ ಬದುಕು ರೂಪಿಸಿಕೊಳ್ಳಿ

• ಕೆಂಗೇರಿ: ವೈದ್ಯಕೀಯ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣ ಪಡೆಯುವುದರ ಜತೆಗೆ ಮೌಲ್ಯಾಧಾರಿತ ಬದುಕನ್ನು ರೂಪಿಸಿಕೊಳ್ಳಿ ಎಂದು ರಾಜರಾಜೇಶ್ವರಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಸಂಸ್ಥಾಪಕ ಕುಲಪತಿ ಡಾ. ಎಂ.ಸಿ. ಷಣ್ಮುಗಂ ಕಿವಿ ಮಾತು ಹೇಳಿದರು.



ಬೆಂಗಳೂರು -ಮೈಸೂರು ಮುಖ್ಯ ರಸ್ತೆಯಲ್ಲಿರುವ ರಾಜರಾಜೇಶ್ವರಿ ಮೆಡಿಕಲ್ ಕಾಲೇಜಿನ ಎಸಿಎಸ್ ಕನ್ವೆನ್ಷನಲ್ ಹಾಲ್‌ನಲ್ಲಿ ಆಯೋಜಿಸಿದ್ದ ಕಾರ್ಡಿಯಂ -ಕಾರ್ನಿವಾಲ್ -2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೆಡಿಕಲ್ ವಿದ್ಯಾರ್ಥಿಗಳ ಒತ್ತಡವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಅವರಲ್ಲಿರುವ ಕ್ರೀಡೆ, ಸಾಂಸ್ಕೃತಿಕ ಕಲೆ, ನೃತ್ಯ ಮುಂತಾದ ಪ್ರತಿಭೆಯನ್ನು ಹೊರ ಹಾಕಲು ಇಂತಹ ವೇದಿಕೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಚಿತ್ರ ನಟಿ ಡಾ.ಶ್ರೀಲೀಲಾ ಮಾತನಾಡಿ, ತಂತ್ರಜ್ಞಾನ ಯುಗದಲ್ಲಿ ವಿದ್ಯಾರ್ಥಿಗಳು ವೈದ್ಯಕೀಯ ಕ್ಷೇತ್ರ ವನ್ನು ಆಯ್ಕೆ ಮಾಡಿಕೊಂಡು, ಜನ ಸಾಮಾನ್ಯರ ಆರೋಗ್ಯ ಸೇವೆ ಮಾಡಲು ಮುಂದಾಗಿರುವುದು ಒಳ್ಳೆಯ ಬೆಳವಣಿಗೆ. ನಾನು ಕೂಡ ವೈದ್ಯಕೀಯ ವಿದ್ಯಾರ್ಥಿನಿ ಆದರೂ ಚಿತ್ರ ರಂಗವನ್ನು ಆಯ್ಕೆ ಮಾಡಿಕೊಂಡು ಮನರಂಜನೆ ನೀಡುವುದು ಒಂದು ರೀತಿಯ ಭಾಗ್ಯ. ವೈದ್ಯಕೀಯ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದ ಜನರ ಆರೋಗ್ಯವನ್ನು ಕಾಪಾಡುವ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ವಿವಿಧ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಜಾಥಾ



ಕಾರ್ಮಿಕ ಇಲಾಖೆ, ಕರ್ನಾಟಕ ರಾಜ್ಯ ಬಾಲ ಹಾಗೂ ಕಿಶೋರ ಕಾಮಿಕ ಪದ್ಧತಿ ನಿರ್ಮೂಲನಾ ಯೋಜನಾ ಸೊಸೈಟಿ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ, ಬೆಂಗಳೂರು ನಗರ ಜಿಲ್ಲೆ ಹಾಗೂ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಹೊಸದಿಲ್ಲಿ ವತಿಯಿಂದ ಕಂಠೀರವ ಸ್ಟೇಡಿಯಂನಲ್ಲಿ ಆಯೋಜಿಸಲಾಗಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನದ ಜಾಥಾ ಕಾರ್ಯಕ್ರಮದಲ್ಲಿ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಿರುಸುದ್ದಿ

ಮಳೆಗಾಲ ಆರಂಭ: ರಸ್ತೆಮೇಲಿರಲಿ ನಿಗಾ



• ಬೆಂಗಳೂರು: ಸಂಚಾರ ದಟ್ಟಣೆ ಹಾಗೂ ಮಳೆ ನೀರು ನಿಲ್ಲುವ ರಸ್ತೆಗಳ ಮೇಲೆ ತುರ್ತು ನಿಗಾವಹಿಸಿ ಎಂದು ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ಸಂಚಾರ ಪೊಲೀಸ್ ಹಾಗೂ ಪಾಲಿಕೆ ಅಭಿಯಂತರರಿಗೆ ಸೂಚಿಸಿದ್ದಾರೆ. ಸಂಚಾರ ಪೊಲೀಸ್ ಹಾಗೂ ಪಾಲಿಕೆ ಅಭಿಯಂತರರೊಂದಿಗೆ ಸಭೆ ನಡೆಸಿದ ಅವರು, ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು, ರಸ್ತೆ ಸುರಕ್ಷತೆ ಹೆಚ್ಚಿಸಲು ಹಾಗೂ ಮುಂಬರುವ ಮಳೆಗಾಲದ ಜಲಾವೃತ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಲು ಸಿದ್ಧರಾಗಿ ಎಂದು ತಿಳಿಸಿದ್ದಾರೆ. ಸಂಚಾರ ಪೊಲೀಸರು ಗುರುತಿಸಿರುವ ಹುಳಿಮಾವು ಕೆರೆ ಜಂಕ್ಷನ್,ಎಚ್.ಎಸ್.ಆರ್ ಲೇಔಟ್ 14ನೇ ಮುಖ್ಯ ರಸ್ತೆ, ಸೋನಿ ವರ್ಲ್ಡ್ ಜಂಕ್ಷನ್ , ಹೊರವರ್ತುಲ ರಸ್ತೆ, ಬೆಳ್ಳಂದೂರು - ಇಬ್ಬಲೂರು ಜಂಕ್ಷನ್, ವಿಪ್ರೋ ಜಂಕ್ಷನ್ - ಸರ್ಜಾಪುರ ರಸ್ತೆ, ರೂಪೇನ ಅಗ್ರಹಾರ ಸೇರಿದಂತೆ ಮಳೆ ನೀರು ನಿಲ್ಲುವ ಪ್ರಮುಖ 10 ಜಲಾವೃತ ಪ್ರದೇಶಗಳ ಮೇಲೆ ನಿಗಾ ವಹಿಸುವಂತೆ ಅಭಿಯಂತರರಿಗೆ ಸೂಚಿಸಿದ್ದಾರೆ.

ಶ್ರೇಷ್ಠತಾ ಕೇಂದ್ರ ಸ್ಥಾಪನೆಗೆ ಒಪ್ಪಂದ



• ಬೆಂಗಳೂರು: ಜಾಗತಿಕ ವೈದ್ಯಕೀಯ ತಂತ್ರಜ್ಞಾನ ಸಂಸ್ಥೆ ಬ್ರೈನ್‌ಲ್ಯಾಬ್ ಮತ್ತು ಕಿಮ್ಸ್ ಆಸ್ಪತ್ರೆಗಳು ದಕ್ಷಿಣ ಏಷ್ಯಾದ ಮೊದಲ ಕ್ರಿಯಾತ್ಮಕ ನರಶಸ್ತ್ರಚಿಕಿತ್ಸಾ ಉಲ್ಲೇಖ ಕೇಂದ್ರ, ತರಬೇತಿ ಕೇಂದ್ರ, ಹಾಗೂ ಶ್ರೇಷ್ಠತಾ ಕೇಂದ್ರ ಸ್ಥಾಪಿಸಲು ಒಪ್ಪಂದಕ್ಕೆ ಸಹಿ ಹಾಕಿವೆ. ಈ ಕೇಂದ್ರವು ಪಾರ್ಕಿನ್ಸನ್ ಕಾಯಿಲೆ, ಅಪಸ್ಮಾರ ಸೇರಿದಂತೆ ಸಂಕೀರ್ಣ ನರವೈಜ್ಞಾನಿಕ ಅಸ್ವಸ್ಥತೆಗಳಿಗೆ ಸುಧಾರಿತ ಚಿಕಿತ್ಸೆಯ ಪ್ರವೇಶವನ್ನು ವಿಸ್ತರಿಸುವ ಗುರಿ ಹೊಂದಿದೆ. ರೋಬೋಟಿಕ್ ನೆರವಿನ ಇಮೇಜಿಂಗ್, ಸುಧಾರಿತ ಶಸ್ತ್ರಚಿಕಿತ್ಸಾ ನ್ಯಾವಿಗೇಷನ್ ಹಾಗೂ ಮಿಶ್ರ ರಿಯಾಲಿಟಿ ತಂತ್ರಜ್ಞಾನಗಳ ಮೂಲಕ ನಿಖರವಾದ ಮೆದುಳಿನ ಶಸ್ತ್ರಚಿಕಿತ್ಸೆ ಮತ್ತು ವೈದ್ಯರಿಗೆ ವಿಶೇಷ ತರಬೇತಿ ನೀಡಲಾಗುತ್ತದೆ. ಕಿಮ್ಸ್ ಆಸ್ಪತ್ರೆಗಳ ಎಸ್‌ಎಚ್‌ಐಎಫ್‌ಟಿ ಉಪಕ್ರಮದಡಿ ಸ್ಥಾಪನೆಯಾಗುತ್ತಿರುವ ಈ ಕೇಂದ್ರವು ದಕ್ಷಿಣ ಏಷ್ಯಾದ ನರಶಸ್ತ್ರಚಿಕಿತ್ಸಾ ಕ್ಷೇತ್ರದಲ್ಲಿ ಹೊಸ ಮಾನದಂಡವನ್ನು ರೂಪಿಸಲಿದೆ.

ತುರ್ತು ಕ್ರಮಕ್ಕೆ ಸ್ಥಳೀಯರ ಆಗ್ರಹ | ವಿವಿಧ ವಾರ್ಡ್‌ಗಳಲ್ಲಿ ರೋಗರುಜಿನಗಳ ಭೀತಿ

ಕಗ್ಗದಾಸಪುರ: ರಾಜಕಾಲುವೆ ಅವಾಂತರ

▸ ಮಹೇಶ್ ಹೆಗಡೆ

ದಿಗಂತ ವಿಶೇಷ

• ಬೆಂಗಳೂರು: ನಗರದ ಕಗ್ಗದಾಸಪುರ ಕೆರೆ ಸಮೀಪದ 6ನೇ ಕ್ರಾಸ್ ನಿವಾಸಿಗಳು ತೀವ್ರ ಆರೋಗ್ಯ ಮತ್ತು ಪರಿಸರ ಸಂಕಟವನ್ನು ಎದುರಿಸುತ್ತಿದ್ದಾರೆ. ಕಾರಣ, ಇಲ್ಲಿನ ಪ್ರಮುಖ ರಾಜಕಾಲುವೆಗೆ ಕಳೆದ ಕೆಲವು ತಿಂಗಳುಗಳಿಂದ ನಿರಂತರವಾಗಿ ಸಂಸ್ಕರಿಸದ ಒಳಚರಂಡಿ ನೀರನ್ನು ಹರಿಬಿಡಲಾಗುತ್ತಿದ್ದು, ಸ್ಥಳೀಯರು ನರಕ ಯಾತನೆ ಅನುಭವಿಸುವಂತಾಗಿದೆ.

ಈ ಗಂಭೀರ ಸಮಸ್ಯೆಯ ಕುರಿತು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಹಾಗೂ ಬಿಡಬ್ಲ್ಯುಎಸ್‌ಎಸ್‌ಬಿ ಅಧಿಕಾರಿಗಳು ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಸಮಸ್ಯೆಯ ಹಿನ್ನೆಲೆ ಮತ್ತು ತೀವ್ರತೆ: ಮಳೆನೀರು ಸರಾಗವಾಗಿ ಹರಿದು ಹೋಗಬೇಕಾದ ರಾಜಕಾಲುವೆಯಲ್ಲಿ ಈಗ ಕೇವಲ ಕಪ್ಪನೆಯ ವಿಷಕಾರಿ ತ್ಯಾಜ್ಯ ನೀರು ಹರಿಯುತ್ತಿದೆ. ಸ್ಥಳೀಯವಾಗಿ ಭೂಗತ ಚರಂಡಿ (ಯುಜಿಡಿ) ವ್ಯವಸ್ಥೆಯಲ್ಲಿ ಉಂಟಾಗಿರುವ ಬ್ಲಾಕೇಜ್ ಅಥವಾ ಅನಧಿಕೃತವಾಗಿ ರಾಜಕಾಲುವೆಗೆ ಸಂಪರ್ಕ ಕಲ್ಪಿಸಿರುವ ಒಳಚರಂಡಿ ಪೈಪ್‌ಲೈನ್‌ಗಳೇ ಇದಕ್ಕೆ ಮುಖ್ಯ ಕಾರಣ ಎಂದು ನಿವಾಸಿಗಳು ಆರೋಪಿಸಿದ್ದಾರೆ.

ಆರೋಗ್ಯದ ಮೇಲಿನ ಗಂಭೀರ ಪರಿಣಾಮ: ನಿರಂತರವಾಗಿ ನಿಲ್ಲುತ್ತಿರುವ ಕೊಳಚೆ ನೀರಿನಿಂದಾಗಿ ಪ್ರದೇಶದಲ್ಲಿ ಸೊಳ್ಳೆಗಳ ಕಾಟ ವಿಪರೀತವಾಗಿದ್ದು, ಡೆಂಗ್ಯೂ, ಮಲೇರಿಯಾ ಮತ್ತು ಚಿಕನ್‌ಗೂನ್ಯಾದಂತಹ ಸಾಂಕ್ರಾಮಿಕ ರೋಗಗಳ ಭೀತಿ ಆವರಿಸಿದೆ. ದುರ್ವಾಸನೆಯಿಂದಾಗಿ ಮಕ್ಕಳು ಹಾಗೂ ವೃದ್ಧರು ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದಾರೆ ಎಂದು ಸ್ಥಳೀಯರು ಅಳಲು ತೋಡಿಕೊಂಡಿದ್ದಾರೆ.

ಪರಿಸರ ಮಾಲಿನ್ಯ ಮತ್ತು ಗೃಹೋಪಯೋಗಿ ವಸ್ತುಗಳ ಹಾನಿ: ಕಾಲುವೆಯಲ್ಲಿ ಹೂಳು ಮತ್ತು ಘನತ್ಯಾಜ್ಯ ತುಂಬಿಹೋಗಿದೆ. ಈ ಕೊಳಚೆ ನೀರಿನಿಂದ ಹೊರಹೊಮ್ಮುವ ರಾಸಾಯನಿಕಯುಕ್ತ ಅನಿಲಗಳಿಂದಾಗಿ ಸುತ್ತಮುತ್ತಲಿನ ಮನೆಗಳಲ್ಲಿನ ಎಲೆಕ್ಟ್ರಾನಿಕ್ ಉಪಕರಣಗಳು ಮತ್ತು ಲೋಹದ ವಸ್ತುಗಳು ಶೀಘ್ರವಾಗಿ ತುಕ್ಕು ಹಿಡಿಯುತ್ತಿವೆ ಎಂದು ನಾಗರಿಕ ಸ್ವಯಂಸೇವಕಿ ಶಚಿ ಪಾಠಕ್ ತಿಳಿಸಿದ್ದಾರೆ.

ಅಂತರ್ಜಲ ಕಲುಷಿತ-ಪ್ರವಾಹದ ಮುನ್ನೆಚ್ಚರಿಕೆ: ವಿಷಕಾರಿ ನೀರು ಸತತವಾಗಿ ಭೂಮಿಗೆ ಇಳಿಯುತ್ತಿರುವುದರಿಂದ, ಸುತ್ತಮುತ್ತಲಿನ ಬೋರ್‌ವೆಲ್ ನೀರು ಕಲುಷಿತಗೊಳ್ಳುವ ಅಪಾಯ ಎದುರಾಗಿದೆ. ಮುಂಗಾರು ಮಳೆ ಆರಂಭವಾಗುತ್ತಿರುವುದರಿಂದ, ಈಗಾಗಲೇ ಹೂಳು ತುಂಬಿ ರುವ ರಾಜಕಾಲುವೆ ತುಂಬಿ ಹರಿದು ಮನೆಗಳಿಗೆ ನೀರು ನುಗ್ಗುವ ಮತ್ತು ಸಾರ್ವಜನಿಕ ಆಸ್ತಿಗೆ ಹಾನಿಯಾಗುವ ಆತಂಕವನ್ನು ಸ್ಥಳೀಯರು ವ್ಯಕ್ತಪಡಿಸುತ್ತಿದ್ದಾರೆ.



ಶಾಶ್ವತ ಕಣ್ಗಾವಲು ವ್ಯವಸ್ಥೆ ರೂಪಿಸಿ

ಈ ಸಮಸ್ಯೆಯ ಕುರಿತು ನಾಗರಿಕ ಸ್ವಯಂಸೇವಕಿ ಶಚಿ ಪಾಠಕ್ ನೇತೃತ್ವದಲ್ಲಿ 60ಕ್ಕೂ ಹೆಚ್ಚು ನಿವಾಸಿಗಳು ಜಿಬಿಎಗೆ ಮನವಿ ಸಲ್ಲಿಸಿದ್ದು, ಈಗಾಗಲೇ ಸಮಸ್ಯೆ ಕೈಮೀರಿ ಹೋಗುತ್ತಿದೆ. ಕಾಲಮಿತಿಯೊಳಗೆ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ವಿಕೋಪಕ್ಕೆ ತಿರುಗಲಿದೆ ಎಂದು ಎಚ್ಚರಿಸಿದ್ದಾರೆ. ಜಿಬಿಎ ಮತ್ತು ಬಿಡಬ್ಲ್ಯುಎಸ್‌ಎಸ್‌ಬಿ ಅಧಿಕಾರಿಗಳು ತಕ್ಷಣವೇ ಜಂಟಿ ಪರಿಶೀಲನೆ ನಡೆಸಬೇಕು. ರಾಜಕಾಲುವೆಗೆ ಸಂಪರ್ಕ ಹೊಂದಿರುವ ಎಲ್ಲಾ ಅನಧಿಕೃತ ಒಳಚರಂಡಿ ಸಂಪರ್ಕಗಳನ್ನು ಪತ್ತೆಹಚ್ಚಿ ಕಡಿತಗೊಳಿಸಬೇಕು. ಹೂಳು ಮತ್ತು ಕಸವನ್ನು ತಕ್ಷಣವೇ ತೆರವುಗೊಳಿಸಬೇಕು. ಸುತ್ತಮುತ್ತಲಿನ ಯುಜಿಡಿ ಲೈನ್‌ಗಳನ್ನು ದುರಸ್ತಿಪಡಿಸಬೇಕು.ಈ ಸಮಸ್ಯೆ ಮರುಕಳಿಸದಂತೆ ಶಾಶ್ವತ ಕಣ್ಗಾವಲು ವ್ಯವಸ್ಥೆ ರೂಪಿಸಬೇಕು ಎಂದು ನಾಗರಿಕರು ಆಗ್ರಹಿಸಿದ್ದಾರೆ.

> 6ನೇ ಕ್ರಾಸ್ ಕಗ್ಗದಾಸಪುರ ರಾಜಕಾಲುವೆ ಬಳಿ ವಾಸಿಸುವ ನಿವಾಸಿಗಳು ಕೊಳಚೆ ನೀರಿನ ದುರ್ವಾಸನೆಯಿಂದ ತತ್ತರಿಸಿದ್ದಾರೆ. ಕಲುಷಿತ ನೀರು ಕೆರೆಗಳಿಗೆ ಹರಿದು ಹೋಗುತ್ತಿದ್ದು, ಅಲ್ಲಿನ ಪರಿಸರ ವ್ಯವಸ್ಥೆಯನ್ನು ಹಾಳುಮಾಡುತ್ತಿದೆ. ಅಂತರ್ಜಲವನ್ನು ಕಲುಷಿತಗೊಳಿಸುವುದರ ಜೊತೆಗೆ ನೀರಿನ ಗುಣಮಟ್ಟವನ್ನೂ ಕುಸಿಯುವಂತೆ ಮಾಡಿದೆ. ಸಾರ್ವಜನಿಕರ ಆರೋಗ್ಯ ಮತ್ತು ಪರಿಸರ ಎರಡರ ಮೇಲೂ ಗಂಭೀರ ಪರಿಣಾಮ ಬೀರುತ್ತಿದೆ.
>
> ■ **ಶಚಿ ಪಾಠಕ್**, ನಾಗರಿಕ ಸ್ವಯಂಸೇವಕಿ



250 ಕೆ.ಜಿ. ತ್ಯಾಜ್ಯ ಸಂಗ್ರಹ

• ಬೆಂಗಳೂರು: ಸತ್ವ ಗ್ರೂಪ್, ನಾಲೆಡ್ಜ್ ರಿಯಾಲ್ಟಿ ಟ್ರಸ್ಟ್ ಹಾಗೂ ರಿವರ್ಸ್ ಗ್ಲೋಬಲ್ ಸಹಯೋಗದಲ್ಲಿ ಆರಂಭಗೊಂಡಿರುವ ಕರ್ನಾಟಕ ಶೂನ್ಯ ತ್ಯಾಜ್ಯ ಉಪಕ್ರಮ ದಕ್ಷಿಣ ಕನ್ನಡ ಕರಾವಳಿ ಪ್ರದೇಶದಲ್ಲಿ ಗಮನಾರ್ಹ ಪರಿಣಾಮ ಮೂಡಿಸಿದೆ.

ಸೋಮೇಶ್ವರ ಬೀಚ್‌ನಲ್ಲಿ ನಡೆದ ಸ್ವಚ್ಛತಾ ಕಾರ್ಯದಲ್ಲಿ 40ಕ್ಕೂ ಹೆಚ್ಚು ಸ್ವಯಂಸೇವಕರು ಭಾಗವಹಿಸಿ ಸುಮಾರು 250 ಕೆ.ಜಿ. ತ್ಯಾಜ್ಯ ಸಂಗ್ರಹಿಸಿದರು. ಈ ಮೂರು ವರ್ಷದ ಯೋಜನೆಯಡಿ 3.5 ರಿಂದ 4.5 ಮಿಲಿಯನ್ ಕೆ.ಜಿ. ತ್ಯಾಜ್ಯ ಸಂಗ್ರಹಿಸುವ ಗುರಿ ಹೊಂದಲಾಗಿದೆ.

ಯೋಜನೆಯ ಮೊದಲ ತಿಂಗಳಲ್ಲೇ 1.5 ಲಕ್ಷ ಕೆ.ಜಿ. ಒಣ ತ್ಯಾಜ್ಯ ಸಂಗ್ರಹವಾಗಿದ್ದು, 50 ಸಾವಿರ ಕೆ.ಜಿ.ಗಿಂತ ಹೆಚ್ಚು ಪ್ಲಾಸ್ಟಿಕ್‌ಅನ್ನು ವೈಜ್ಞಾನಿಕವಾಗಿ ಸಂಸ್ಕರಿಸಲಾಗಿದೆ. ಜತೆಗೆ 20 ತ್ಯಾಜ್ಯ ಸಂಗ್ರಹಕಾರರಿಗೆ ಉದ್ಯೋಗ ಬೆಂಬಲ ಒದಗಿಸಲಾಗಿದ್ದು, 30ಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳಲ್ಲಿ ತ್ಯಾಜ್ಯ ನಿರ್ವಹಣಾ ಚಟುವಟಿಕೆಗಳಿಗೆ ಉತ್ತೇಜನ ನೀಡಲಾಗಿದೆ.



2026ರ ಅಂತ್ಯದ ವೇಳೆಗೆ 10 ಲಕ್ಷ ಕೆ.ಜಿ. ಒಣ ತ್ಯಾಜ್ಯ ಸಂಗ್ರಹಿಸಿ, 60 ತ್ಯಾಜ್ಯ ಕಾರ್ಮಿಕರ ಜೀವನೋಪಾಯ ಸುಧಾರಿಸುವ ಗುರಿಯನ್ನು ಉಪಕ್ರಮ ಹೊಂದಿದೆ.



ವಿಜಯನಗರದ ಮಾರುತಿ ಮೆಡಿಕಲ್ಸ್‌ನ ಗೋರಕ್ಷಕ ಮಹೇಂದ್ರ ಮುನೋತ್ ಅವರ ನಿವಾಸಕ್ಕೆ, ಬಸವಕಲ್ಯಾಣ ಶಾಸಕ ಶರಣು ಸಲಗಾರ್ ಭೇಟಿ ನೀಡಿ ಗೌರವಿಸಿದರು. ಬಸವಕಲ್ಯಾಣದಲ್ಲಿ ಶಿಕ್ಷಕರು ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸುವ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಅವರನ್ನು ಆಹ್ವಾನಿಸಿದರು.

ನರೇಂದ್ರ ಮೋದಿ ಹೊಸ ದಾಖಲೆ: ಸಸಿ ನೆಟ್ಟು ಸಂಭ್ರಮ

• ಯಲಹಂಕ: ದೇಶದ ಪ್ರಧಾನಿಯಾಗಿ 12 ವರ್ಷಗಳ ಸುದೀರ್ಘ ಕಾಲ ಸೇವೆ ಸಲ್ಲಿಸುವ ಮೂಲಕ ನರೇಂದ್ರ ಮೋದಿ ಯವರು ಭಾರತದ ರಾಜಕೀಯ ಇತಿಹಾಸದಲ್ಲಿ ಹೊಸ ದಾಖಲೆ ಬರೆದಿರುವ ಹಿನ್ನೆಲೆಯಲ್ಲಿ, ಯಲಹಂಕ ನಗರ ಮಂಡಲ ಬಿಜೆಪಿ ಯುವ ಮೋರ್ಚಾದ ನೂರಾರು ಕಾರ್ಯಕರ್ತರು ಸಸಿಗಳನ್ನು ನೆಟ್ಟು ಸಂಭ್ರಮಿಸಿದರು.

ಶಾಸಕ ಎಸ್ ಆರ್ ವಿಶ್ವನಾಥ್ ಅವರ ನೇತೃತ್ವದಲ್ಲಿ, ಸ್ವಚ್ಛ ಭಾರತ ಅಭಿಯಾನದ ಅಡಿಯಲ್ಲಿ ಯಲಹಂಕ ಉಪನಗರದ ಶ್ರೀ ವೀರಾಂಜನೇಯ ಸ್ವಾಮಿ ದೇಗುಲದ ಆವರಣವನ್ನು ಸ್ವಚ್ಛಗೊಳಿಸಿದರು. ಸಂಭ್ರಮ್ ಕಾಲೇಜ್ ಬಳಿಯಿರುವ ವೀರಶೈವ ರುದ್ರಭೂಮಿಯ ಸುತ್ತ ಸಸಿಗಳನ್ನು ನೆಟ್ಟು ನರೇಂದ್ರ ಮೋದಿ ಅವರಿಗೆ ಶುಭ ಹಾರೈಸಿದರು.



ನರೇಂದ್ರ ಮೋದಿಯವರು ಇನ್ನೂ ಹಲವು ಕಾಲ ದೇಶದ ಪ್ರಧಾನಿಯಾಗಿ ಅಧಿಕಾರ ನಡೆಸುವ ಮೂಲಕ ದೇಶದ ಹಿರಿಮೆಯನ್ನು ಜಾಗತಿಕ ಮಟ್ಟದಲ್ಲಿ ಪ್ರಜ್ವಲಿಸುವಂತೆ ಮಾಡಲೆಂಬ ಆಶಯವನ್ನು ಯುವ ಮೋರ್ಚಾ ಕಾರ್ಯಕರ್ತರು ವ್ಯಕ್ತಪಡಿಸಿದರು.

ಯಲಹಂಕ ನಗರ ಮಂಡಲ ಬಿಜೆಪಿ ಅಧ್ಯಕ್ಷ ಎಂ.ಮುನಿರಾಜು, ಪ್ರಧಾನ ಕಾರ್ಯದರ್ಶಿ ವಿ.ಎಂ. ಈಶ್ವರ್, ವಿ ಪವನ್ ಕುಮಾರ್, ಬಿಜೆಪಿ ಮುಖಂಡ ಎ.ಸಿ.ಮುನಿಕೃಷ್ಣಪ್ಪ, ಚೊಕ್ಕನಹಳ್ಳಿ ವೆಂಕಟೇಶ್, ಮೋಹನ್ ಬಿ.ಆರ್., ಚಿಕ್ಕಬೊಮ್ಮಸಂದ್ರ ರಮೇಶ್, ಮಣಿ, ಯುವ ಮೋರ್ಚಾ ಅಧ್ಯಕ್ಷ ಎಚ್.ಎಸ್.ಕಿರಣ್ ಸೇರಿದಂತೆ ಯುವ ಮೋರ್ಚಾ ಕಾರ್ಯಕರ್ತರಿದ್ದರು.

46 ಇವಿ-ವಾಹನಗಳ ಖರೀದಿಗೆ ಜಿಬಿಎ ಮುಂದು

• ಬೆಂಗಳೂರು: ಘನ ತ್ಯಾಜ್ಯ ನಿರ್ವಹಣೆ ವಿಷಯವಾಗಿ ಲೋಕಾಯುಕ್ತರ ತರಾಟೆಯ ನಂತರ ಎಚ್ಚೆತ್ತು ಕೊಂಡಿರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಗುತ್ತಿಗೆದಾರರ ಮೇಲಿನ ಅವಲಂಬನೆ ಕಡಿಮೆ ಮಾಡಲು ಮಹತ್ವದ ಹೆಜ್ಜೆಯನ್ನಿಟ್ಟಿದೆ.

ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಹಾಗೂ ನಗರ ಪಾಲಿಕೆಗಳ ಸ್ವಂತ ವಾಹನಗಳ ಮೂಲಕವೇ ನಿರ್ವಹಿಸಲು ನಿರ್ಧರಿಸಿದ್ದು, ಈ ಸಂಬಂಧ ಸಿದ್ಧಪಡಿಸಿರುವ ಪ್ರಸ್ತಾವನೆಯನ್ನು ಸರ್ಕಾರದ ಮುಂದಿಟ್ಟಿದೆ. ಅಲ್ಲದೆ ಮೊದಲ ಹಂತದಲ್ಲಿ 46 ಇವಿ-ವಾಹನಗಳ ಖರೀದಿಗೆ ಮುಂದಾಗಿದೆ.

ಪ್ರಸ್ತುತ ಅಂದಾಜು 1.20 ಕೋಟಿಗೂ ಅಧಿಕ ಜನ ಸಂಖ್ಯೆ ಹೊಂದಿರುವ ಬೆಂಗಳೂರು ಮಹಾನಗರದಲ್ಲಿ 30 ಲಕ್ಷಕ್ಕೂ ಹೆಚ್ಚು ಮನೆಗಳಿವೆ. ನಿಯಮಗಳ ಪ್ರಕಾರ ಪ್ರತಿ 750 ಮನೆಗಳಿಗೆ ಒಂದು ಬ್ಲಾಕ್ ಎಂದು ಪರಿಗಣಿಸಿ ಒಟ್ಟು 4,000 ವಾಹನಗಳ ಅಗತ್ಯವಿದೆ. ಸದ್ಯ ನಗರದಲ್ಲಿ 4,900 ಆಟೋ ಟಿಪ್ಪರ್‌ಗಳ ಕಾರ್ಯನಿರ್ವಹಿಸುತ್ತಿದ್ದರೂ, ಅವು ಗಳಲ್ಲಿ ಶೇ. 50ಕ್ಕಿಂತಲೂ ಹೆಚ್ಚು ವಾಹನಗಳು 15 ವರ್ಷಗಳಿಗಿಂತಲೂ ಹಳೆಯದಾಗಿವೆ.



ಹಳೆಯ ವಾಹನಗಳಿಂದಾಗಿ ಘನತ್ಯಾಜ್ಯ ನಿಯಮಾವಳಿ-2026 ರ ಪ್ರಕಾರ ಒಣಕಸ, ಹಸಿ ಕಸ, ಸ್ಯಾನಿಟರಿ ಕಸ ಮತ್ತು ವಿಶೇಷ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸುವುದು ಅಸಾಧ್ಯವಾಗಿದೆ. ಪ್ರಸ್ತುತ ಬಳಕೆಯಲ್ಲಿರುವ ಮೂರು ಚಕ್ರದ ಆಟೋ ಟಿಪ್ಪರ್‌ಗಳಲ್ಲಿ ಗರಿಷ್ಠ 500 ಕೆಜಿ ತ್ಯಾಜ್ಯ ಸಾಗಿಸುವ ಸಾಮರ್ಥ್ಯ ಮಾತ್ರವಿದೆ.

ಮೊದಲ ಹಂತದಲ್ಲಿ 46 ಇ-ವಾಹನಗಳ ಖರೀದಿ

ಮೊದಲ ಹಂತದಲ್ಲಿ 46 ಇ-ವಾಹನಗಳ ಖರೀದಿಗೆ ಬಿಎಸ್‌ಡಬ್ಲ್ಯುಎಂಎಲ್ ಮುಂದಾಗಿದೆ. ಮೊದಲ ಹಂತವಾಗಿ ಸುಮಾರು 4.97 ಕೋಟಿ ರೂ. ಆಡಳಿತಾತ್ಮಕ ಅನುಮೋದನೆಯೊಂದಿಗೆ 46 ಎಲೆಕ್ಟ್ರಿಕ್ ವಾಹನಗಳನ್ನು ಖರೀದಿಸಲಾಗುತ್ತಿದೆ. ಜೆಮ್ ಪೋರ್ಟಲ್ ಮೂಲಕ ಯಾವುದೇ ಮಧ್ಯವರ್ತಿಗಳಿಲ್ಲದೆ ನೇರ ಖರೀದಿ ನಡೆಸಲು ಅನುಮತಿ ದೊರೆತಿದೆ. ಪ್ರತಿ ಇ-ವಾಹನದ ಬೆಲೆ 9.46 ಲಕ್ಷ ರೂ.ನಿಂದ 11.16 ಲಕ್ಷ ರೂ. ವರೆಗೆ ಇರಲಿದೆ. ಈ ಹೊಸ ವಾಹನಗಳಲ್ಲಿ ಕಡ್ಡಾಯವಾಗಿ ಜಿಪಿಎಸ್, ಡ್ಯಾಶ್ ಕ್ಯಾಮ್ ಸೇರಿದಂತೆ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಲಾಗುತ್ತಿದ್ದು, ಇದರಿಂದ ಕಸದ ಲೈವ್ ಟ್ರ್ಯಾಕಿಂಗ್ ಸುಲಭವಾಗಲಿದೆ ಎಂದು ತಿಳಿಸಿದ್ದಾರೆ.

ಪಾಲಿಕೆಗಳ ಆಯುಕ್ತರಿಗೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ

ಕಾಮಗಾರಿಗಳಿಗೆ ಜಿಐಎಸ್ ಮ್ಯಾಪಿಂಗ್ ಮಾಡಿ

• ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳಿಂದ ಕೈಗೆತ್ತಿಕೊಂಡಿ ರುವ ಕಾಮಗಾರಿಗಳಿಗೆ ಜಿಐಎಸ್ ಮ್ಯಾಪಿಂಗ್ ಮೂಲಕ ಏಕೀಕರಣಗೊಳಿಸುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಪಾಲಿಕೆಗಳ ಆಯುಕ್ತರಿಗೆ ಸೂಚಿಸಿದ್ದಾರೆ.



ಜಿಬಿಎ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳು ಕೈಗೆತ್ತಿಕೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಕುರಿತು ಪಾಲಿಕೆ ಆಯುಕ್ತರ ಹಾಗೂ ಜಿಬಿಎ ಅಧಿಕಾರಿಗಳ ಸಭೆ ನಡೆಸಿದ ಅವರು, ಜಿಬಿಎ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ನಗರ ಪಾಲಿಕೆಗಳು, ಇಲಾಖೆಗಳು, ಸಂಸ್ಥೆಗಳು ಕೈಗೊಳ್ಳುತ್ತಿರುವ, ಕೈಗೊಳ್ಳಲಿರುವ ಯೋಜನೆಗಳನ್ನು ಒಂದೇ ವೇದಿಕೆಗೆ ತರಲು ಜಿಐಎಸ್ ಮ್ಯಾಪ್‌ನಲ್ಲಿ ಅಪ್‌ಲೋಡ್ ಮಾಡುವ ವ್ಯವಸ್ಥೆ ಕಲ್ಪಿಸಬೇಕು. ಇದರಿಂದ ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸಿ, ಕಾಮಗಾರಿಗಳನ್ನು ಏಕಕಾಲದಲ್ಲಿ ಪರಿಣಾಮಕಾರಿಯಾಗಿ ನಿರ್ವಹಿಸಲು ಅನುಕೂಲವಾಗಲಿದೆ. ಈ ಉದ್ದೇಶಕ್ಕಾಗಿ ಅಗತ್ಯ ವೇದಿಕೆ ಸಿದ್ಧಪಡಿಸುವಂತೆ ಜಿಬಿಎ ಐಟಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಜಿಐಎಸ್ ಮ್ಯಾಪಿಂಗ್ ಕಾರ್ಯಕ್ಕಾಗಿ ಎಲ್ಲಾ ನಗರ ಪಾಲಿಕೆಗಳು, ಜಲಮಂಡಳಿ, ಬೆಸ್ಕಾಂ, ಕೆಪಿಟಿಸಿಎಲ್, ಮೆಟ್ರೋ, ಕೆ-ರೈಡ್ ಸೇರಿದಂತೆ ಇತರೆ ಇಲಾಖೆಗಳು ತಮ್ಮ ಕ್ರಿಯಾ ಯೋಜನೆಗಳನ್ನು ಜಿಬಿಎಗೆ ಸಲ್ಲಿಸುವಂತೆ ಸೂಚಿಸಿದ್ದಾರೆ.



ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಜಿಐಎಸ್ ಮ್ಯಾಪ್‌ನಲ್ಲಿ ಕಾಮಗಾರಿಗಳ ಮಾಹಿತಿಯನ್ನು ಅಪ್‌ಡೇಟ್ ಮಾಡಿದ ನಂತರವೇ ಬಿಲ್ ಪಾವತಿಸುವ ವ್ಯವಸ್ಥೆಯನ್ನು ಜಾರಿಗೆ ತರಲು ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದ್ದಾರೆ.

ಹೆಬ್ಬಾಳ ಜಂಕ್ಷನ್‌ನಲ್ಲಿ ಪಾದಚಾರಿ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ವಿನ್ಯಾಸ ರೂಪಿಸಲಾಗುತ್ತಿದ್ದು, ಅದನ್ನು ಶೀಘ್ರದಲ್ಲೇ ಅಂತಿಮಗೊಳಿಸಬೇಕು. ಬಳಿಕ ಕಾಮಗಾರಿಯನ್ನು ಆರಂಭಿಸಿ ನಿಗದಿತ ಅವಧಿಯೊಳಗೆ ಪೂರ್ಣಗೊಳಿ ಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದಾರೆ.

ಸಭೆಯಲ್ಲಿ ಚರ್ಚೆಯಾದ ಇತರೆ ಪ್ರಮುಖ ಅಂಶಗಳು

- ಜಲಮಂಡಳಿಯ ಕಾಮಗಾರಿಗಳ ಪಟ್ಟಿಯನ್ನು ಸಿದ್ಧಪಡಿಸಿ ವರದಿ ಸಲ್ಲಿಸಲು ಸೂಚನೆ
- ಯಲಹಂಕ ಓಲ್ಡ್ ಟೌನ್ ರೈಲ್ವೆ ಹಳಿ ಕೆಳಸೇತುವೆ ಕಾಮಗಾರಿ ಪೂರ್ಣಗೊಳಿಸಲು ನವೆಂಬರ್ ಗಡುವು
- ಕಾಚರಕನಹಳ್ಳಿ ಹಾಗೂ ಪುಟ್ಟೇನಹಳ್ಳಿ ಕೆರೆ ಪ್ರದೇಶಗಳಲ್ಲಿರುವ ಕೊಳೆಗೇರಿ ನಿವಾಸಿಗಳನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲು ಸೂಚನೆ
- ಕೆ-100 ಕಾಲುವೆಯಲ್ಲಿ ಹರಿಯುವ ನೀರಿನ ಗುಣಮಟ್ಟವನ್ನು ಪರಿಶೀಲಿಸಿ ವರದಿ ಸಲ್ಲಿಸಲು ನಿರ್ದೇಶನ

ದಲಿತ ಸಂಘಗಳ ಒಕ್ಕೂಟದ ಅಧ್ಯಕ್ಷ ಎಚ್.ಸಿ. ಸಿದ್ದಲಿಂಗಯ್ಯ ಆರೋಪ

ಕಾಂಗ್ರೆಸ್‌ನಿಂದ ದಲಿತರ ಕಡೆಗಣನೆ

• ಬೆಂಗಳೂರು: ದಲಿತ ಸಮುದಾಯದ ರಾಜಕೀಯ ನಾಯಕರನ್ನು ಕಡೆಗಣನೆ ಮಾಡುತ್ತಿರುವುದನ್ನು ಖಂಡಿಸಿ ರಾಜ್ಯ ದಲಿತ ಸಂಘಟನೆಗಳ ಒಕ್ಕೂಟ ನೇತೃತ್ವದಲ್ಲಿ ಸಾವಿರಾರು ಜನರು, ಗುರುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟಿಸಿ ಕಾಂಗ್ರೆಸ್ ಸರ್ಕಾರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ದಲಿತ ಸಂಘಗಳ ಒಕ್ಕೂಟದ ಅಧ್ಯಕ್ಷ ಎಚ್.ಸಿ.ಸಿದ್ದಲಿಂಗಯ್ಯ ಮಾತನಾಡಿ, ರಾಜ್ಯ ರಾಜಕಾರಣದಲ್ಲಿ ದಲಿತ ಸಮುದಾಯದ ಪ್ರಭಾವಿ ಮತ್ತು ಹಿರಿಯ ನಾಯಕರನ್ನು ಮೂಲೆಗುಂಪು ಮಾಡುವ ಮೂಲಕ ದಲಿತ ನಾಯಕತ್ವವನ್ನೇ ನಾಶ ಮಾಡಲು ಕೆಲವರು ಸಂಚು ರೂಪಿಸಿದ್ದಾರೆ. ಪ್ರಜಾಪ್ರಭುತ್ವದ ಆಶಯಗಳ ಅನ್ವಯ ಮುಖ್ಯಮಂತ್ರಿಗಳು ನಮ್ಮ ಸಮುದಾಯದ ನಾಯಕರಿಗೆ ಸೂಕ್ತ ಸ್ಥಾನ ಮಾನ ನೀಡಬೇಕು ಎಂದರು.

ಹಳೆಯ ಮೈಸೂರು ಸೇರಿ ರಾಜ್ಯಾದ್ಯಂತ ದಲಿತ ಸಂಘಟನೆಗಳಿಗೆ ಬೆನ್ನೆಲುಬಾಗಿ ನಿಂತಿರುವ ಹಿರಿಯ ಶಾಸಕ ಎಚ್.ಸಿ.ಮಹದೇವಪ್ಪನವರಿಗೆ ಸಿಎಂ ಸ್ಥಾನ ನೀಡಬೇಕೆಂದು ಉರಿಲಿಂಗ ಪೆದ್ದಿಮಠದ ಜ್ಞಾನ ಪ್ರಕಾಶ್ ಸ್ವಾಮೀಜಿ, ಆಗ್ರಹಿಸಿದ್ದಾರೆ.



ಸಂವಿಧಾನ, ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ಸಮಾಜದ ಏಳಿಗೆಗಾಗಿ ಶ್ರಮಿಸಿದ ಹಿರಿಯ ದಲಿತ ನಾಯಕರ ಕೊರತೆ ಇಂದು ರಾಜ್ಯ ರಾಜಕಾರಣದಲ್ಲಿ ಎದ್ದು ಕಾಣುತ್ತಿದೆ. ದಶಕಗಳಿಂದ ಕಾಂಗ್ರೆಸ್‌ಗೆ ಮತ ಹಾಕುತ್ತಾ ಬಂದಿರುವ ದಲಿತ ಸಮುದಾಯಕ್ಕೆ ವಂಚನೆ ಮಾಡಲಾಗುತ್ತಿದೆ. ಉನ್ನತ ಹುದ್ದೆಗಳ ಆಮಿಷ ಒಡ್ಡಿ ಪ್ರಭಾವಿ ದಲಿತ ನಾಯಕರನ್ನು ರಾಜಕೀಯವಾಗಿ ಮುಗಿಸುವ ಹುನ್ನಾರ ನಡೆಯುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಂದು ನಗರದಲ್ಲಿ...

- ಸಿಎಸ್‌ಐಆರ್-ಎನ್‌ಎಎಲ್ : ರೈಸ್ ಕಾನ್‌ಕ್ಲೇವ್ 2026 ರ ಉದ್ಘಾಟನಾ ಕಾರ್ಯಕ್ರಮ, ಸ್ಥಳ: ವಿ. ಎಂ. ಘಾಟಗೆ ಕನ್ವೆನ್ಷನ್ ಸೆಂಟರ್, ಎಚ್‌ಎಎಲ್ ಏರ್‌ಪೋರ್ಟ್ ರಸ್ತೆ. ಮಧ್ಯಾಹ್ನ 2.15 ಕ್ಕೆ.
- ಟಿಟಿಡಿ : ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ಊಂಜಲ್ ಸಂಗೀತೋತ್ಸವ, ಸ್ಥಳ : ಶ್ರೀ ವೆಂಕಟೇಶ್ವರಸ್ವಾಮಿ ದೇವಸ್ಥಾನ (ಟಿಟಿಡಿ), 16 ನೇ ಅಡ್ಡರಸ್ತೆ, ವಯ್ಯಾಲಿಕಾವಲ್. ಸಂಜೆ 6.ಕ್ಕೆ.
- ಅದಿತಿ ಬಾಲಸುಬ್ರಹ್ಮಣ್ಯಂ ಅವರಿಂದ ಭರತನಾಟ್ಯ ನೃತ್ಯ ಪ್ರದರ್ಶನ, ಸ್ಥಳ: ಕಲಾಗ್ರಾಮ ಆಡಿಟೋರಿಯಂ, 4 ನೇ ಮಹಡಿ, ಗವಿಪುರಂ. ಸಂಜೆ 6 ರಿಂದ.

ಕಿರುಸುದ್ದಿ

ಮಹಾರಾಜ ಟ್ರೋಫಿಗೆ ಕಲ್ಯಾಣಿ ಬೆಂಗಳೂರು ಸಿದ್ಧ



• **ಬೆಂಗಳೂರು:** ಕಲ್ಯಾಣಿ ಮೋಟಾರ್ಸ್ ನೇತೃತ್ವದ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್, ಹೊಸ ಶಕ್ತಿ, ನಿರ್ಭೀತ ಉದ್ದೇಶದೊಂದಿಗೆ ಮತ್ತು ಬೆಂಗಳೂರಿಗೆ ಟ್ರೋಫಿಯನ್ನು ತರುವ ಸಂಕಲ್ಪದೊಂದಿಗೆ ತಮ್ಮ ಮಹಾರಾಜ ಟ್ರೋಫಿ ಅಭಿಯಾನವನ್ನು ಪ್ರಾರಂಭಿಸಲು ಸಜ್ಜಾಗಿದೆ. ಶುಕ್ರವಾರ, 12 ಜೂನ್ 2026 ರಂದು, ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ 2026 ರ ತಮ್ಮ ಅಧಿಕೃತ ಜೆರ್ಸಿಯನ್ನು ಬೆಂಗಳೂರಿನ ಲಲಿತ್ ಅಶೋಕ್‌ನಲ್ಲಿ ಅನಾವರಣಗೊಳಿಸಿತು. ಈ ಅದ್ದೂರಿ ಕಾರ್ಯಕ್ರಮದಲ್ಲಿ ಭಾರತದ ಮಾಜಿ ಕ್ರಿಕೆಟಿಗ ಮತ್ತು ಮಾಜಿ ಕೋಚ್ ಅನಿಲ್ ಕುಂಬ್ಳೆ ಅತಿಥಿಯಾಗಿ ಭಾಗವಹಿಸಿದ್ದರು.

ಬ್ಲಾಸ್ಟರ್ಸ್ ಫ್ರಾಂಚೈಸಿಯ ಜೆರ್ಸಿ ಅನಾವರಣ

ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ರೋಹನ್ ಎಂ. ರಾಜು, ಪ್ರಿಯಾಂಕ ಎಂ. ರಾಜು, ಕಲ್ಯಾಣಿ ಗ್ರೂಪ್ ಆಫ್ ಕಂಪನಿಗಳ ನಿರ್ದೇಶಕರು ಮತ್ತು ಕಲ್ಯಾಣಿ ಮೋಟಾರ್ಸ್ ಪ್ರೈವೇಟ್ ಲಿಮಿಟೆಡ್‌ನ ಸಿಇಒ ಎ. ವೆಂಕಟೇಶ್ವರ ರಾವ್ ಭಾಗವಹಿಸಿದ್ದರು.

ಮಹಿಳಾ ವಿಶ್ವಕಪ್: ಒಂದೇ ದಿನ, 3 ಪಂದ್ಯ

• **ಲಂಡನ್:** ಭರ್ಜರಿ ಚಾಲನೆ ಪಡೆದಿರುವ ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯ ಎರಡನೇ ದಿನದಂದು ಸ್ಕಾಟ್ಲೆಂಡ್ ತಂಡವನ್ನು ಐರ್ಲೆಂಡ್ ಎದುರಿಸಲಿದ್ದರೆ, ಬಲಿಷ್ಠ ಆಸ್ಟ್ರೇಲಿಯಾವನ್ನು ದ. ಆಫ್ರಿಕಾ ಎದುರಿಸಲಿದೆ. ಮೂರನೇ ಪಂದ್ಯದಲ್ಲಿ ವಿಂಡೀಸ್ ಮತ್ತು ನ್ಯೂಜಿಲೆಂಡ್ ತಂಡಗಳು ಎದುರಾಗಲಿವೆ. ಶುಕ್ರವಾರ ತಡರಾತ್ರಿ ಪಂದ್ಯಾವಳಿ ಶುರುವಾಯಿತು. ಶ್ರೀಲಂಕಾ ಮತ್ತು ಇಂಗ್ಲೆಂಡ್ ತಂಡಗಳು ಎದುರಾಗುವ ಮುನ್ನವೇ ಸಂಭ್ರಮದ ಉದ್ಘಾಟನಾ ಸಮಾರಂಭ ನೆರವೇರಿತು. ತಾರೆಯರ ಪ್ರದರ್ಶನ, ಹಿರಿಯರ ಮಾತು ಮತ್ತು ದಿಗ್ಗಜರ ಉಪಸ್ಥಿತಿ ಕಾರ್ಯಕ್ರಮಕ್ಕೆ ಶೋಭೆ ತಂದಿತು. ರಾತ್ರಿ 11 ಗಂಟೆಗೆ ಮೊದಲ ಪಂದ್ಯ ಶುರುವಾಯಿತು. ಎರಡನೇ ದಿನ ಮೂರು ಪಂದ್ಯಗಳಿರುವುದು ವಿಶೇಷ. ಮಹಿಳಾ ಕ್ರಿಕೆಟ್ ಕ್ಷೇತ್ರದಲ್ಲಿ ಯಾರಿಗೂ ಮುಟ್ಟಲಾಗದ ಸ್ಥಾನ ಪಡೆದು ಗೆಲುವಿನಲ್ಲೇ ಮಿಂಚುತ್ತಿರುವ ಆಸ್ಟ್ರೇಲಿಯಾ ತಂಡವು ದ.ಆಫ್ರಿಕಾವನ್ನು ಎದುರಿಸಲು ಸಜ್ಜಾಗಿದೆ. ಅತ್ತ ವಿಂಡೀಸ್ ಕೂಡ ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ಸವಾಲಿಗೆ ಸಿದ್ಧವಾಗುತ್ತಿದೆ.

ಆಸ್ಟ್ರೇಲಿಯಾ ಆಫ್ರಿಕಾ ಪಂದ್ಯ ಇಂದು

ದಿಗ್ಗಜ ಶೂಟರ್ ಜಸ್‌ಪಾಲ್ ನಿಧನ

• **ಹೊಸದಿಲ್ಲಿ:** ಮ್ಯುನಿಚ್‌ನಿಂದ ದಿಲ್ಲಿಗೆ ಬರುತ್ತಿರುವ ಮಾರ್ಗದಲ್ಲಿ ಹೃದಯಾಘಾತದಿಂದ ಭಾರತದ ದಿಗ್ಗಜರ ಶೂಟರ್, ತರಬೇತುದಾರರಾದ ಜಸ್‌ಪಾಲ್ ರಾಣಾ ನಿಧನರಾದರು. ಅವರಿಗೆ 49 ವಯಸ್ಸಾಗಿತ್ತು. ಪಿಸ್ತೂಲ್ ಮಾದರಿಯ ವಿವಿಧ ವಿಭಾಗಗಳಲ್ಲಿ ದಾಖಲೆಗಳನ್ನು ಬರೆದಿರುವ ಜಸ್‌ಪಾಲ್, ವೈಯಕ್ತಿಕ ಏಷ್ಯನ್ ಚಾಂಪಿಯನ್‌ಶಿಪ್, ಏಷ್ಯನ್ ಗೇಮ್ಸ್ ಸೇರಿದಂತೆ ವಿವಿಧ ಅಂತಾರಾಷ್ಟ್ರೀಯ ಕೂಟದಲ್ಲಿ 9 ಚಿನ್ನ ಸೇರಿದಂತೆ 15 ಪದಕಗಳನ್ನು ಗೆದ್ದಿದ್ದರು. ಅಲ್ಲಿಗೆ ನಿಲ್ಲಿಸದ ಅವರು, ಶೂಟರ್ ಮನು ಭಾಕರ್ 2 ಪದಕ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಪರಿಣಾಮ ಅವರಿಗೆ ಪಿಸ್ತೂಲ್ ವಿಭಾಗದ ಹೈ-ಪರ್ಫಾಮನ್ಸ್ ಕೋಚ್ ಆಗಿಯೂ ನೇಮಕ ಮಾಡಲಾಗಿತ್ತು. ಅದರದ್ದೇ ಕೆಲಸದ ಭಾಗವಾಗಿ ಮ್ಯುನಿಚ್‌ನಿಂದ ಮರಳುತ್ತಿರುವಾಗ ಹೃದಯಾಘಾತದಿಂದ ಮೃತಪಟ್ಟರು.

ವಿಂಬಲ್ಡನ್ ಬಹುಮಾನ ಶೇ.20ರಷ್ಟು ಹೆಚ್ಚಳ

• **ಲಂಡನ್:** ಗ್ರ್ಯಾಂಡ್‌ಸ್ಲ್ಯಾಮ್ ಆದಾಯದಲ್ಲಿ ಹೆಚ್ಚಿನ ಪಾಲು ನೀಡುವಂತೆ ಆಟಗಾರರಿಂದ ಹೆಚ್ಚುತ್ತಿರುವ ಕರೆಗಳ ಮಧ್ಯೆ, ವಿಂಬಲ್ಡನ್ 2026 ರ ಚಾಂಪಿಯನ್‌ಶಿಪ್‌ಗಾಗಿ ಬಹುಮಾನದ ಹಣವನ್ನು ಶೇಕಡಾ 20 ರಷ್ಟು ಹೆಚ್ಚಿಸುವುದಾಗಿ ಘೋಷಣೆಯಾಗಿದೆ. ಪುರುಷ ಮತ್ತು ಮಹಿಳಾ ಸಿಂಗಲ್ಸ್ ಚಾಂಪಿಯನ್‌ಗಳು ತಲಾ ದಾಖಲೆಯ 3.6 ಮಿಲಿಯನ್ (4.8 ಮಿಲಿಯನ್ ಡಾಲರ್) ಯೂರೋ ಪಡೆಯಲಿದ್ದಾರೆ. ಗುರುವಾರ ಈ ಘೋಷಣೆ ಮಾಡಿದ ಆಲ್ ಇಂಗ್ಲೆಂಡ್ ಕ್ಲಬ್ ಅಧ್ಯಕ್ಷೆ ಡೆಬೊರಾ ಜೆವಾನ್ಸ್, ಆಟಗಾರರ ದೈನಂದಿನ ವೇತನ ಸೇರಿದಂತೆ ಒಟ್ಟು ಬಹುಮಾನ ನಿಧಿ 64.2 ಮಿಲಿಯನ್ ಯೂರೋ (85.8 ಮಿಲಿಯನ್ ಡಾಲರ್) ಗೆ ಏರಲಿದೆ. ಆಟಗಾರರು ತಮ್ಮ ಆದಾಯದ ಹೆಚ್ಚಿನ ಪಾಲನ್ನು ಸ್ಪರ್ಧಿಗಳಿಗೆ ಹಂಚಿಕೆ ಮಾಡಲು ಗ್ರ್ಯಾಂಡ್ ಸ್ಲ್ಯಾಮ್ ಪಂದ್ಯಾವಳಿಗಳನ್ನು ಒತ್ತಾಯಿಸುತ್ತಿರುವ ಸಮಯದಲ್ಲಿ ಈ ಹೆಚ್ಚಳವಾಗಿದೆ.

ದ.ಆಫ್ರಿಕಾ ವಿರುದ್ಧ ಮೆಕ್ಸಿಕೋಗೆ 2–0 ರಿಂದ ಜಯ | ಮೊದಲ ಪಂದ್ಯದಲ್ಲೇ ಕೆಂಪು ಕಾರ್ಡ್‌ಗಳ ಸದ್ದು

ಮೆಕ್ಸಿಕೋ ಮಾಸ್, ಕೊರಿಯಾ ಕ್ಲಾಸ್!

• **ಮ್ಯಾಕ್ಸಿಕೋ:** ತನ್ನ ಮಾಸ್ ಆಟದೊಂದಿಗೆ ಮಿಂಚಿರುವ ಆತಿಥ್ಯ ಮೆಕ್ಸಿಕೋ ಪ್ರತಿಷ್ಠಿತ ಫಿಫಾ ವಿಶ್ವಕಪ್ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿತು. ಮೆಕ್ಸಿಕೊ ಸಿಟಿಯ ಐತಿಹಾಸಿಕ ಅಜ್ಟೆಕಾ ಕ್ರೀಡಾಂಗಣದಲ್ಲಿ, 80,824 ಪ್ರೇಕ್ಷಕರ ಸಮ್ಮುಖದಲ್ಲಿ ನಡೆದ ಪಂದ್ಯದಲ್ಲಿ ಜುಲಿಯನ್ ಕ್ವಿನೋನ್ಸ್ ಮತ್ತು ರೌಲ್ ಜಿಮೆನೆಸ್ ಮಿಂಚಿದರು. ಅತ್ತ ಎರಡನೇ ಪಂದ್ಯದಲ್ಲಿ ಜೆಕ್ ಗಣರಾಜ್ಯ ತಂಡದೊಂದಿಗೆ ಮಿಂಚಿದ ದಕ್ಷಿಣ ಕೊರಿಯಾ ಗೆಲುವ ಸಾಧಿಸಿತು.

ಭಾರತೀಯ ಕಾಲಮಾನ ಪ್ರಕಾರ ಮಧ್ಯರಾತ್ರಿ ನಡೆದ ಪಂದ್ಯದ 9ನೇ ನಿಮಿಷದಲ್ಲೇ ಕ್ವಿನೋನ್ಸ್ ಗೋಲು ಬಾರಿಸಿ ಮೆಕ್ಸಿಕೋಗೆ ಮುನ್ನಡೆ ತಂದುಕೊಟ್ಟರು. ಬಳಿಕ 66ನೇ ನಿಮಿಷದಲ್ಲಿ ಜಿಮೆನೆಸ್ ಹೆಡರ್ ಮೂಲಕ ಮತ್ತೊಂದು ಗೋಲು ದಾಖಲಿಸಿ ತಂಡದ ಗೆಲುವು ಖಚಿತಪಡಿಸಿದರು.

2-0
ಗೋಲ್‌ನಿಂದ ದಕ್ಷಿಣ ಆಫ್ರಿಕಾ ವಿರುದ್ಧ ಮೆಕ್ಸಿಕೋ ಜಯ



- ಮೆಕ್ಸಿಕೋ ಪರ ಜಿಮೆನೆಸ್‌ನ 46ನೇ ಅಂತಾರಾಷ್ಟ್ರೀಯ ಗೋಲು
- ದಕ್ಷಿಣ ಆಫ್ರಿಕಾದ ಇಬ್ಬರು ಆಟಗಾರರಿಗೆ ಕೆಂಪು ಕಾರ್ಡ್
- ಮೆಕ್ಸಿಕೋದ ಸೀಸರ್ ಮೊಂಟೆಸ್‌ಗೆ ಹೆಚ್ಚುವರಿ ವೇಳೆಯಲ್ಲಿ ಕೆಂಪು ಕಾರ್ಡ್

ಸಿಥೋಲೆ ಹಾಗೂ ತೆಂಬಾ ಜ್ವಾನೆಗೆ ಕೆಂಪು ಕಾರ್ಡ್

ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ ಸ್ತೆಹೆಲೊ ಸಿಥೋಲೆ ಹಾಗೂ ತೆಂಬಾ ಜ್ವಾನೆ ಕೆಂಪು ಕಾರ್ಡ್ ಪಡೆದು ಹೊರನಡೆದ ಕಾರಣ ತಂಡ 9 ಆಟಗಾರರೊಂದಿಗೆ ಪಂದ್ಯ ಮುಗಿಸಬೇಕಾಯಿತು. ಹೆಚ್ಚುವರಿ ಸಮಯದಲ್ಲಿ ಮೆಕ್ಸಿಕೋದ ಸೀಸರ್ ಮೊಂಟೆಸ್ ಕೂಡ ಕೆಂಪು ಕಾರ್ಡ್ ಪಡೆದರು. ವಿಶ್ವಕಪ್ ಉದ್ಘಾಟನಾ ಪಂದ್ಯದಲ್ಲಿ ಮೊದಲ ಬಾರಿಗೆ ಮೂರು ಕೆಂಪು ಕಾರ್ಡ್‌ಗಳು ಪ್ರದರ್ಶಿತವಾದವು.

09 ನೇ ನಿಮಿಷ ಜುಲಿಯನ್ ಕ್ವಿನೋನ್ಸ್ ಗೋಲು

66 ನೇ ನಿಮಿಷ ರೌಲ್ ಜಿಮೆನೆಸ್ ಗೋಲು

80,824
ಪ್ರೇಕ್ಷಕರು ಅಜ್ಟೆಕಾ ಕ್ರೀಡಾಂಗಣದಲ್ಲಿ ಹಾಜರಿ



- ರೌಲ್ ಜಿಮೆನೆಸ್‌ಗೆ ಇದು ವಿಶ್ವಕಪ್ ಇತಿಹಾಸದ ಮೊದಲ ಗೋಲು
- ಮೆಕ್ಸಿಕೋ ಪರ ಅತಿ ಹೆಚ್ಚು ಗೋಲು ಗಳಿಸಿದವರ ಪಟ್ಟಿಯಲ್ಲಿ ಜಾರೆಡ್ ಬೊರ್ಗೆಟ್ಟಿಯೊಂದಿಗೆ ಜಂಟಿ 2ನೇ ಸ್ಥಾನ
- ನಾಯಕ ಜೇವಿಯರ್ ಚಿಚರಿಟೋ ಹೆರ್ನಾಂಡೆಸ್ ದಾಖಲೆಯಿಂದ ಕೇವಲ 6 ಗೋಲುಗಳ ಅಂತರ
- 2006ರ ಬಳಿಕ ವಿಶ್ವಕಪ್ ಪಂದ್ಯವೊಂದರಲ್ಲಿ ಗರಿಷ್ಠ ಕೆಂಪು ಕಾರ್ಡ್‌ಗಳ ದಾಖಲೆ ಸಮೀಪ



2-1
ಗೋಲ್‌ನಿಂದ ಜೆಕ್ ಗಣರಾಜ್ಯ ವಿರುದ್ಧ ದಕ್ಷಿಣ ಕೊರಿಯಾ ಜಯ



59 ನೇ ನಿಮಿಷ: ಲಾಡಿಸ್ಲಾವ್ ಕ್ರೇಜ್ಚಿ (ಜೆಕ್ ಗಣರಾಜ್ಯ)

67 ನೇ ನಿಮಿಷ: ಹ್ವಾಂಗ್ ಇನ್-ಬಿಯೊಮ್ (ದಕ್ಷಿಣ ಕೊರಿಯಾ)

80 ನೇ ನಿಮಿಷ ಓ ಹ್ಯೋನ್-ಗ್ಯು (ದಕ್ಷಿಣ ಕೊರಿಯಾ)

ಗುಡಲಹಾರಾ ಕ್ರೀಡಾಂಗಣದಲ್ಲಿ ಹಾಜರಾತಿ
44,985

ಕೊರಿಯಾ ಶುಭಾರಂಭ

ಶುಕ್ರವಾರ ಬೆಳಗ್ಗೆ ನಡೆದ ಪಂದ್ಯದಲ್ಲಿ ದಕ್ಷಿಣ ಕೊರಿಯಾ ಗೆಲುವಿನೊಂದಿಗೆ ತನ್ನ ಅಭಿಯಾನ ಆರಂಭಿಸಿದೆ. ಗುಡಲಹಾರಾ ಕ್ರೀಡಾಂಗಣದಲ್ಲಿ ನಡೆದ ಎ' ಗುಂಪಿನ ಪಂದ್ಯದಲ್ಲಿ ಜೆಕ್ ಗಣರಾಜ್ಯವನ್ನು 2–1 ಗೋಲುಗಳಿಂದ ಮಣಿಸಿದೆ. ಮೊದಲಾರ್ಧದಲ್ಲಿ ಎರಡೂ ತಂಡಗಳು ನಿರೀಕ್ಷಿತ ಪ್ರದರ್ಶನ ನೀಡದ ಕಾರಣ ಪ್ರೇಕ್ಷಕರಿಂದ ಅಸಮಾಧಾನ ವ್ಯಕ್ತವಾಯಿತು. ಆದರೆ ಎರಡನೇ ಅರ್ಧದಲ್ಲಿ ಪಂದ್ಯ ರೋಚಕ ತಿರುವು ಪಡೆದುಕೊಂಡಿತು. 59ನೇ ನಿಮಿಷದಲ್ಲಿ ನಾಯಕ ಲಾಡಿಸ್ಲಾವ್ ಕ್ರೇಜ್ಚಿ ಹೆಡರ್ ಮೂಲಕ ಗೋಲು ಬಾರಿಸಿ ಜೆಕ್ ಗಣರಾಜ್ಯಕ್ಕೆ ಮುನ್ನಡೆ ತಂದುಕೊಟ್ಟರು. ಆದರೆ ಕೊರಿಯಾ ಶೀಘ್ರವೇ ತಿರುಗೇಟು ನೀಡಿತು.

ಕಂಬ್ಯಾಕ್

67ನೇ ನಿಮಿಷದಲ್ಲಿ ಹ್ವಾಂಗ್ ಇನ್-ಬಿಯೊಮ್ ಇಬ್ಬರು ರಕ್ಷಣಾ ಆಟಗಾರರನ್ನು ಮಣಿಸಿ ಅದ್ಭುತ ಗೋಲು ಬಾರಿಸಿ ಸಮಬಲ ಸಾಧಿಸಿದರು. ನಂತರ 80ನೇ ನಿಮಿಷದಲ್ಲಿ ಬಲಭಾಗದಿಂದ ನೀಡಿದ ಅವರ ನಿಖರ ಪಾಸ್ ಅನ್ನು ಓ ಹ್ಯೋನ್-ಗ್ಯು ಗೋಲಾಗಿ ಪರಿವರ್ತಿಸಿ ದಕ್ಷಿಣ ಕೊರಿಯಾಗೆ ಗೆಲುವು ತಂದುಕೊಟ್ಟರು. ನಾಯಕ ಸನ್ ಹ್ಯೂಂಗ್-ಮಿನ್ ನೇತೃತ್ವದ ದಕ್ಷಿಣ ಕೊರಿಯಾ ಪಂದ್ಯದ ಬಹುತೇಕ ಸಮಯ ಬಾಲ್ ಮೇಲಿನ ಹಿಡಿತ ಕಾಯ್ದುಕೊಂಡು ಹೆಚ್ಚು ಆಕ್ರಮಣಕಾರಿ ಆಟವಾಡಿತು. ಆರಂಭದಲ್ಲೇ ಹಲವು ಅವಕಾಶಗಳು ಸಿಕ್ಕರೂ ಅವುಗಳನ್ನು ಗೋಲಾಗಿ ಪರಿವರ್ತಿಸಲು ವಿಫಲವಾಗಿತ್ತು.

- ದಕ್ಷಿಣ ಕೊರಿಯಾ ಫಿಫಾ ಶ್ರೇಯಾಂಕ 25
- ಜೆಕ್ ಗಣರಾಜ್ಯ ಫಿಫಾ ಶ್ರೇಯಾಂಕ 38
- 2006ರ ಬಳಿಕ ಜೆಕ್ ಗಣರಾಜ್ಯದ ಮೊದಲ ವಿಶ್ವಕಪ್ ಪಂದ್ಯ

ಉಪಾಂತ್ಯಕ್ಕೆ ಪಿ. ವಿ. ಸಿಂಧು

• **ಸಿಡ್ನಿ(ಆಸ್ಟ್ರೇಲಿಯಾ):** ತೈವಾನ್‌ನ ಚೆನ್ ಸು ಯು ವಿರುದ್ಧದ ಪಂದ್ಯದಲ್ಲಿ ಪ್ರಾಬಲ್ಯ ಸಾಧಿಸಿರುವ ಅನುಭವಿ ಶಟ್ಲರ್ ಪಿ.ವಿ. ಸಿಂಧು ಪ್ರತಿಷ್ಠಿತ ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಸೆಮಿಫೈನಲ್‌ಗೇರಿದ್ದಾರೆ.

ಬ್ಯಾಡ್ಮಿಂಟನ್ ಲೋಕ ಅದರಲ್ಲೂ ಟೂರ್‌ಗಳಲ್ಲಿ ಭಾರತೀಯರದ್ದೇ ಪಾರುಪತ್ಯ. ಹಿಂದಿನ ಟೂರ್ನಿಗಳಿಂದ ನೋಡುತ್ತಾ ಬಂದರೆ ಪ್ರತಿ ಕೂಟದಲ್ಲಿ ಒಬ್ಬರಾದರೂ ಭಾರತೀಯ ಶಟ್ಲರ್ ಮಿಂಚುತ್ತಾರೆ. ಈ ಬಾರಿ ಸಿಂಧು ಅವರದ್ದು. ನಾಕೌಟ್ ಪಂದ್ಯಾವಳಿಯ ಪ್ರತಿಯೊಂದು ಪಂದ್ಯದಲ್ಲೂ ಸಿಂಧು ಅಸಾಮಾನ್ಯ ಪ್ರದರ್ಶನದೊಂದಿಗೆ ಎದುರಾಳಿಗಳ ಮೇಲೆ ಸ್ಪಷ್ಟ ಪ್ರಾಬಲ್ಯ ಸಾಧಿಸುತ್ತಾ ಬಂದಿದ್ದಾರೆ. ಶುಕ್ರವಾರದಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅವರು ತೈವಾನ್‌ನ ಚೆನ್ ಸು ಅವರನ್ನು ಎದುರಿಸಿದ್ದರು. ಮೊದಲನೇ ಸೆಟ್‌ನಿಂದ ಹಿಡಿದು ಗೆಲುವಿನ ನಾಗಾಲೋಟ ಬಾರಿಸುವವರೆಗೂ ಅವರಿ ಒಲಿಂಪಿಕ್ಸ್ ವಿಜೇತೆ ಎದುರಾಳಿಗೆ ಅವಕಾಶವೇ ನೀಡಲಿಲ್ಲ.

ದೊಡ್ಡ ಮುನ್ನಡೆಯೊಂದಿಗೆ ಪಂದ್ಯ ಪ್ರಾರಂಭಿಸಿದ ಸಿಂಧು ನಿರಂತರ ಪಾಯಿಂಟ್‌ಗಳನ್ನು ಗಳಿಸುತ್ತಾ ಬಂದರು. ಸ್ಮ್ಯಾಷ್, ಪಾಯಿಂಟ್ ಮತ್ತು ಡ್ರಾಪ್‌ಗಳ ಮೂಲಕ ಮೊದಲನೇ ಸೆಟ್ ಅನ್ನು 21–6ರಿಂದ ಗೆದ್ದು ಆತ್ಮವಿಶ್ವಾಸ ಗೆದ್ದರು. ಎರಡನೇ ಸೆಟ್‌ನಲ್ಲಿ ಮತ್ತೆ ಅದೇ ಪ್ರಾಬಲ್ಯ ಮುಂದುವರಿಸುತ್ತಾ ಸಿಂಧು 21–9ರಿಂದ ಗೆದ್ದುಕೊಂಡರು. ಮುಂದಿನ ಪಂದ್ಯದಲ್ಲಿ ಅವರು ಅಕಾನೆ ಯಮಗುಚಿ ಅವರನ್ನು ಎದುರಿಸಲಿದ್ದಾರೆ.

ಮತ್ತೊಂದು ಪಂದ್ಯದಲ್ಲಿ ಭಾರತೀಯ ಉದಯೋನ್ಮುಖ ಆಟಗಾರ್ತಿ ತನ್ವಿ ಶರ್ಮಾ ಅವರನ್ನು ಅಕಾನೆ ಅವರು ಸೋಲಿಸಿದರು. ನಿರೀಕ್ಷಿತ ಪ್ರದರ್ಶನದೊಂದಿಗೆ ಕ್ವಾರ್ಟರ್ ಫೈನಲ್‌ಗೇರಿದ್ದ ಅವರು, ನೇರ ಸೆಟ್‌ಗಳಿಂದಲೇ ಸೋತರು. ತೀವ್ರ ಹೋರಾಟ ನಡೆಸಿದ್ದಾದರೂ ಮೊದಲನೇ ಸೆಟ್‌ನಲ್ಲಿ 21–14 ಮತ್ತು ಎರಡನೇ ಸೆಟ್‌ನಲ್ಲೂ 21–14ರಿಂದ ಸೋಲು ಹೊರ ನಡೆದರು.

- ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್
- ಚೆನ್ ವಿರುದ್ಧ ನೇರ ಸೆಟ್‌ಗಳ ಗೆಲುವು
- ತನ್ವಿ ಶರ್ಮಾಗೆ ಸೋಲು



ಅಫ್ಘಾನ್ ಬೇಟೆಗೆ ಭಾರತ ಸಿದ್ಧ

• **ಧರ್ಮಶಾಲಾ:** ಬಹು ದಿನಗಳ ನಂತರ ಏಕದಿನ ಅಂಗಳಕ್ಕೆ ಭಾರತ ಇಳಿಯಲಿದೆ. ವಿರಾಟ್ ಕೊಹ್ಲಿ ಇಲ್ಲದಿದ್ದರೂ ರೋಹಿತ್ ಶರ್ಮಾ ಅವರ ಬ್ಯಾಟಿಂಗ್‌ಗಾಗಿ ಕಾತರದಿಂದ ಕಾದು ಕೂತಿರುವ ಸಮಸ್ತ ಭಾರತೀಯ ಕ್ರಿಕೆಟ್ ಅಭಿಮಾನಿಗಳು ಶನಿವಾರದಂದು ಅಫ್ಘಾನಿಸ್ತಾನ ಮತ್ತು ಭಾರತ ನಡುವೆ ನಡೆಯಲಿರುವ ಮೊದಲ ಏಕದಿನ ಪಂದ್ಯವನ್ನು ಕಣ್ತುಂಬಿಕೊಳ್ಳಲಿದ್ದಾರೆ.

ಟೆಸ್ಟ್ ಸೋತಿರುವ ಅಫ್ಘಾನಿಸ್ತಾನ ತಂಡವು ಧರ್ಮಶಾಲಾದ ಹಿಮಗಳ ಕೆಳಗಿರುವ ಕ್ರೀಡಾಂಗಣದಲ್ಲಿ ಭಾರತ ತಂಡವನ್ನು ಶನಿವಾರದಂದು ಎದುರಿಸಲಿದೆ. ಗೆಲ್ಲುವ ಪ್ರಯತ್ನಕ್ಕೆ ಕೈಹಾಕುವ ತಯಾರಿಗಳನ್ನು ಮಾಡಲಿದೆ. ಇತ್ತ ಶುಭಮನ್ ಗಿಲ್ ನಾಯಕತ್ವದಲ್ಲಿ ಕಣಕ್ಕಿಳಿಯಲಿರುವ ಭಾರತ ರೋಹಿತ್ ಶರ್ಮಾ ಅವರೊಂದಿಗೆ ಆಡಲಿದೆ.

- ಇಂದು ಮೊದಲ ಏಕದಿನ ಪಂದ್ಯ
- ರೋಹಿತ್ ಲಭ್ಯ

ಐಪಿಎಲ್ ಮುಗಿದ ನಂತರ ಭಾರತ ತಂಡದ ಆಟಗಾರರು ಇದೇ ಮೊದಲ ಬಾರಿಗೆ ನೀಲಿ ಜೆರ್ಸಿಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈಗಾಗಲೇ ಟೆಸ್ಟ್ ಪಂದ್ಯವನ್ನು ಏಕಪಕ್ಷೀಯವಾಗಿ ಗೆದ್ದಿರುವ ಶುಭಮನ್ ಪಡೆಗೆ ಇದು ಮುಂದಿನ ವರ್ಷ ನಡೆಯಲಿರುವ ಏಕದಿನ ವಿಶ್ವಕಪ್ ತಯಾರಿ ಭಾಗವಾಗಿರಲಿದೆ. ಈಗಿನಿಂದಲೇ ಶುರು ಮಾಡಿಕೊಂಡು ಉತ್ತಮ ಅಭ್ಯಾಸ ನಡೆಸುವ ನಿಟ್ಟಿನಲ್ಲಿ ಭಾರತ ಗಟ್ಟಿಯಾಗುತ್ತಿದೆ. ಒಂದೇ ಮಾದರಿಯಲ್ಲಿ ಉಳಿದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಈ ಪಂದ್ಯಗಳಲ್ಲಿ ಆಡುವ ನಿರೀಕ್ಷೆಯಿತ್ತು. ಆದರೆ ವಿರಾಟ್ ಕೊಹ್ಲಿ ಗಾಯದಿಂದಾಗಿ ಪಂದ್ಯದಲ್ಲಿ ಕಾಣಿಸಿಕೊಳ್ಳುತ್ತಿಲ್ಲ. ರೋಹಿತ್ ಶರ್ಮಾ ಮಾತ್ರ ತಂಡದ ಭಾಗವಾಗಿರಲಿದ್ದಾರೆ.



ಪಂದ್ಯದ ವಿವರ

- ಯಾವಾಗ: ಶನಿವಾರ
- ಎಲ್ಲಿ: ಧರ್ಮಶಾಲಾ
- ಸಮಯ: ಮಧ್ಯಾಹ್ನ 1:30
- ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್ ಸ್ಟಾರ್

ಕ್ರಿಕೆಟ್‌ಗೆ ಕೇನ್ ವಿಲಿಯಮ್ಸನ್ ವಿದಾಯ

• **ದುಬೈ:** ನ್ಯೂಜಿಲೆಂಡ್ ತಂಡದ ಮಾಜಿ ನಾಯಕ, ಪ್ರಬಲ ಬ್ಯಾಟರ್ ಕೇನ್ ವಿಲಿಯಮ್ಸನ್ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ.

ಇಂಗ್ಲೆಂಡ್‌ನೊಂದಿಗೆ ನಡೆಯುತ್ತಿರುವ 3 ಟೆಸ್ಟ್ ಪಂದ್ಯಗಳ ಸರಣಿ ನಡುವೆಯೇ ಅವರು ದಿಢೀರ್ ನಿರ್ಧಾರ ಕೈಗೊಂಡಿದ್ದು, ತಕ್ಷಣದಿಂದಲೇ ಆಡಲಾರೆ ಎನ್ನುವ ಮೂಲಕ ತಮ್ಮ 16 ವರ್ಷದ ಕ್ರಿಕೆಟ್ ಪಯಣಕ್ಕೆ ತೆರೆ ಎಳೆದಿದ್ದಾರೆ. 2010ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಪದಾರ್ಪಣೆ ಮಾಡಿರುವ ಅವರು, ಬ್ಯಾಟಿಂಗ್‌ನಲ್ಲಿ ಮಿಂಚಿ ತಮ್ಮದೇ ದಂತಕಥೆ ಬರೆದಿದ್ದಾರೆ. ಈ ಬಗ್ಗೆ ಶುಕ್ರವಾರ ಘೋಷಿಸುತ್ತಾ ಕೇನ್, ನಾನು ನಿವೃತ್ತಿ ಬಗ್ಗೆ ಕಳೆದ ಹಲವು ದಿನಗಳಿಂದಲೂ ಯೋಚಿಸುತ್ತಿದ್ದೇನೆ. ಈಗ ಕಾಲ ಬಂದಿದೆ. ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ನನ್ನ ದೇಶವನ್ನು ಪ್ರತಿನಿಧಿಸಿದ್ದು ನನ್ನ ಭಾಗ್ಯ ಮತ್ತು ಹೆಮ್ಮೆ. ಬೆಂಬಲಿಸಿದ ಎಲ್ಲರಿಗೂ ಧನ್ಯವಾದ ಎಂದು ತಮ್ಮ ಸಾಮಾಜಿಕ ಜಾಲತಾಣದ ಖಾತೆಗಳಲ್ಲಿ ಬರೆದುಕೊಂಡಿದ್ದಾರೆ.

ಕೇನ್ ಸಾಧನೆ: ಟೆಸ್ಟ್‌ನಲ್ಲಿ ಈಗಾಗಲೇ 9515 ರನ್




ಗಳಿಸಿರುವ ಅವರು, ನ್ಯೂಜಿಲೆಂಡ್ ಪರ ಅತಿ ಹೆಚ್ಚು ರನ್ ಗಳಿಸಿದ ಆಟಗಾರ ಎಂಬ ದಾಖಲೆ ಮಾಡಿದ್ದಾರೆ. ಏಕದಿನದಲ್ಲಿ 7256 ರನ್‌ಗಳನ್ನು ಬಾರಿಸಿದ್ದು ಅಲ್ಲಿಯೂ ಈ ಸಾಧನೆ ಮಾಡಿದ ನಾಲ್ಕನೇ ಆಟಗಾರ ಎಂಬ ದಾಖಲೆ ಮಾಡಿದ್ದಾರೆ. ನಾಯಕತ್ವ ವಿಚಾರಕ್ಕೆ ಬಂದರೆ ಕೇನ್ 40 ಟೆಸ್ಟ್ ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ್ದಾರೆ. ಅದರಲ್ಲಿ 22 ಪಂದ್ಯಗಳಲ್ಲಿ ನ್ಯೂಜಿಲೆಂಡ್ ಗೆದ್ದಿದೆ. 10 ಸೋಲು, 8 ಪಂದ್ಯಗಳು ಡ್ರಾಗೊಂಡಿವೆ. ಏಕದಿನ ಮತ್ತು ಟಿ20 ವಿಚಾರಕ್ಕೆ ಬಂದರೆ ಅವರು, 2016ರ ಟಿ20 ವಿಶ್ವಕಪ್, 2019ರ ಏಕದಿನ ಪಂದ್ಯಾವಳಿಯಲ್ಲಿ ತಮ್ಮ ತಂಡವನ್ನು ಫೈನಲ್‌ಗೇರಿಸಿದ್ದಲ್ಲದೆ ಕೂಟವನ್ನು ಗೆಲ್ಲುವ ಎಲ್ಲಾ ಪ್ರಯತ್ನಗಳನ್ನು ಮಾಡಿದರು.

ವಿರಾಟ್ ಸೇರಿದಂತೆ ಹಲವರಿಂದ ಶುಭಾಶಯ

ನಿವೃತ್ತಿ ಪಡೆದ ಕೇನ್ ವಿಲಿಯಮ್ಸನ್ ಅವರಿಗೆ ವಿರಾಟ್ ಕೊಹ್ಲಿ ಸೇರಿದಂತೆ ಹಾಲಿ–ಮಾಜಿ ಕ್ರಿಕೆಟಿಗರೆಲ್ಲರೂ ಶುಭಾಶಯ ತಿಳಿಸಿದ್ದಾರೆ. ಪೋಸ್ಟ್ ಒಂದನ್ನು ಮಾಡಿರುವ ಕೊಹ್ಲಿ, ಎದುರಾಳಿಯಿಂದ ಸ್ನೇಹದ ವರೆಗೆ ನಮ್ಮ ಬಾಂಧವ್ಯ ಬೆಳೆಯಿತು. ನೀವು ಮಾಡುವ ಬ್ಯಾಟಿಂಗ್ ನೋಡುವುದೇ ಉತ್ಸಾಹ. ಮೈದಾನದಲ್ಲಿ ಒಬ್ಬರಿಗೊಬ್ಬರನ್ನು ಎದುರಿಸುವ ಕ್ಷಣಗಳಿಂದ ಹಿಡಿದು ಆಟದ ಬಗ್ಗೆ ನಮಗಿರುವ ನೋಟದ ಬಗ್ಗೆ ಹಂಚಿಕೊಳ್ಳುವವರೆಗೂ ನಮ್ಮ ಒಡನಾಟ ಬೆಳೆದಿತ್ತು. ನೀವು ಮಾಡಿದ ಸಾಧನೆ ಸ್ಮರಣೀಯ ಎಂದು ಬರೆದುಕೊಂಡಿದ್ದಾರೆ.

ಪದಬಂಧ

- ರಾಜಾ ಸಂಗಮೇಶ ಹಿರೇಮಠ



6013

ಎಡದಿಂದ ಬಲಕ್ಕೆ
1.ಹನುಮನ ಆಗ್ರಹದಿಂದ ಸಿಕ್ಕ ಕೃಪೆ (4)
3.ಕದ ಒಳಗೊಂಡ ಹೂವಿನ ಪರಾಗ (4)
5.ಬಣ್ಣದ ಲೋಹದ ತಗಡು ಇದು (3)
6.ಬೆಟ್ಟದ ಕಡೆಗೆ ಎಸೆದ ಆಭರಣ (2)
8.ಶರ–ನಿಜ ಒಳಗೊಂಡ ಕತ್ತಲಿನೊಡೆಯ (4)
10.ಅತಿಯ ನಡುವೆ ಅಡಗಿದ ದುರ್ದೆಶೆ (4)
12.ಜಗದಗಲ ವ್ಯಾಪಿಸಿದ ನೀರು (2)
14.ಕನದ ನಡುವೆ ಬೆಸ್ತನಿದ್ದಾನೆ (3)
15.ಈ ತರಹದಲ್ಲಿ ತೋರಿದ ತನ್ಮಯತೆ (4)
16.ಗುಂಪಿನ ಒಡೆಯನಾಗಿ ವಿನಾಯಕ (4)

ಮೇಲಿನಿಂದ ಕೆಳಕ್ಕೆ
1.ಪಾಶವನ್ನು ಕಳಿಸುವ ಕ್ರಿಯೆ (4)
2.ಪಠ ಒಳಗೊಂಡ ಬಾಲ್ಯ (4)
3.ಪ್ರಾಣಿ–ಪಕ್ಷಿಗಳಲ್ಲಿ ಎಳೆಯದು (2)
4.ಗಣಿತದಲ್ಲಿ ಹತ್ತನೆಯ ಒಂದು ಭಾಗ (4)
7.ಕೊಬ್ಬಿದ ಗಂಡುಕೋತಿಯಿದು (3)
9.ರಜ ಕಡೆಯಲ್ಲಿರುವ ತಾವರೆ (3)
10.ತಡೆಯಿಲ್ಲದೆ–ಎಡಬಿಡದೆ ಎಂಬರ್ಥದ ಶಬ್ದ (4)
11.ಕಲವನ್ನೊಳಗೊಂಡ ದೊಡ್ಡ ರಾಜ್ಯಸಭೆ (4)
13.ವಶ ಮಾಡಿಕೊಂಡದ್ದು ತುಂಬ ಸ್ವಲ್ಪ (4)
14.ನಡೆದ ಅಥವಾ ಕಲ್ಪಿತವಾದ ಸಂಗತಿ (2)

6012 ಉತ್ತರ

ಎಡದಿಂದ ಬಲಕ್ಕೆ:
1.ಜೀತ 2.ಕದನ 4.ಪಂಪ
6.ನಡೆಮಾಡ 8.ಗುಲಗಂಜಿ
12.ಮರಸುತ್ತು
14.ಹಸುತನ 15.ನೆಗೆ
16.ಪಡಗು 17.ಬಿಲ

ಮೇಲಿನಿಂದ ಕೆಳಕ್ಕೆ :
1.ಜೀವನದಿ 2.ಕರಂಡ
3.ನಲುಗು 5.ಪರಾಜಿತ
7.ಮಾತುಹಾರಿಸು
9.ಲಕಲಕಿಸು
10.ಜಮಖಾನೆ
11.ಫನಫಲ 13.ಹರಿತ್ತು
14.ಪರಗು

ಕಿರುಸುದ್ದಿ

ಟ್ರಾಫಿಕ್ ಪೊಲೀಸರ ಕಾರ್ಯಕ್ಷಮತೆ ವೃದ್ಧಿಗೆ ಒತ್ತು

• **ಬೆಂಗಳೂರು:** ಸಂಚಾರ ಸುರಕ್ಷತೆ, ಸಂಚಾರ ನಿಯಮಗಳ ಕಟ್ಟುನಿಟ್ಟಿನ ಜಾರಿ ಮತ್ತು ಟ್ರಾಫಿಕ್ ಪೊಲೀಸರ ಕಾರ್ಯಕ್ಷಮತೆ ವೃದ್ಧಿಗೆ ಒತ್ತು ನೀಡುವ ನಿಟ್ಟಿನಲ್ಲಿ ಕಾರ್ಯಯೋಜನೆ ರೂಪಿಸಲಾಗುವುದು ಎಂದು ಗೃಹ ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು. ಶುಕ್ರವಾರ ಬೆಂಗಳೂರು ಸಂಚಾರ ಪೊಲೀಸ್ ನಿರ್ವಹಣಾ ಕೇಂದ್ರಕ್ಕೆ ಭೇಟಿ ನೀಡಿದ ಅವರು, ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಪರಿಣಾಮಕಾರಿಯಾಗಿ ಟ್ರಾಫಿಕ್ ನಿರ್ವಹಣೆ ಮಾಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಲಾಗುವುದು ಎಂದು ಹೇಳಿದರು.



ಹೊಸಕೋಟೆಯ ಮಲೆನ ವೇಟೆಯಲ್ಲಿರುವ ಶ್ರೀ ಮಹಾಲಕ್ಷ್ಮಿ ದೇವಾಲಯದಲ್ಲಿ ಆಷಾಡ ಮಾಸದ ಕೃಷ್ಣ ಪಕ್ಷದ ದ್ವಾದಶಿ ಶುಕ್ರವಾರದಂದು ದೇವರಿಗೆ ವಿಶೇಷ ಅಲಂಕಾರ ಪೂಜೆ ನೆರವೇರಿಸಲಾಯಿತು. ಭಕ್ತಾದಿಗಳು ದೇವರ ದರ್ಶನ ಪಡೆದು ಪೂಜೆಯಲ್ಲಿ ಭಾಗವಹಿಸಿದರು.

ಉದ್ಯಮಿ ಭಾರತ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ನಂದೀಶ್‌ಗೌಡ ಅಭಿಮತ

ಹೊಸ ಉದ್ಯಮಿಗಳಿಗೆ ಉತ್ತೇಜನ ಅತ್ಯಗತ್ಯ

• **ನೆಲಮಂಗಲ:** ಉದ್ಯಮಿಗಳನ್ನು ಒಗ್ಗೂಡಿಸಿ ಅವರಿಗೆ ವ್ಯವಹಾರ ನೀಡುವ ಜತೆ ಹೊಸ ಉದ್ಯಮಿಗಳಿಗೆ ಬಲ ತುಂಬುವ ಕೆಲಸವನ್ನು ಉದ್ಯಮಿ ಭಾರತ ಸಂಸ್ಥೆ ಮಾಡಲಿದೆ ಎಂದು ಉದ್ಯಮಿ ಭಾರತ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ನಂದೀಶ್‌ಗೌಡ ತಿಳಿಸಿದರು. ನಗರದ ವಿವಿಎಸ್ ಕಲ್ಯಾಣಮಂಟಪದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಉದ್ಯಮಿ ಭಾರತ ತಾಲೂಕು ಘಟಕ ಆರಂಭದ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಬೆಂಗಳೂರುಸುತ್ತಮುತ್ತಲಪ್ರದೇಶದಲ್ಲಿಉದ್ಯಮಕ್ಕೆ ಬಹುದೊಡ್ಡ ಅವಕಾಶವಿದೆ. ಈ ಪ್ರದೇಶದಲ್ಲಿ ವಿದೇಶದ ಉದ್ಯಮಿಗಳು, ಕಂಪನಿಗಳೇ ಹೆಚ್ಚು ವ್ಯವಹಾರ ಮಾಡುತ್ತಿದ್ದಾರೆ.ನಮ್ಮವರು ಸಂಪರ್ಕವಿಲ್ಲದೆ, ಬಂಡವಾಳವಿಲ್ಲದೆ, ಉದ್ಯಮ ಬೆಳೆಸುವ ಜ್ಞಾನವಿಲ್ಲದೆ, ಹೊಸಹೊಸ ಅನ್ವೇಷಣೆಗಳ ಬಗ್ಗೆಅರಿವಿಲ್ಲದೆ ಗ್ರಾಮ, ಹೋಬಳಿ, ತಾಲೂಕು,ಜಿಲ್ಲಾಮಟ್ಟಕ್ಕೆ ಮಾತ್ರ ಸೀಮಿತವಾಗಿರುತ್ತಾರೆ. ಅವರಿಗೆ ಒಂದುವೇದಿಕೆ ನೀಡಿ ಅವರನ್ನು ಒಗ್ಗೂಡಿಸಿದಾಗ ನಮ್ಮವರೇ ಬೆಳೆಯುವ ಅವಕಾಶ ಸಿಗುತ್ತದೆ. ಆ ನಿಟ್ಟಿನಲ್ಲಿ ಆರಂಭವಾಗಿರುವ ಉದ್ಯಮಿ ಭಾರತ ಉದ್ಯಮಿಜತೆ ಗ್ರಾಹಕ, ಉದ್ಯಮಿ ಜತೆ ಉದ್ಯಮಿ ಜತೆಗೂಡಿಸುವ ಕೆಲಸವನ್ನು ಮಾಡುತ್ತದೆ. ಉತ್ತಮ ವ್ಯವಹಾರ ವಿರುವ ಸಂಸ್ಥೆಗಳಿಗೆ ಸಾಲ ಸೌಲಭ್ಯನೀಡಲಾಗುತ್ತದೆ ಎಂದರು.

ಉದ್ಯಮಿ ಭಾರತ್ ತಾಲೂಕು ಅಧ್ಯಕ್ಷ ಸತೀಶ್ ಎನ್. ತಡಸೀಘಟ್ಟ ಮಾತನಾಡಿ, ಉದ್ಯಮಿ ಭಾರತ್ ಉದ್ಯಮಿಗಳಿಗೆ ಹೊಸ ಶಕ್ತಿ ಸಿಗುವುದರಲ್ಲಿ ಸಂಶಯವಿಲ್ಲ, ನಮ್ಮ ಭಾಗದ ಉದ್ಯಮಿಗಳೇ ನಮಗೆ ಪರಿಚಯವಿರುವುದಿಲ್ಲ, ಈ ವೇದಿಕೆ ಎಲ್ಲರ ಪರಿಚಯದ ಜತೆ ನಮ್ಮ ಉದ್ಯಮಕ್ಕೂ ಬಲವಾಗಿದೆ. ಪ್ರತಿಯೊಬ್ಬ ಉದ್ಯಮಿಯೂ ಈ ಸಂಸ್ಥೆಯ ಜತೆಗೂಡಿ ಮುನ್ನಡೆಸಿಕೊಂಡು ಸಾಗಬೇಕು ಎಂದರು.

ಸಂದರ್ಭದಲ್ಲಿ ನಗರಸಭೆ ಹೆಚ್ಚುವರಿ ಸದಸ್ಯ ಕೃಪಾನಂದ್, ಉದ್ಯಮಿ ಭಾರತ್ ಜಿಲ್ಲಾಧ್ಯಕ್ಷ ದೇವರಾಜು, ರಾಜ್ಯಸಮಿತಿ ಸದಸ್ಯರಾದ ಗಿರೀಶ್, ಪ್ರಸನ್ನ, ಕುಮಾರ್, ಹೋಬಳಿ ಪ್ರಮುಖ್ ಸುರೇಂದ್ರ, ಮಂಜುನಾಥ್, ಲಕ್ಷ್ಮೀನಾರಾಯಣ್, ಉದ್ಯಮಿಗಳಾದ ನಾಗರಾಜು, ಪೊನ್ನಪ್ಪ, ಹರೀಶ್, ಪೃಥ್ವಿರಾಜ್, ಕೆ.ಪಿ ಬ್ಯಗೇಶ್, ಎಚ್.ಜಿ ರಾಜು, ಕೆಂಪಣ್ಣ, ಚನ್ನಯ್ಯ, ಬೂದಿಹಾಳ್ ಕಿಟ್ಟಿಮನೋಜ್, ಬೆಟ್ಟಸ್ವಾಮಿ, ಮಹೇಶ್, ಎಸ್‌ಎಲ್‌ಎನ್ ಮೂರ್ತಿ, ಜಯರಾಮ್, ವಿಜಯ್, ಹನುಮಂತರಾಜು ಸೇರಿದಂತೆ ಮತ್ತಿತರರಿದ್ದರು.



ಯುವಕರಿಗೆ ಆದ್ಯತೆ

ಕಾಲೇಜು ಶಿಕ್ಷಣ ಪಡೆಯುವ ಅಥವಾ ಉದ್ಯಮ ಮಾಡಬೇಕು ಎನ್ನುವ ಯುವ ಸಮುದಾಯಕ್ಕೆ ಹೆಚ್ಚು ಆದ್ಯತೆ ನೀಡಲಾಗಿದೆ. ಆಸಕ್ತಿಯುಳ್ಳವರು ನಮ್ಮ ಜತೆ ಸದಸ್ಯರಾದರೆ ಉಚಿತ ತರಬೇತಿ ನೀಡಿ, ಉದ್ಯಮ ಆರಂಭಕ್ಕೆ ಶಕ್ತಿಯನ್ನು ಸಹ ನೀಡಲಾಗುತ್ತದೆ ಎಂದರು.

ಜಿಲ್ಲಾ ಯುವ ಅಧಿಕಾರಿ ಅರುಣಮಾ ಸಲಹೆ

ಮನೆಗೊಂದು ಮರ ಊರಿಗೊಂದು ವನ

• **ವಿಜಯಪುರ:** ವನಮಹೋತ್ಸವವು ಭಾರತದಲ್ಲಿ ಪ್ರತಿ ವರ್ಷ ಆಚರಿಸಲಾಗುವ ವಾರ್ಷಿಕ ಗಿಡ ನೆಡುವ ಚಳುವಳಿಯಾಗಿದೆ ಎಂದು ಜಿಲ್ಲಾ ಯುವ ಅಧಿಕಾರಿ ಅರುಣಮಾ ತಿಳಿಸಿರು.ಇವರು ಪಟ್ಟಣದ ಮೇಲಿರುವ ರಸ್ತೆಯ ಶ್ರೀ ಬಸವಕಲ್ಯಾಣ ಮಠದ ಆವರಣದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಮೇರಾ ಯುವ ಭಾರತ್ ,ಪಟ್ಟಣದ ರೂಬಿ ಆಂಗ್ಲ ಪ್ರೌಢಶಾಲೆ, ಎನ್.ಎಸ್.ಎಸ್ ಘಟಕ ಸಾಯಿ ಜ್ಞಾನಗಂಗಾ ಪದವಿ ಕಾಲೇಜು ಹಾಗೂ ವಿಕ್ಟರಿ ಯುವಕ ಸಂಘ ಇವರುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ವನಮಹೋತ್ಸವ ಕಾರ್ಯಕ್ರಮ ವನ್ನು ಉದ್ಘಾಟಿಸಿ ಮಾತನಾಡಿ ಪರಿಸರ ಸಂರಕ್ಷಣೆ ಮತ್ತು ಅರಣ್ಯೀಕರಣದ ಮಹತ್ವವನ್ನು ಸಾರುವ ಈ ಆಂದೋಲನವು ಭಾರತದಾದ್ಯಂತ ಲಕ್ಷಾಂತರ ಸಸಿಗಳನ್ನು ನೆಡುವ ಮೂಲಕ ನೈಸರ್ಗಿಕ ಸಮತೋಲನವನ್ನು ಕಾಪಾಡಲು ನೆರವಾಗುತ್ತದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಾಯಿ ಜ್ಞಾನಗಂಗಾ ಪದವಿ ಕಾಲೇಜಿನ ಪ್ರಾಂಶುಪಾಲ ಎಸ್. ಎಸ್. ಪ್ರದೀಪ ಮಾತನಾಡಿ, ವನ ಮಹೋತ್ಸವ ಎಂದರೆ ಅರಣ್ಯಗಳ ಹಬ್ಬ ಎಂದರ್ಥ. ನಗರೀಕರಣ ಮತ್ತು ಅರಣ್ಯನಾಶಕ್ಕೆ ಪ್ರತಿಯಾಗಿ ಪರಿಸರವನ್ನು ಸಂರಕ್ಷಿಸುವ ಉದ್ದೇಶದಿಂದ ಈ ಆಚರಣೆಯನ್ನು ರೂಪಿಸಲಾಗಿದೆ. ಇದು ಕೇವಲ ಮರಗಳನ್ನು ನೆಡುವುದಲ್ಲದೆ ಪ್ರತಿಯೊಬ್ಬರಲ್ಲೂ ಪ್ರಕೃತಿಯ ಬಗ್ಗೆ ಪ್ರೀತಿ ಮತ್ತು ಜವಾಬ್ದಾರಿಯನ್ನು ಬೆಳೆಸುವ ಒಂದು ಸುಂದರ ಅಭಿಯಾನವಾಗಿದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದ ಅಂಗವಾಗಿ 200 ವಿವಿಧ ರೀತಿಯ ಸಸಿಗಳನ್ನು ಬಸವಕಲ್ಯಾಣ ಮಠದ ಆವರಣ, ಕುಮಸಂದ್ರ ಗ್ರಾಮದ ವಿವಿಧೆಡೆ ಗಳಲ್ಲಿ ಹಾಗೂ ಕಾಲೇಜು ಆವರಣಗಳಲ್ಲಿ ಸಸಿಗಳನ್ನು ನೀಡಲಾಯಿತು ಮತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರಬಂಧ, ಭಾಷಣ ಹಾಗೂ ಚಿತ್ರಕಲಾ ಸ್ಪರ್ಧೆಗಳನ್ನು ಆಯೋಜಿಸಿ ಬಹುಮಾನಗಳನ್ನು ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ರಾಜ್ಯ ರಾಷ್ಟ್ರೀಯ ಯುವ ಯೋಜನೆಯ ರಾಜ್ಯ ಸಂಯೋಜಕ ಡಾ.ವಿ.ಪ್ರಶಾಂತ, ದೇವನಹಳ್ಳಿಯ ವೆಂಕಟೇಶ್ವರ ವಾಣಿಜ್ಯ ವಿದ್ಯಾ ಶಾಲೆಯ ಸಂಸ್ಥಾಪಕ ಪ್ರಾಂಶುಪಾಲ ಎನ್. ಪುಟ್ಟರಾಜು, ಸಾಯಿ ಜ್ಞಾನಗಂಗಾ ಪದವಿ ಕಾಲೇಜಿನ ಉಪನ್ಯಾಸಕ ಮುಬಾರಕ್, ಹೆಚ್.ಎಂ.ಅಂಬಿಕಾ,ಎಂ.ಚೈತ್ರ, ಡಿ.ಎನ್.ನಾಗೇಶ್,ಹೆಚ್.ಜಿ.ಹರೀಶ್,ಕೆ.ಎಂ.ನಾಗರಾಜು,ಬಿ.ಎಸ್.ಶರತ್, ಹಾಗೂ ರೂಬಿ ಆಂಗ್ಲ ಪ್ರೌಢಶಾಲೆಯ ಸಹ ಶಿಕ್ಷಕರಾದ ಜಿ.ಎಂ.ಬಿಂಬಿಕ, ಎ.ಎಮ್. ಗಾಯತ್ರಿ, ಎಸ್.ಎಂ. ಮಂಜುನಾಥ್, ಯುವ ಪದಾಧಿಕಾರಿಗಳಾದ ಬಿ.ಎಂ. ತರುಣ್, ಎನ್. ಸಿಂಧು, ಸಾಯಿ ಜ್ಞಾನಗಂಗಾ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಎನ್.ಎಸ್.ಎಸ್ ಸ್ವಯಂ ಸೇವಕರು, ರೂಬಿ ಪ್ರೌಢಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಗೂ ಪಟ್ಟಣದ ವಿವಿಧ ಯುವಕ ಸಂಘ ಯುವತಿ ಮಂಡಳಿಗಳ ಪದಾಧಿಕಾರಿಗಳು ಹಾಜರಿದ್ದರು.



ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಅಗತ್ಯ: ಸೋಮನಾಥ್

• **ಬೆಂಗಳೂರು:** ನಾವು ಪ್ರಶ್ನೆ ಕೇಳುವುದು ಮತ್ತು ಅದಕ್ಕೆ ಉತ್ತರ ಕಂಡುಕೊಳ್ಳುವುದು ಹೆಚ್ಚು ಅಗತ್ಯವಿದೆ. ಇದಕ್ಕಾಗಿ ಹೆಚ್ಚು ಓದಬೇಕು ಎಂದು ಇಸ್ರೋ ಮಾಜಿ ಅಧ್ಯಕ್ಷ ಡಾ. ಎಸ್. ಸೋಮನಾಥ್ ತಿಳಿಸಿದರು.

ಇಸ್ಕಾನ್ ಭಗವದ್ಗೀತೆಯನ್ನು ಆಧರಿಸಿದ ಏರ್ಪಡಿಸಿದ ವಿಶ್ವದ ಅತಿದೊಡ್ಡ ಮೌಲ್ಯ ಶಿಕ್ಷಣ ಸ್ಪರ್ಧೆಯ ರಾಷ್ಟ್ರೀಯ ಟಾಪರ್‌ಗಳಿಗೆ ಶೇಷಾದ್ರಿಪುರಂ ಇಸ್ಕಾನ್‌ನಲ್ಲಿ ಶುಕ್ರವಾರ ಆಯೋಜಿಸಿದ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಶ್ನೆ ಕೇಳುವುದು ಎಂದರೆ ಸುಖಾಸುಮ್ಮನೆ ಕೇಳಬೇಕೆಂದು ಕೇಳುವುದಲ್ಲ, ಬದಲಿಗೆ ವಿಷಯವನ್ನು ತಿಳಿದುಕೊಳ್ಳಲು ಪ್ರಶ್ನೆ ಮಾಡುವುದು ಅಗತ್ಯವಾಗಿದೆ. ವಿಶ್ವ ನಮಗೆ ಎರಡು ಪುಸ್ತಕಗಳನ್ನು ನೀಡಿದೆ. ಆಧ್ಯಾತ್ಮಿಕ ಚಿಂತನೆಗಳು ಒಂದಾದರೆ, ಇನ್ನೊಂದು ಪ್ರಕೃತಿ. ಒಂದು ಲಿಖಿತವಾಗಿದ್ದರೆ, ಇನ್ನೊಂದು ಅಲಿಖಿತವಾಗಿದೆ. ಆದರೆ, ಅದರಿಂದ ಅನುಭವ ಪಡೆದುಕೊಳ್ಳಬಹುದಾಗಿದೆ. ವಿಜ್ಞಾನವು ಈ ಪ್ರಕೃತಿಯ ಪ್ರಕ್ರಿಯೆಯಾಗಿದೆ. ಇದಕ್ಕೆ ಸಂಬಂಧಿಸಿ ಪ್ರಶ್ನೆ ಕೇಳುವ ಜೊತೆಗೆ ಅದಕ್ಕೆ ಉತ್ತರ ಕಂಡುಕೊಳ್ಳಬೇಕಿದೆ ಎಂದು ಹೇಳಿದರು.

ಜಗತ್ತಿನ ಸೃಷ್ಟಿಯಲ್ಲಿ ಮನುಷ್ಯರು ವಿಶೇಷ ಸೃಷ್ಟಿಯಲ್ಲ, ಬದುಕುಳಿಯುವ ಸಾಮರ್ಥ್ಯವೇ ಬುದ್ಧಿವಂತಿಕೆಯ ಮೊದಲ ಲಕ್ಷಣವಾಗಿದೆ. ಆದ್ದರಿಂದ ಪ್ರಕೃತಿಯಲ್ಲಿ ಆಗಿರುವ ಪ್ರತಿಯೊಂದು ವಿಕಸನವೂ ಬದುಕುಳಿಯುವ ಪ್ರಕ್ರಿಯೆಯಾಗಿದೆ. ನಾವು ನಮ್ಮ ಜೀವನದ ಪಯಣದಲ್ಲಿ ಪ್ರಕೃತಿಯಲ್ಲಿರುವ ಪ್ರತಿಯೊಂದನ್ನೂ ಗೌರವಿಸಬೇಕು ಎಂದು ತಿಳಿಸಿದರು.

ಇಸ್ಕಾನ್ ಪುಣೆಯ ಮುಕುಂದಾನಂದ ಪ್ರಭು ಉಪನ್ಯಾಸ ನೀಡಿ, ಭಗವದ್ಗೀತೆ ಎಂದರೆ ಕಠಿಣ ಪರಿಶ್ರಮ. ನಾವೆಲ್ಲರೂ ಸಮಯವನ್ನು ಹಾಳುಮಾಡದೇ ಮಾಡುವ ಕೆಲಸದಲ್ಲಿ ಪರಿಶ್ರಮ ಪಡಬೇಕು. ನಿರಂತರ ಕಲಿಕೆ ಅಗತ್ಯವಾಗಿದೆ. ಉತ್ತಮ ನಡತೆ ಮತ್ತು ಅರ್ಹತೆ ಇದ್ದರೆ ಅಂಥವರಿಗೆ ಯಶಸ್ಸು ಸಿಕ್ಕೇ ಸಿಗುತ್ತದೆ ಎಂದು ಹೇಳಿದರು.

ಶೇಷಾದ್ರಿಪುರಂ ಇಸ್ಕಾನ್‌ನ ಅಧ್ಯಕ್ಷ ಅನುಕೂಲ ಕೇಶವ ಪ್ರಭು ಮಾತನಾಡಿ, ಭಗವದ್ಗೀತೆ ಎಂದರೆ ಕೇವಲ ಹಿರಿಯರಿಗೆ ಸೀಮಿತವಾಗಿರುವುದಲ್ಲ, ಆಧುನಿಕ ಶಿಕ್ಷಣ ನಾವು ಹೇಗೆ ಬದುಕಬೇಕು ಎಂದು ಕಲಿಸಿದರೆ, ಭಗವದ್ಗೀತೆ ನಾವು ಹೇಗೆ ಜೀವಿಸಬೇಕು ಎಂಬುದನ್ನು ಕಲಿಸುತ್ತದೆ. ಮಕ್ಕಳು ಭಗವದ್ಗೀತೆಯನ್ನು ಓದುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. ಪ್ರತಿದಿನ ಒಂದು ಶ್ಲೋಕವನ್ನು ಓದಬೇಕು ಎಂದು ಕರೆ ನೀಡಿದರು.

ಭಾರತದಾದ್ಯಂತ 33 ಜಿಲ್ಲೆಗಳಿಂದ 1,44,000 ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಅದರಲ್ಲಿ ರಾಷ್ಟ್ರೀಯ ಟಾಪರ್‌ಗಳಿಗೆ ಸನ್ಮಾನಿಸಲಾಯಿತು.

ಮಾರ್ನಿಂಗ್ ಶೋ

ಕ್ಷಮೆಯಿರಲಿ ತಂದೆ
ತ್ಯಾಗಮಯಿ ತಂದೆಯ ಕಥೆ

ಮೂಗ್ ಸುರೇಶ್ ಕನ್ನಡ ಚಿತ್ರರಂಗದ ಜನಪ್ರಿಯ ಹಾಸ್ಯನಟರಲ್ಲಿ ಒಬ್ಬರು. ಅವರು 380ಕ್ಕೂ ಹೆಚ್ಚು ಕನ್ನಡ ಚಲನಚಿತ್ರಗಳಲ್ಲಿ ಹಾಗೂ ಅನೇಕ ಧಾರಾವಾಹಿಗಳಲ್ಲಿ ನಟಿಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದ್ದಾರೆ. ಅವರು ನಟನೆಯ ಜೊತೆಗೆ ನಿರ್ಮಾಪಕ ಮತ್ತು ನಿರ್ದೇಶಕರೂ ಆಗಿರುವ ಕ್ಷಮೆಯಿರಲಿ ತಂದೆ ಚಿತ್ರ ಶುಕ್ರವಾರ ತೆರೆಕಂಡಿದೆ, ಜೀವನದ ಅನುಭವಗಳಿಂದ ಪ್ರೇರಿತವಾದ ಕ್ಷಮೆ ಇರಲಿ ತಂದೆ ಚಿತ್ರಕ್ಕವರು ಆಕ್ಷನ್ ಕಟ್ ಹೇಳಿದ್ದಾರೆ. ಜತೆಗೆ ಬ್ರೋಕರ್ ಪಾತ್ರಕ್ಕೂ ಜೀವ ತುಂಬಿದ್ದಾರೆ.

ಸತ್ತು ಬದುಕಿ, ಸಾವಿನಲ್ಲಿ ಅಂತ್ಯವಾಗುವ ತ್ಯಾಗಮಯಿ ತಂದೆಯೊಬ್ಬನ ಕಥೆಯನ್ನು ಕ್ಷಮೆಯಿರಲಿ ತಂದೆ ಹೇಳುತ್ತದೆ. ನದಿ ದಂಡೆಯಲ್ಲಿ ತಂದೆಯ ಶ್ರಾದ್ಧ ಮಾಡುತ್ತಿರುವ ಮಗನ ದೃಶ್ಯದೊಂದಿಗೆ ಈ ಚಿತ್ರದ ಕಥೆ ತೆರೆದುಕೊಳ್ಳುತ್ತದೆ. ಆ ತಂದೆಯ ಹಿನ್ನೆಲೆ ಏನೆಂದು ನೋಡುತ್ತ ಹೋದಂತೆ ಅಲ್ಲಿ ಸಾಮಾನ್ಯ ಸರ್ಕಾರಿ ನೌಕರ ಶಿವಣ್ಣ(ಮಂಜುನಾಥ್ ಹೆಗ್ಡೆ)ನ ಸಂಸಾರ ಕಂಡುಬರುತ್ತೆ. ಸರಕಾರಿ ಕೆಲಸ ಮಾಡಿಕೊಂಡು ಜೀವನ ಸಾಗಿಸುವ ಶಿವಣ್ಣನ ಮಗ ಅಜಯ್(ಶ್ರೀಮಂತ) ಚೆನ್ನಾಗಿ ಓದಿಕೊಂಡಿದ್ದರೂ ಕೆಲಸವಿಲ್ಲದೆ ಸರಕಾರಿ ನೌಕರಿಗಾಗಿ ಹುಡುಕಾಟ ನಡೆಸಿರುತ್ತಾನೆ, ಇದರ ಮಧ್ಯೆ, ಮಗನಿಗೆ ಮದುವೆ ಮಾಡಲೆಂದು ಹೆಣ್ಣು ನೋಡಲು ಹೋದರೆ, ಅಲ್ಲೂ ಸರ್ಕಾರಿ ನೌಕರಿಯಲ್ಲಿರುವ ಹುಡುಗನಿಗೆ ಮಾತ್ರ ಹೆಣ್ಣು ಕೊಡುತ್ತೇವೆ ಎಂದು ಅವಮಾನಿಸುತ್ತಾರೆ. ಇದರಿಂದ ಮನನೊಂದ ಶಿವಣ್ಣ ತನ್ನ ಮಗನಿಗೆ ಹೇಗಾದರೂ ಮಾಡಿ ಸರ್ಕಾರಿ ಕೆಲಸ ಕೊಡಿಸಬೇಕೆಂದು ಹೈಯರ್ ಆಫೀಸರ್‌ಗೆ ಕೇಳಿದಾಗ, ಈಗಿನ ಪರಿಸ್ಥಿತಿಯಲ್ಲಿ ಸರ್ಕಾರಿ ಕೆಲಸ ಕೊಡಿಸೋದು ಅಸಾಧ್ಯ. ಹಾಗೇನಾದರೂ ಬೇಕೆಂದರೆ ಅದು ಅನುಕಂಪದ ಆಧಾರದ ಮೇಲೆ ಸಿಗಬೇಕು ಎಂದು ಹೇಳುತ್ತಾರೆ. ಇದರಿಂದ ಆಲೋಚನೆಗೊಳಗಾದ ಶಿವಣ್ಣನ ಮನದಲ್ಲಿ ಹಲವಾರು ಆಲೋಚನೆಗಳು ಬಂದುಹೋಗುತ್ತವೆ, ಮುಂದೆ ನಡೆಯೋ ಕಥೆಯಲ್ಲಿ ಆಕಸ್ಮಿಕ ತಿರುವೊಂದು ಎದುರಾಗಿ ಕಥೆಯ ದಿಕ್ಕನ್ನೇ ಬದಲಾಯಿಸಿಬಿಡುತ್ತದೆ, ಶಿವಣ್ಣ ಅಪಘಾತದಲ್ಲಿ ಸಾವಿಗೀಡಾಗುತ್ತಾನೆ. ನಂತರ ಅನುಕಂಪದ ಆಧಾರದ ಮೇಲೆ ಅಜಯ್‌ಗೆ ತಂದೆಯ ಕೆಲಸ ಸಿಗುತ್ತದೆ, ಸರ್ಕಾರಿ ಕೆಲಸವಿಲ್ಲವೆಂದು ತಿರಸ್ಕರಿಸಿದ ಹುಡುಗಿಯೊಂದಿಗೇ ಆತನ ಮದುವೆಯೂ ಆಗುತ್ತದೆ, ಹೀಗೇ ಶಿವಣ್ಣನ ಮಗ ಸಂತೋಷದಿಂದಿರುವ ಸಮಯದಲ್ಲಿ, ಬ್ರೋಕರ್ ಕೆಲಸ ಮಾಡುತ್ತಿದ್ದ ಮಂಜಣ್ಣ(ಮೂಗ್ ಸುರೇಶ್) ಬಹಳ ದಿನಗಳ ನಂತರ ಕಛೇರಿಗೆ ಆಗಮಿಸಿದಾಗ ಅಜಯ್ ಯಾರೆಂದು ವಿಚಾರಿಸುತ್ತಾನೆ, ಆತ ಶಿವಣ್ಣನ ಮಗ, ಶಿವಣ್ಣ ತೀರಿಕೊಂಡಿದ್ದಾನೆ ಎನ್ನುವ ವಿಷಯ ತಿಳಿದು ಅಜಯ್‌ಗೆ ಸಾಂತ್ವನ ಹೇಳುತ್ತಾನೆ. ಆದರೂ ಶಿವಣ್ಣನ ಸಾವಿನ ಬಗ್ಗೆ ಅನುಮಾನಗೊಂಡು ಅದರ ಜಾಡು ಹಿಡಿದು ಹೊರಡುತ್ತಾನೆ, ಆಗ ಅವನಿಗೆ ಶಿವಣ್ಣ ಬದುಕಿದ್ದಾನೆ ಎಂಬುದು ಗೊತ್ತಾಗುತ್ತದೆ, ಅದೇ ವಿಷಯ ಇಟ್ಟುಕೊಂಡು ತಂದೆ, ಮಗ ಇಬ್ಬರನ್ನೂ ಬ್ಲಾಕ್‌ಮೇಲ್ ಮಾಡುತ್ತ ಹಣದ ಬೇಡಿಕೆ ಇಟ್ಟು ಹಣ ಪಡೆಯುತ್ತ ಹೋಗುತ್ತಾನೆ, ಮುಂದೆ ಈ ವಿಷಯ ಸರ್ಕಾರಕ್ಕೆ ಗೊತ್ತಾಗುತ್ತಾ,? ಸರ್ಕಾರಿ ದಾಖಲೆಗಳಲ್ಲಿ ಸತ್ತುಹೋಗಿದ್ದ ಶಿವಣ್ಣ ಬದುಕಿದ್ದಾದರೂ ಹೇಗೆ ? ಅಜಯ್‌ಗೆ ಸಿಕ್ಕಿದ್ದ ಸರ್ಕಾರಿ ನೌಕರಿ ಏನಾಯ್ತು ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರವೇ ಕ್ಷಮೆಯಿರಲಿ ತಂದೆ. ಶಿವಣ್ಣನಾಗಿ ಹಿರಿಯ ನಟ ಮಂಜುನಾಥ ಹೆಗ್ಡೆ ಭಾವಪೂರ್ಣ ಅಭಿನಯ ನೀಡಿದ್ದಾರೆ, ಮಗನಾಗಿ ಶ್ರೀಮಂತ ಸಿಕ್ಕ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಹಾಡುಗಳಿಲ್ಲದಿದ್ದರೂ ಕೊನೆಯವರೆಗೂ ನೋಡಿಸಿಕೊಂಡು ಹೋಗುವ ಸಾಮರ್ಥ್ಯ ಈ ಚಿತ್ರಕ್ಕಿದೆ. ಚಿತ್ರದ ಸಂಗೀತ, ಛಾಯಾಗ್ರಹಣ ಉತ್ತಮವಾಗಿದೆ, ಒಮ್ಮೆ ಥೇಟರಿಗೆ ಹೋಗಿ ನೋಡಬಹುದು,



ಚಿತ್ರ ವಿಮರ್ಶೆ

ಮದ್ದಾನೆ ವೀರಯೋಧನ ಸುತ್ತ

ಮದ್ದಾನೆ ಎಂದ ಕೂಡಲೇ ಇದು ಆನೆಗಳ ಕುರಿತಾದ ಚಿತ್ರ ಎಂದುಕೊಳ್ಳಬೇಕಿಲ್ಲ, ಹೌದು, ಈ ಶುಕ್ರವಾರ ಮದ್ದಾನೆ ಎಂಬ ಚಿತ್ರವೊಂದು ತೆರೆಕಂಡಿದೆ, ನಮ್ಮ ದೇಶ ಕಾಯುವ ವೀರ ಯೋಧನ ಸಾಹಸ ಗಾಥೆಯನ್ನು ಹೇಳುವ ಕಥಾಹಂದರವನ್ನು ಈ ಚಿತ್ರ ಒಳಗೊಂಡಿದೆ, ನಮಗೆ ಅನ್ನ ನೀಡುವವನು ರೈತನಾದರೆ ನಮ್ಮನ್ನೆಲ್ಲ ವಿರೋಧಿಗಳಿಂದ ರಕ್ಷಣೆ ಮಾಡುವವನು ಸೈನಿಕ, ಅಂಥಾ ಎಟಿಎಸ್ ಯೋಧನ ಸಾಹಸದ ಕಥೆಯನ್ನು ಮದ್ದಾನೆ ಚಿತ್ರದಲ್ಲಿ ನಿರ್ದೇಶಕ ರಾಜ್ ಶರಣ್ ಅವರು ಹೇಳುವ ಪ್ರಯತ್ನ ಮಾಡಿದ್ದಾರೆ, ಈ ಹಿಂದೆ 2 ಚಿತ್ರಗಳನ್ನು ನಿರ್ದೇಶಿಸಿದ್ದ ಕೆ.ರಾಜ್‌ಶರಣ್ ಅವರ ನಿರ್ದೇಶನದಲ್ಲಿ ಈ ಚಿತ್ರ ಅಷ್ಟೇ ಕುತೂಹಲಕರವಾಗಿ ಮೂಡಿಬಂದಿದೆ. ಎಲ್.ಎಂ. ಫಿಲಂಸ್ ಅಡಿ ಲತಾಮೂರ್ತಿ ಅವರು ಈ ಚಿತ್ರಕ್ಕೆ ಬಂಡವಾಳ ಹೂಡಿ ನಿರ್ಮಿಸಿದ್ದಾರೆ. ಇವರ ಜತೆ ಸಹ-ನಿರ್ಮಾಪಕರಾಗಿ ಡಾ.ಮಾರುತಿ ಕೈಜೋಡಿಸಿದ್ದಾರೆ. ಎಟಿಎಸ್ ಯೋಧನಾಗಿ ನಟ ಆರ್ಯ ಅವರು ಉತ್ತಮ ಅಭಿನಯ ನೀಡಿದ್ದಾರೆ, ಅಲ್ಲದೆ ಚಿತ್ರದ ನಿರ್ಮಾಪಕಿಯೂ ಆದ ಲತಾಮೂರ್ತಿ ಅವರು ನಾಯಕನ ತಾಯಿಯ ಪಾತ್ರದಲ್ಲಿ ಭಾವಪೂರ್ಣ ಅಭಿನಯ ನೀಡಿದ್ದಾರೆ. ಚಿತ್ರ ನೋಡಿದ ಪ್ರೇಕ್ಷಕರು ಸಿನಿಮಾ ಬಗ್ಗೆ ಉತ್ತಮ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ನಮ್ಮ ಯುವಜನತೆಯಲ್ಲಿ ದೇಶಪ್ರೇಮದ ಕಿಚ್ಚು ಹಚ್ಚುವಂಥ ಇಂಥ ಚಿತ್ರಗಳು ಹೆಚ್ಚು ನಿರ್ಮಾಣವಾಗಿ ತೆರೆಗೆ ಬರಬೇಕು ಎಂಬ ಮಾತನ್ನು ಹೇಳುತ್ತಿದ್ದಾರೆ,

ಆನೆಯ ಹಾಗೆ ಸೌಮ್ಯವಾಗಿದ್ದ ನಾಯಕ ಮದ್ದಾನೆಯಂತೆ ಹೇಗೆ ಬದಲಾಗುತ್ತಾನೆ ? ಅದಕ್ಕೆ ಏನು ಕಾರಣ ಎಂಬುದನ್ನು ಈ ಚಿತ್ರದಲ್ಲಿ ನಿರ್ದೇಶಕರು ಸೂಕ್ತ ನಿದರ್ಶನಗಳ ಮೂಲಕ ಹೇಳುವ ಪ್ರಯತ್ನ ಮಾಡಿದ್ದಾರೆ. ನಾಯಕನಿಗೆ ಆನೆ, ಮದ್ದಾನೆ ಹೀಗೆ ಎರಡು ರೀತಿಯ ಪಾತ್ರವಿದೆ. ಮೈಸೂರು, ಮಂಡ್ಯ, ಬೆಂಗಳೂರು, ಚಿತ್ರದುರ್ಗ ಹಾಗೂ ಉತ್ತರ ಕರ್ನಾಟಕದ ಸುತ್ತಮುತ್ತಲ ತಾಣಗಳಲ್ಲಿ ಈ ಚಿತ್ರವನ್ನು ಸೆರೆಹಿಡಿಯಲಾಗಿದೆ, ನಾಯಕ ಆರ್ಯ ಈ ಚಿತ್ರದಲ್ಲಿ ಎಟಿಎಸ್ ಯೋಧನಾಗಿ ದೇಶವಿರೋಧಿಗಳ ವಿರುದ್ಧ ಹೋರಾಡುವ ಯುವಕನ ಪಾತ್ರವನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರ್ವಹಿಸಿದ್ದಾರೆ. ದೇಶಭಕ್ತಿ, ಲವ್ ಸ್ಟೋರಿ, ಫ್ಯಾಮಿಲಿ ಸೆಂಟಿಮೆಂಟ್‌ನಂಥ ಎಲ್ಲ ಎಂಟರ್‌ಟೈನಿಂಗ್ ಅಂಶಗಳೂ ಈ ಚಿತ್ರದಲ್ಲಿದ್ದು ಫ್ಯಾಮಿಲಿ ಪ್ಯಾಕೇಜ್ ಥರ ಚಿತ್ರ ಮೂಡಿಬಂದಿದೆ. ನಾಗಭೂಷಣ್ ಪೂಜಾರ್ ಅವರ ಕ್ಯಾಮೆರಾ ವರ್ಕ್, ಪ್ರಸನ್ನ ಭೋಜಶೆಟ್ಟರ್ ಅವರ ಸಂಗೀತ ಸಂಯೋಜನೆ ಮದ್ದಾನೆಗೆ ಗಜಬಲ ನೀಡಿದೆ,

ಅನಿರುಧ್ ಶಾಸ್ತ್ರಿ, ಅಜಯ್ ವಾರಿಯರ್, ರಶ್ಮಿ ಶ್ರೀನಿವಾಸ್ ಜತೆ ಪ್ರಸನ್ನ ಭೋಜ ಶೆಟ್ಟರ್ ಅವರೂ ದನಿಯಾಗಿರುವ ಮೂರೂ ಹಾಡುಗಳು ಉತ್ತಮವಾಗಿ ಮೂಡಿಬಂದಿವೆ. ವೀಕೆಂಡ್‌ನಲ್ಲಿ ಇಡೀ ಫ್ಯಾಮಿಲಿ ಜತೆ ಹೋಗಿ ನೋಡಲು ಮದ್ದಾನೆ ಉತ್ತಮ ಆಯ್ಕೆ.



ಮೃತ್ಯುದೇವತೆ
ಕಾಮಾಂಧರಿಗೆ ಪಾಠ

▸ ಸತ್ಯಮೂರ್ತಿ

ಹೆಣ್ಣಿಗೆ ಬೆಲೆ ಕೊಡೋ ಹುಡುಗರನ್ನು ನೋಡಿದ್ದೇನೆ, ಹೆಣ್ಣಿಗೆ ಬೆಲೆ ಕಟ್ಟೋ ಹುಡುಗರನ್ನು ನೋಡಿದ್ದೇನೆ, ಹೆಣ್ಣನ್ನು ಅರ್ಥ ಮಾಡ್ಕೊಳ್ಳೋ ಹುಡುಗರನ್ನು ನೋಡಿದ್ದೇನೆ, ಹೆಣ್ಣನ್ನು ಅರ್ಥದಲ್ಲೇ ಬಿಟ್ಟು ಹೋಗೋ ಹುಡುಗರನ್ನು ನೋಡಿದ್ದೇನೆ, ಆದರೆ ಇವರ ಮನಸ್ಥಿತಿ ಕೊಳೆತು ಕೊಳಚೆಯಲ್ಲಿ ಮುಳುಗಿಹೋಗಿದೆ,

ಮೇಲಿನ ಪದಪುಂಜಗಳನ್ನು ಅರ್ಥಮಾಡಿಕೊಂಡಾಗ ನಮ್ಮ ಮನದಲ್ಲಿ ಒಂದು ಚಿತ್ರಣ ಮೂಡುತ್ತೆ, ಹೆಣ್ಣು ಬರೀ ಭೋಗದ ವಸ್ತುವಲ್ಲ, ಆಕೆ ನಮಗೆಲ್ಲ ಜನ್ಮದಾತೆ, ಮಮತಾಮಯಿ, ಸ್ನೇಹಮಯಿ, ಅಂಥ ಸಹನಾಮಯಿಯನ್ನು ಕೆಣಕಬೇಡಿ, ಆಕೆಗೆ ಗೌರವ ಕೊಡಿ, ನಂಬಿದರೆ ಆಕೆ ನಮಗಾಗಿ ತನ್ನ ಜೀವವನ್ನೇ ಕೊಡಲು ಹಿಂಜರಿಯುವುದಿಲ್ಲ, ಆದರೆ ಆಕೆಯನ್ನು ಕೆಣಕಿದರೆ ಮಾತ್ರ ಉಗ್ರರೂಪಿಯಾಗುತ್ತಾಳೆ, ದುಷ್ಟ ಕಾಮುಕರಿಗೆ ಮೃತ್ಯುದೇವತೆಯಾಗುತ್ತಾಳೆ, ಶುಕ್ರವಾರ ತೆರೆಕಂಡಿರುವ ಮೃತ್ಯುದೇವತೆ ಚಿತ್ರದ ಕಾನ್ಸೆಪ್ಟ್ ಇದು. ನವ ನಿರ್ದೇಶಕ ನವೀನ್ ಮಹದೇವ್ ಅವರು ಇಂಥದ್ದೊಂದು ಎಳೆಯ ಮೇಲೆ ಚಿತ್ರಕಥೆ ಹೆಣೆದು ಕನ್ನಡ ಪ್ರೇಕ್ಷಕರಿಗೆ ಮೃತ್ಯುದೇವತೆ ಚಿತ್ರದ ಮೂಲಕ ಮನರಂಜನೆಯ ಜತೆಗೆ ಸಂದೇಶವನ್ನೂ ಹೇಳಲು ಪ್ರಯತ್ನಿಸಿದ್ದಾರೆ.

ತಮ್ಮ ಕಾಮತೃಷೆ ತೀರಿಸಿಕೊಳ್ಳಲು ಸುಂದರವಾದ ಯುವತಿಯರನ್ನು ತಾವು ಸಹೃದಯರೆಂದು ನಂಬಿಸಿ ತಮ್ಮ ಮೋಸದ ಬಲೆಗೆ ಬೀಳಿಸಿಕೊಳ್ಳುವ ಶ್ರೀಮಂತ ಯುವಕರಿಗೆ ತಕ್ಕ ಪಾಠ ಕಲಿಸುವ ಯುವತಿಯ ಕಥೆಯನ್ನವರು ರೋಚಕವಾಗಿ ತೆರೆಮೇಲೆ ತಂದಿದ್ದಾರೆ. ಡಿಲೆವರಿ ಕೆಲಸ ಮಾಡಿಕೊಂಡಿರುವ ಆರತಿ(ಸಾರಿಕಾರಾವ್), ದೀಪಾ(ಡಯಾನಾ) ಗೆಳತಿಯರು. ಆದರೆ ಇಬ್ಬರ ಮನಸ್ಥಿತಿ ತೀರಾ ವಿಭಿನ್ನ, ದೀಪಾ ಜೀವನವನ್ನು ಹಗುರವಾಗಿ ತೆಗೆದುಕೊಂಡವಳಾದರೆ, ಆರತಿಗೆ ದೇವರು, ದೈವದ ಮೇಲೆ ಭಯ, ಭಕ್ತಿ ಜಾಸ್ತಿ, ಶೀಲವನ್ನು ಹಾಗೇ ಕಾಪಾಡಿಕೊಂಡು ಬಂದವಳು, ಅಷ್ಟೇ ಧೈರ್ಯವಂತೆ, ಸಾಹಸಿ ಕೂಡ, ಇವರ ಬಾಯ್‌ಫ್ರೆಂಡ್ ಕಿಶೋರ್(ಮಾಹೀನ್ ಕುಬೇರ್) ಹಾಗೂ ಅನುಷ್( ), ಅದರಲ್ಲಿ ಕಿಶೋರ್‌ಗೆ ಹೆಣ್ಣಿನ ಚಪಲ ಜಾಸ್ತಿ, ಅನುಷ್ ಗೆಳತಿ ಆರತಿ ಮೇಲೆ ಇವನ ಕಣ್ಣು, ಸ್ನೇಹಿತೆ ದೀಪಾ ಮೂಲಕ ಆರತಿಯನ್ನು ಮಾದೇಶ್ವರ ಬೆಟ್ಟದ ತಪ್ಪಲಲ್ಲಿರುವ ಫಾರಂ ಹೌಸ್‌ಗೆ ಟ್ರಿಪ್ ಬರಲು ಒಪ್ಪಿಸುತ್ತಾರೆ, ಮೊದಲು ಒಪ್ಪದ ಆರತಿ ಮಾದೇಶ್ವರನ ದರ್ಶನ ಮಾಡಬಹುದೆಂಬ ಕಾರಣಕ್ಕೆ ಗೆಳತಿಜತೆ ಬರಲು ಒಪ್ಪಿಕೊಳ್ಳುತ್ತಾಳೆ, ಹಾಗೂ ಹೀಗೂ ಗೆಳತಿಯರಿಬ್ಬರನ್ನೂ ಫಾರಂ ಹೌಸ್‌ಗೆ ಕರೆತಂದ ಕಿಶೋರ್ ಹಾಗೂ ಅನುಷ್, ತಮ್ಮ ಗೆಳತಿಯರನ್ನು ಎಕ್ಸ್‌ಚೇಂಜ್ ಮಾಡಿಕೊಳ್ಳಲು ನಿರ್ಧರಿಸುತ್ತಾರೆ. ಅವರ ಈ ನಿರ್ಧಾರ ಮುಂದೆ ನಡೆಯುವ ಅನಾಹುತಗಳಿಗೆ ನಾಂದಿ ಹಾಡುತ್ತದೆ, ಸಮಾಜದಲ್ಲಿ ಹೀಗೆ ಅನೇಕ ಹೆಣ್ಣುಮಕ್ಕಳು ಪುರುಷರ ಬಣ್ಣದ ಮಾತುಗಳಿಗೆ ಮರುಳಾಗಿ ತಮ್ಮ ಶೀಲ ಕಳೆದುಕೊಳ್ಳುತ್ತಾರೆ. ಅದರಲ್ಲಿ ತಿರುಗಿ ಬೀಳುವವರು ಬೆರಳೆಣಿಕೆಯಷ್ಟು ಮಾತ್ರ.

ಆ ದುಷ್ಟರ ವಿರುದ್ಧ ತಿರುಗಿಬೀಳುವ ಆರತಿ ಯಾವರೀತಿ ಅವರನ್ನು ಮಟ್ಟ ಹಾಕುತ್ತಾಳೆ, ಅವರಿಗೆ ಮೃತ್ಯುದೇವತೆಯಾಗುತ್ತಾಳೆ ಎಂದು ನಿರ್ದೇಶಕ ನವೀನ್ ಮಹದೇವ್ ಕುತೂಹಲಕರ ಕಥೆಯೊಂದಿಗೆ ನಿರೂಪಿಸಿದ್ದಾರೆ, ಇದರ ಜತೆ ಬೆಟ್ಟದ ಮಡಿಲ್ಲಿರುವ ನಾಟಿಕೋಳಿ ಮಾದೇಶ(ನವೀನ್ ಮಹದೇವ್), ಆತನ ತಾಯಿ(ವಿನಯ ಪ್ರಸಾದ್) ಹಾಗೂ ಮಾವನ ಮಗಳು ಸಂಧ್ಯಾ(ಹಿಮಶ್ರೀ) ಇವರ ಸುತ್ತ ನಡೆಯುವ ಕಥೆಯೂ ಸಾಗುತ್ತದೆ, ಎರಡು ಟ್ರ್ಯಾಕ್‌ನಲ್ಲಿ ಸಾಗುವ ಕಥೆ ಒಂದು ಹಂತದಲ್ಲಿ ಲಿಂಕ್ ತೆಗೆದುಕೊಂಡು ಒಟ್ಟಿಗೇ ಸಾಗುತ್ತದೆ, ಚಿತ್ರದ ಕಾನ್ಸೆಪ್ಟ್ ಚೆನ್ನಾಗಿದ್ದರೂ, ನಿಧಾನಗತಿಯ ನಿರೂಪಣೆ ಪ್ರೇಕ್ಷಕರ ಸಹನೆ ಪರೀಕ್ಷಿಸುವಂತಿದೆ, ನಾಯಕಿ ಸಾರಿಕಾರಾವ್, ಖಳನಾಯಕನಾಗಿ ಮಾಹೀನ್ ಉತ್ತಮ ಅಭಿನಯ ನೀಡಿದ್ದಾರೆ. ಕಾಮಿಡಿ ಹಾಗೂ ನೆಗೆಟಿವ್ ರೋಲ್‌ನಲ್ಲಿ ನವೀನ್ ಮಹದೇವ್ ಮಿಂಚಿದ್ದಾರೆ, ನಟಿ ಹಿಮಶ್ರೀ ಸಿಕ್ಕ ಅವಕಾಶದಲ್ಲಿ ಲವಲವಿಕೆಯ ಅಭಿನಯದಿಂದ ಪ್ರೇಕ್ಷಕರ ಮನದಲ್ಲುಳಿಯುತ್ತಾರೆ. ವಿನಯಪ್ರಸಾದ್ ಪಾತ್ರ ತುಂಬಾ ಸ್ಪೆಷಲ್ ಆಗಿದೆ, ಇನ್ನು ದೇವಿಯ ಹಾಡು ಸ್ಫೂರ್ತಿ ತುಂಬಿದರೆ, ನಮ್ಮಾವ ಮಾದೇವ ಹಾಡು ಸದಾ ಗುನುಗುವಂತಿದೆ, ಕ್ಯಾಮೆರಾ ವರ್ಕ್ ಉತ್ತಮವಾಗಿದೆ,



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26